ಬಹುಮುಖೀಯ ಶಿಲ್ಪ ಸಾರ್ವಭೌಮ

# ಎ. ಕಿರಣ್ ಸುಬ್ಬಯ್ಯ

ಲೇಖಕರು

## ಎನ್. ಬಿ. ಕಾವೇರಪ್ಪ


**ಕರ್ನಾಟಕ ಶಿಲ್ಪಕಲಾ ಅಕಾಡೆಮಿ**

**ಮೇಲ್ಮನೆ, ಕನ್ನಡ ಭವನ**
**ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨**

**Bahumukkheeya Shilpa Sarvabhowma**
A. KIRAN SUBBAIAH

*A Monograph Written by :*

**N.B. KAVERAPPA**
Senior Artist & Chief Convener, Bharani Art Gallery, M-1198,
3rd Main, 6th Cross, Vivekananda Nagar, MYSURU-570023., M : 9448554221

*Published by :*

**SMT. INDRAMMA H.V.**
Registrar, Karnataka Shilpakala Academy
Kannada Bhavana, J.C. Road, BANGALURU-560 002.

First Edition : 2015
Copywrites : Author
Pages : viii + 72 + photo pages 20 = 100
Price : ` **100/-**
Copies : 1000

*Cover*
**Sculpture** - A. Kiran Subbaiah
Concept - N.B. Kaverappa
Book Conceived & Designed by the Author

*Printed at*
**Ila Mudrana,** Bengaluru - 560 026, Ph : 080-26757159

**ಬಹುಮುಖೀಯ ಶಿಲ್ಪ ಸಾರ್ವಭೌಮ**
ಎ. ಕಿರಣ್ ಸುಬ್ಬಯ್ಯ

**ಲೇಖಕರ ಕುರಿತು**
**ಎನ್. ಬಿ. ಕಾವೇರಪ್ಪ**
ಹಿರಿಯ ಕಲಾವಿದ ಮತ್ತು ಮುಖ್ಯ ಸಂಚಾಲಕರು, ಭರಣಿ ಆರ್ಟ್ ಗ್ಯಾಲರಿ, ಎಂ–೧೧೯೮, ೩ನೇ ಮುಖ್ಯರಸ್ತೆ,
೬ನೇ ಅಡ್ಡರಸ್ತೆ, ವಿವೇಕಾನಂದನಗರ, ಮೈಸೂರು – ೫೭೦ ೦೨೩, ಮೊ : ೯೪೪೮೫ ೫೪೨೨೧

**ಪ್ರಕಾಶಕರು**

**ಶ್ರೀಮತಿ ಇಂದ್ರಮ್ಮ ಹೆಚ್.ವಿ.**
ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

ಮೊದಲ ಮುದ್ರಣ : ೨೦೧೫
ಹಕ್ಕುಗಳು : ಲೇಖಕರವು
ಪುಟಗಳು : viii + ೭೨ + ಛಾಯಾಚಿತ್ರಗಳು ೨೦ + ೧೦೦
ಬೆಲೆ : ` **೧೦೦/–**
ಪ್ರತಿಗಳು : ೧೦೦೦

ರಕ್ಷಾಪುಟ ವಿನ್ಯಾಸ : ಎ. ಕಿರಣ್ ಸುಬ್ಬಯ್ಯ
ಕಲ್ಪನೆ : ಎನ್.ಬಿ. ಕಾವೇರಪ್ಪ
ಪುಟಗಳ ವಿನ್ಯಾಸ : ಲೇಖಕರದು

ಮುದ್ರಣ

**ಇಳಾ ಮುದ್ರಣ,** ಬೆಂಗಳೂರು – ೫೬೦ ೦೨೬, ದೂರವಾಣಿ : ೦೮೦–೨೬೭೫೭೧೪೯

**ಸಾಹಿತ್ಯ ಸಲಹಾ ಸಮಿತಿ**

**ಪ್ರಧಾನ ಸಂಪಾದಕರು**
**ಶ್ರೀ ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ**
ಅಧ್ಯಕ್ಷರು, ಕರ್ನಾಟಕ ಶಿಲ್ಪಕಲಾ ಅಕಾಡೆಮಿ

**ಸದಸ್ಯರು**
**ಶ್ರೀ ಎಲ್. ಶಿವಲಿಂಗಪ್ಪ,** ಮೈಸೂರು
**ಶ್ರೀ ಕುಮಾರ್ ವೈ.,** ದಾವಣಗೆರೆ
**ಶ್ರೀ ವಿ.ಕೆ. ಚಿದಾನಂದ,** ಧಾರವಾಡ

# ಅಧ್ಯಕ್ಷರ ನುಡಿ

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಸಮಕಾಲೀನ ಶಿಲ್ಪಕಲಾ ಕ್ಷೇತ್ರದಲ್ಲಿ ಸಾಧನೆ ಮಾಡಿದಂತಹ ನಾಡಿನ ಹಿರಿಯ ಶಿಲ್ಪಿಗಳ ಪುಸ್ತಕವನ್ನು ಹೊರತರುವ ಯೋಜನೆಯಡಿ ಮೈಸೂರಿನ ಹೆಸರಾಂತ ಸಮಕಾಲೀನ ಶಿಲ್ಪ ಕಲಾವಿದರಾದ ಶಿಲ್ಪಿ ಶ್ರೀ ಎ. ಕಿರಣ್ ಸುಬ್ಬಯ್ಯ ಅವರ ಜೀವನ ಮತ್ತು ಸಾಧನೆ ಎಂಬ ಪುಸ್ತಕವನ್ನು ಹೊರತರಲು ನಿರ್ಧರಿಸಿದೆ. ಈ ಸಂಬಂಧದಲ್ಲಿ ಕರ್ನಾಟಕ ದೃಶ್ಯಕಲಾ ಕ್ಷೇತ್ರದಲ್ಲಿ ತನ್ನದೇ ಆದಂತಹ ಹೆಸರು ಮಾಡಿರುವ ಮೈಸೂರಿನವರೇ ಆದ ಶ್ರೀ ಎನ್.ಬಿ. ಕಾವೇರಪ್ಪ ಅವರನ್ನು ಅಕಾಡೆಮಿಯು ಕೋರಿದಾಗ ಅವರು ತುಂಬು ಮನಸ್ಸಿನಿಂದ ಒಪ್ಪಿ ಶ್ರೀಯುತರ ಪುಸ್ತಕವನ್ನು ಬರೆದು ಪುಸ್ತಕಕ್ಕೆ ಒಂದು ರೂಪವನ್ನು ಕೊಟ್ಟಿರುತ್ತಾರೆ. ಅವರಿಗೆ ನಾನು ಹಾಗೂ ಅಕಾಡೆಮಿಯು ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮೂಲತಃ ಶಿಲ್ಪವು ತ್ರಿಮಾನದ್ದಾಗಿರುವುದರಿಂದ ಎಲ್ಲ ದಿಕ್ಕುಗಳಿಂದಲೂ ನೋಡುವಂತಿರಬೇಕು ಎನ್ನುವ ಕಲ್ಪನೆಯಿದೆ. ಹಾಗಿದ್ದೂ ನಮ್ಮ ಬಹುತೇಕ ಶಿಲ್ಪಿಗಳು ಮುಂಭಾಗಕ್ಕೆ ನೀಡುವ ಪ್ರಾಧಾನ್ಯವನ್ನು ಉಳಿದ ಭಾಗಗಳಿಗೆ ನೀಡುವುದು ಅಪರೂಪ. ಆದರೆ ಈ ಶಿಲ್ಪದ ನಿಜ ಕಲ್ಪನೆಗೆ ವಿಶಿಷ್ಟ ರೀತಿಯಲ್ಲಿ ಸ್ಪಂದಿಸುತ್ತಿರುವವರು ಶ್ರೀ ಎ.ಕಿರಣ್ ಸುಬ್ಬಯ್ಯ ಅವರು. ಶ್ರೀಯುತರು ಮೂಲತಃ ಕೊಡವ ಸಮುದಾಯದವರಾದರೂ ನಮ್ಮ ಸಾಂಪ್ರದಾಯಿಕ ಹಾಗೂ ಸಮಕಾಲೀನ ಶಿಲ್ಪಗಳಲ್ಲಿ ತೊಡಗಿಸಿಕೊಂಡು ಅಪಾರ ಮೆಚ್ಚುಗೆಯ ಕೃತಿಗಳ ನಿರ್ಮಾಣದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ನೂರಾರು ಶಿಲಾ ಶಿಲ್ಪಗಳನ್ನು ರಚಿಸಿದ್ದು, ಈ ಶಿಲ್ಪಗಳಲ್ಲಿ ದ್ವಿಮುಖ, ತ್ರಿಮುಖ, ಚತುರ್ಮುಖ ಹಾಗೂ ಪಂಚಮುಖ ಶಿಲ್ಪಗಳನ್ನು ನೋಡಿದಾಗ ಈ ಪ್ರತಿಯೊಂದು ದಿಕ್ಕಿನಲ್ಲಿ ವಿಭಿನ್ನ ಮುಖಗಳು ಕಂಡುಬರುತ್ತವೆ. ಸಾಂಪ್ರದಾಯ ಶಿಲ್ಪಗಳಲ್ಲಿನ ಅಂಶಗಳನ್ನು ಆಧುನಿಕ ನೆಲೆಯಲ್ಲಿ ದುಡಿಸಿಕೊಳ್ಳುವ ಆಶಯದ ಶ್ರೀಯುತರು ಬಹುದಿಕ್ಕಿನ ಶಿಲ್ಪಗಳ ದೃಷ್ಟಿಯಿಂದ

ಗಮನಾರ್ಹರಾಗಿದ್ದಾರೆ. ಶ್ರೀಯುತರ ಗ್ಯಾಲರಿಗೆ ಸ್ವತಃ ನಾನೇ ಭೇಟಿ ನೀಡಿದಾಗ ಅವರ ಕಲಾಕೃತಿಗಳನ್ನು ಕಂಡು ಆಶ್ಚರ್ಯಚಕಿತನಾದೆ. ನಂತರದಲ್ಲಿ ಅವರ ಆಧುನಿಕ ಶಿಲ್ಪಕಲಾ ಲೋಕವು ಮರೀಚಿಕೆಯಾಗುವ ಬದಲು ಇಂದಿನ ಯುವ ಪೀಳಿಗೆಗೆ ನೆರವಾಗಲೆಂದು ಇವರ ಜೀವನ ಮತ್ತು ಸಾಧನೆಯ ಪುಸ್ತಕದ ಮುದ್ರಣ ಕಾರ್ಯ ಕೈಗೆತ್ತಿಕೊಳ್ಳಲಾಯಿತು. ಈ ಪುಸ್ತಕವು ಶಿಲ್ಪಕಲಾಕ್ಷೇತ್ರಕ್ಕೆ ಒಂದು ಸುಂದರ ಕೊಡುಗೆಯಾಗಿ ಮಾರ್ಪಡುತ್ತದೆ ಎಂಬ ಭಾವನೆ ಮನದಲ್ಲಿದೆ. ಸಮಕಾಲೀನ ಶಿಲ್ಪ ಕಲಾವಿದರಾದ ಶಿಲ್ಪಿ ಶ್ರೀ ಎ. ಕಿರಣ್ ಸುಬ್ಬಯ್ಯ ಅವರ ಪುಸ್ತಕವನ್ನು ಕಲಾಭಿಮಾನಿಗಳು ಬಹಳ ಆತ್ಮೀಯವಾಗಿ ಸ್ವಾಗತಿಸುತ್ತಾರೆ ಎಂಬ ಭರವಸೆ ಇದೆ. ಪುಸ್ತಕದ ಲೇಖಕರಾದ ಶ್ರೀ ಎನ್.ಬಿ. ಕಾವೇರಪ್ಪ ಅವರಿಗೆ ಮತ್ತೊಮ್ಮೆ ಅಭಿನಂದನೆಗಳು. ಈ ಪುಸ್ತಕದ ಮುದ್ರಣಕ್ಕೆ ಸಹಕರಿಸಿದ ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀಮತಿ ಇಂದ್ರಮ್ಮ.ಹೆಚ್.ವಿ. ಅವರಿಗೂ ಅಕಾಡೆಮಿಯ ಸಿಬ್ಬಂದಿಗಳಿಗೂ, ಈ ಪುಸ್ತಕವನ್ನು ಅಂದವಾಗಿ ಮುದ್ರಣ ಮಾಡುತ್ತಿರುವ ಮಾಲಿಕರು, ಇಳಾ ಮುದ್ರಣ, ಬೆಂಗಳೂರು ಇವರಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

**ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ**
ಅಧ್ಯಕ್ಷರು
ಕರ್ನಾಟಕ ಶಿಲ್ಪಕಲಾ ಅಕಾಡೆಮಿ

# ಸಂಪಾದಕೀಯ ಲೇಖನ

ಮೈಸೂರಿನ ಬಂಬೂಬಜಾರ್‌ನಲ್ಲಿರುವ ಕಿರಣ್ ಸುಬ್ಬಯ್ಯನವರ ಶಿಲ್ಪ ಕಲಾಗ್ಯಾಲರಿ ನೋಡಿದಾಗ ನಾನು ಇದುವರೆಗೂ 45 ವರ್ಷಗಳಿಗಿಂತ ಮಿಗಿಲಾಗಿ ಬೆಂಗಳೂರಿನಲ್ಲಿ ನಡೆದಿರುವ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಚಿತ್ರಕಲಾ ಶಿಬಿರ, ಮತ್ತು ಶಿಲ್ಪ ಶಿಬಿರ ಮತ್ತು ಪ್ರದರ್ಶನಗಳನ್ನು ನೋಡಿ ಪತ್ರಿಕೆಗಳಿಗೆ ಬರೆದಿದ್ದೇನೆ, ಅವರೊಡನೆ ಚರ್ಚಿಸಿದ್ದೇನೆ. ಅವರು ಮಾಡಿರುವ ಶಿಲ್ಪಕ್ಕೂ ಅವರು ಕೊಡುವ ವಿವರಕ್ಕೂ ಸಂಬಂಧವಿಲ್ಲದಂತಿರುವುದನ್ನು ಸಹ ಕಂಡಿದ್ದೇನೆ. ಕೊನೆಗೆ ಅಂತಹ ಶಿಲ್ಪಗಳನ್ನು ಕುರಿತು ವಿಮರ್ಶಾತ್ಮಕವಾಗಿ ಬರೆದದ್ದು ಉಂಟು.

ಆದರೆ ಕಿರಣ್ ಸುಬ್ಬಯ್ಯನವರ ಶಿಲ್ಪಗಳು ಎಂತಹವರಿಗೂ ಅರ್ಥವಾಗುವಂತಿವೆ. ಆನಂದಿಸುತ್ತಾ ಇರಬಹುದು. ಅಂದ ಮಾತ್ರಕ್ಕೆ ನಮ್ಮ ದೇವತಾಮೂರ್ತಿಗಳು ಒಂದೇ ನಮೂನೆಯಲ್ಲಿರುವ ವ್ಯಾಳಿ, ಪ್ರಭಾವಳಿ, ಪೀಠ, ಅಭಯ ಮತ್ತು ವರದಹಸ್ತ ಒಳಗೊಂಡಂತೆ ಕಾಣುವಂತಹವಲ್ಲ. ಇವರ ಶಿಲ್ಪಗಳಲ್ಲಿ ವಿಷಯವಿದೆ. ವೈವಿಧ್ಯತೆ ಇದೆ. ಹೆಚ್ಚಿನ ಶಿಲ್ಪಗಳಲ್ಲಿ ಕನಸಿನ ಕನ್ಯೆಯ ಮೈಮಾಟ, ಆಲಿಂಗನ, ಚುಂಬನ, ಆರ್ದತೆ, ರಾಗ, ಅನುರಾಗ, ಕಥೆ, ವ್ಯಥೆ ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಕವಿ ಕಾಳಿದಾಸ, ರನ್ನ, ಇತ್ತೀಚಿನ ಕುವೆಂಪು ಮತ್ತಿತರರು ಬೇರೆ ಬೇರೆ ದೃಷ್ಟಿಕೋನಗಳಿಂದ ನಾಯಕ ನಾಯಕಿಯನ್ನು ಶಬ್ದಗಳಲ್ಲಿ ವೈಭವೀಕರಿಸಿದಂತೆ, ಸುಬ್ಬಯ್ಯನವರು ತಮ್ಮ ಶಿಲ್ಪಗಳಲ್ಲಿ ಕೆತ್ತನೆ ಮಾಡಿದ್ದಾರೆ.

ಇವರ ಶಿಲ್ಪಗಳಲ್ಲಿನ ವಿಶೇಷತೆ ಎಂದರೆ ಒಂದೇ ಕಲ್ಲಿನ ಶಿಲ್ಪವನ್ನು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ನೈರುತ್ಯ, ಈಶಾನ್ಯ ಹೀಗೆ ಹಲವು ದಿಕ್ಕುಗಳಿಂದ ನೋಡಬಹುದಾಗಿದ್ದು, ಒಂದೊಂದು ದಿಕ್ಕಿನಿಂದ ನೋಡಿದಾಗ ಒಂದೊಂದು ಅನುಭವವನ್ನು ನೀಡುತ್ತವೆ. ಒಂದು ಕಡೆ ಇದ್ದ ಹಾಗೆ ಮತ್ತೊಂದು ಕಡೆ ಇಲ್ಲ. ಕೆಲವನ್ನು ಉಜ್ಜಿ, ಉಜ್ಜಿ ನಯಗೊಳಿಸಿ ಕೆಲವು ಭಾಗಕ್ಕೆ ಮೇಣದಿಂದ ನುಣುಪುಗೊಳಿಸಿ, ಮತ್ತೆ ಆ ಶಿಲ್ಪದೊಂದು ಭಾಗವನ್ನು ಒರಟಾಗಿಸಿ ಉಳಿ ಕೆತ್ತನೆಯ ಕುರುಹುಗಳನ್ನು ಉಳಿಸಿದ್ದಾರೆ. ಮತ್ತೆ ಹಲವೆಡೆ ರಂಧ್ರ ಕೊರೆದು ಆ ದಪ್ಪದಲ್ಲಿಯೂ ಮತ್ತೊಂದನ್ನು ಸೃಷ್ಟಿಸಿದ್ದಾರೆ. ಪ್ರತಿ ದಿಕ್ಕಿನಲ್ಲಿ ಕಾಣುವ ಆ ನೋಟಕ್ಕೆ ಒಂದೊಂದು ಹೆಸರನ್ನು ಇಳಿಗೆತ್ತನೆಯ ಮೂಲಕ ಪೀಠ ಭಾಗದಲ್ಲಿ ಕೆತ್ತಿದ್ದಾರೆ. ಇವೆಲ್ಲವೂ ಒಂದಕ್ಕೊಂದು ಪೂರಕ ಹಾಗೂ ಪ್ರೇರಕವಾಗಿವೆ.

ಒಟ್ಟಾರೆ ಹೇಳುವುದಾದರೆ ಕವಿ ಸಾಳ್ವನು ತನ್ನ 'ರಸರತ್ನಾಕರ'ದಲ್ಲಿ ಹೀಗೆ ಹೇಳುತ್ತಾನೆ :

"...... ಎಲ್ಲಾ ರಸದೊಳ್ ಶೃಂಗಾರ ರಸಮೆ ಲೋಕಕ್ಕೆ ಸೊಗಯಿಪುದಾದ ಕಾರಣಮೆ ಮೊದಲೊಳೀ ಶೃಂಗಾರ ರಸಂ ಪೇಳೆಪಟ್ಟುದು....." ನಂತರದ ಕವಿ ನಿಜಗುಣ ಶಿವಯೋಗಿಯು ತನ್ನ ವಿವೇಕ ಚಿಂತಾಮಣಿಯಲ್ಲಿ "......ರತಿಯೊಂದೇ ತಾಂತಾದಿ

ವಿಷಯಕಮಾಗಿ ರಾಗಮಯ ವಹತನದಿಂ ಶೃಂಗಾರ ಸಂಜ್ಞೆಯಂ ಪಡೆವುದು....." ಹೀಗೆ ಮುಂದುವರೆಸಿ ಶೃಂಗಾರ ರಸದಲ್ಲಿಯೇ ಎಂಟು ರಸಗಳು ಅಡಗಿರುವುದನ್ನು ವಿವರಿಸುತ್ತಾರೆ.

ಶಬ್ದಗಳಲ್ಲಿ ದಾಖಲಿಸಿರುವ ಶೃಂಗಾರ ರಸವನ್ನು ಕಿರಣ್ ಸುಬ್ಬಯ್ಯನವರು ತಮ್ಮ ಸಮಕಾಲೀನ ಶಿಲ್ಪಗಳಲ್ಲಿ ದೃಶ್ಯವಾಗಿಸಿದ್ದಾರೆನ್ನಬಹುದು. ಹೀಗೆಂದ ಮಾತ್ರಕ್ಕೆ ಪೂಜಾ ಮೂರ್ತಿಗಳನ್ನು ಮಾಡಿಲ್ಲವೆಂದು ಭಾವಿಸುವ ಹಾಗಿಲ್ಲ. ಒಂದಲ್ಲಾ ಎರಡಲ್ಲಾ ಭಕ್ತರ ಬೇಡಿಕೆಯಂತೆ ನೂರಾರು ಪುರಾಣ ದೇವತೆಗಳು ಕೆತ್ತನೆ ಮಾಡಿಕೊಟ್ಟಿದ್ದಾರೆ. ಇವರ ಮತ್ತೊಂದು ಶಿಲ್ಪ "ಗಿನ್ನಿಸ್ ದಾಖಲೆ" ಸೇರಬಹುದಾದಂತಹದ್ದು ಹಲವು ಹೆಡೆಗಳ ನಾಗ ದೇವತಾ ಶಿಲ್ಪ.

ಇಂತಹ ಅಪಾರ ಪ್ರಮಾಣದ ಸಮಕಾಲೀನ ಶಿಲ್ಪಗಳನ್ನು ಮಾಡಿರುವ ಕಿರಣ್ ಸುಬ್ಬಯ್ಯನವರ ಬಗೆಗೆ ಯಾರು ಗಮನವಹಿಸದೇ ಇರುವಾಗ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರು ಸ್ವತಃ ತಾವೇ ಬಂದು ನೋಡಿ ಇಂತಹ ಶಿಲ್ಪಿಗೆ ರಾಷ್ಟ್ರಮಟ್ಟದ ಪ್ರಶಸ್ತಿ ದೊರಕಬೇಕಾಗಿತ್ತು. ಇದುವರೆಗೂ ಗುರುತಿಸದಿರುವುದು ವಿಶಾದನೀಯ ಎನ್ನುತ್ತಾ ಇವರ ಶಿಲ್ಪಗಳ ಸಾರವನ್ನು ಕುರಿತೊಂದು ಪುಸ್ತಕವನ್ನಾದರೂ ಬರೆಯಿಸುವುದು ಒಳ್ಳೆಯದೆಂದು ಕಿರಣ್ ಸುಬ್ಬಯ್ಯನವರ ಆಪ್ತಮಿತ್ರರಾದ ಹಾಗೂ ಒಂದೇ ಊರಿನವರಾದ ಕಲಾವಿದ ಶ್ರೀ ಎನ್.ಬಿ. ಕಾವೇರಪ್ಪನವರಿಗೆ ಬರೆಯಲು ತಿಳಿಸಿದುದು ಸಮಂಜಸವೇ ಆಗಿದೆ.

ಹಾಗೆಯೇ ಕಾವೇರಪ್ಪನವರು ಸಹ ಅವರ ಶಿಲ್ಪಗಳ ಸಾರವನ್ನು ಹಾಗೂ ಜೀವನ ಕ್ರಮವನ್ನು ಶಬ್ದಗಳಲ್ಲಿ ಚೆನ್ನಾಗಿಯೇ ದಾಖಲಿಸಿದ್ದಾರೆ. ಪುಸ್ತಕ ಪ್ರಕಟವಾಗಲು ಸಹಕಾರ ನೀಡಿದ ಅಕಾಡೆಮಿಯ ರಿಜಿಸ್ಟ್ರಾರ್ ಅವರಿಗೂ ಮತ್ತು ಪುಸ್ತಕ ಸಂಪಾದನೆಯ ಜವಾಬ್ದಾರಿಯನ್ನು ನನಗೆ ವಹಿಸಿಕೊಟ್ಟು ಸಹಕರಿಸಿದ ನನ್ನ ಜೊತೆಗಿನ ಎಲ್ಲಾ ಅಕಾಡೆಮಿಯ ಸದಸ್ಯರಿಗೂ ಹಾಗೂ ಲೇಖಕರಿಗೂ ನನ್ನ ಅಭಿನಂದನೆಗಳು.

**ಎಲ್. ಶಿವಲಿಂಗಪ್ಪ**
ಸಂಪಾದಕರು

## ನಿಮ್ಮೊಡನೆ

ಕೊಡಗು ಮೂಲದ, ಮೈಸೂರಿನಲ್ಲಿ ನೆಲೆನಿಂತ, ನಮ್ಮ ನಾಡಿನ ಒಬ್ಬ ಶ್ರೇಷ್ಠ ಶಿಲ್ಪಿ ಎ. ಕಿರಣ್ ಸುಬ್ಬಯ್ಯ. ಸಾಧನೆ ಎಷ್ಟೇ ದೊಡ್ಡದಾಗಿದ್ದರೂ ಸಹ ಈಗಿನ ಸಮಾಜದಲ್ಲಿ ಆಗಾಗ್ಗೆ ಮೇಲೆ ಬಿದ್ದು, ನಾನು ಸಹ ಒಬ್ಬನಿದ್ದೇನೆ ಎಂದು ತೋರಿಸಿಕೊಳ್ಳುತ್ತಾ ಬಂದರೆ ಮಾತ್ರ ಚಲಾವಣೆಯಲ್ಲಿರಲು ಸಾಧ್ಯ. ಇಲ್ಲದಿದ್ದರೆ ಕಲಾವಲಯದಲ್ಲಿ ಮರೆಯಾಗಬೇಕಾಗುತ್ತದೆ ಎನ್ನುವುದಕ್ಕೆ ಇವರೇ ಒಂದು ನಿದರ್ಶನ. ಇಂತಹ ವ್ಯಕ್ತಿಯ ಸಾಧನೆಯನ್ನು ನೋಡಿ, ಅರಿತು, ಮೆಚ್ಚಿ ಕಾರ್ಯೋನ್ಮುಖರಾದ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಈಗಿನ ಅಧ್ಯಕ್ಷರಾಗಿರುವ ಶ್ರೀ ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿಗಳು ಅತ್ಯಂತ ಅಭಿನಂದನಾರ್ಹರು. ಅಕಾಡೆಮಿಯ ರಿಜಿಸ್ಟ್ರಾರ್‌ರವರಿಂದ ಎ. ಕಿರಣ್ ಸುಬ್ಬಯ್ಯನವರ ಜೀವನ ಮತ್ತು ಸಾಧನೆಯ ಬಗ್ಗೆ ವಿಸ್ತೃತ ಪುಸ್ತಕವನ್ನು ಬರೆದುಕೊಡಲು ಕೋರಿಕೆ ಪತ್ರ ಬಂದಾಗ ನನಗೆ ಸಂತೋಷ ಮತ್ತು ದಿಗಿಲು ಎರಡೂ ಆದವು. ಕೊಡಗು ಮೂಲದ ಕಲಾವಿದನೇ ಆಗಿರುವ ನನಗೆ 30 ವರ್ಷಗಳಿಂದಲೂ ಪರಿಚಿತರಿರುವ ಎ. ಕಿರಣ್ ಸುಬ್ಬಯ್ಯನವರ ಬಗ್ಗೆ ಬರೆಯಲು ಹೆಮ್ಮೆ ಎನಿಸಿತು. ಆದರೆ, ನೂರಾರು ವಿಭಿನ್ನ ಪ್ರಕಾರದ ಶಿಲ್ಪಗಳನ್ನು ತನ್ನಷ್ಟಕ್ಕೆ ತಾನು ಏಕಾಂಗಿಯಾಗಿ ಸೃಷ್ಟಿಸುತ್ತಾ ತಲ್ಲೀನರಾಗಿರುವ ಇವರು, ಪುಸ್ತಕಕ್ಕೆ ಬೇಕಾಗುವ ವಸ್ತು–ವಿಷಯಗಳ ಬಗ್ಗೆ ಸಂಪೂರ್ಣ ಸಹಕಾರ ನೀಡುತ್ತಾರೆಯೇ ಎನ್ನುವ ದಿಗಿಲು. ಹಾಗಾಗಿ, ನನ್ನ ಮಿತ್ರರಾದ ಕಲಾವಿದ–ಬರಹಗಾರರಾದ ಶ್ರೀ ಎಲ್. ಶಿವಲಿಂಗಪ್ಪನವರನ್ನು ಜೊತೆಯಲ್ಲಿ ಕರೆದುಕೊಂಡು ಕಿರಣ್‌ರವರ ಮನೆಗೆ ಹೋಗಿ ಭೇಟಿ ಮಾಡಿದಾಗ ಹಳೆಯ ಸ್ನೇಹಿತನನ್ನು ನೋಡಿದ ಸಂತೋಷವಾಯಿತು. ವಿಷಯ ಪ್ರಸ್ತಾಪಿಸಿದಾಗ, ಪುಸ್ತಕದ ಲೇಖಕ ನಾನೆಂದು ತಿಳಿದು ತಕ್ಷಣವೇ ಸಂಪೂರ್ಣ ಸಹಕಾರದ ಭರವಸೆ ನೀಡಿದರು.

ಇದಾದ ನಂತರ ಅವರಲ್ಲಿಗೆ ನಾನು ಸುಮಾರು ಏಳೆಂಟು ಸಲ ಹೋಗಿ ಭೇಟಿ ಮಾಡಿದ್ದೇನೆ. ಅವರ ಜೀವನದ ಒಳನೋಟ ಹಾಗೂ ಶಿಲ್ಪ–ಚಿತ್ರ–ಇತರ ವಿಷಯಗಳ ಬಗ್ಗೆ ಸುದೀರ್ಘ ಸಮಾಲೋಚನೆ ಮಾಡಿರುತ್ತೇನೆ. ಅವರ ಶಿಲ್ಪಗಳನ್ನು

ಅನೇಕ ಸಲ ನೋಡಿ ಛಾಯಾಚಿತ್ರಗಳನ್ನು ತೆಗೆದುಕೊಂಡಿದ್ದೇನೆ. ಬಹಳಷ್ಟು ಛಾಯಾಚಿತ್ರಗಳನ್ನು ಅವರ ಸಂಗ್ರಹದಿಂದಲೂ ಪಡೆದಿದ್ದೇನೆ. ಅನೇಕ ಸಲ ದೂರವಾಣಿ ಮುಖಾಂತರ ಸಂಪರ್ಕ ಮಾಡಿರುತ್ತೇನೆ. ಅವರ ಬದುಕಿನ ಅನೇಕ ಮಜಲುಗಳನ್ನು ಪುಸ್ತಕದಲ್ಲಿ ಪ್ರಸ್ತುತಪಡಿಸಿ, ಶಿಲ್ಪಗಳ ಬಗ್ಗೆ ತುಲನಾತ್ಮಕ ವಿವರಣೆಗಳನ್ನು ಆದಷ್ಟು ನಿಖರವಾಗಿ ನೀಡಲು ಪ್ರಯತ್ನಿಸಿದ್ದೇನೆ. ಅವರು ನೀಡಿದ ಸಹಕಾರಕ್ಕೆ ಅಭಿವಂದನೆಗಳು.

'ಭರಣಿ ಆರ್ಟ್ ಗ್ಯಾಲರಿ' ಮುಖಾಂತರ ಕಳೆದ 21 ವರ್ಷಗಳಲ್ಲಿ ನಡೆಸಲಾದ ಅನೇಕ ದೃಶ್ಯಕಲಾ ಪ್ರದರ್ಶನಗಳ ಅನುಭವ ಹಾಗೂ 20ನೆಯ ಶತಮಾನದ ಖ್ಯಾತ ಶಿಲ್ಪಿ–ಕಲಾಕಾರ 'ಹೆನ್ರಿಮೂರ್' (Henry Moore)ರ ನೂರಾರು ಶಿಲ್ಪ–ಚಿತ್ರಗಳ ಬೃಹತ್ ಪ್ರದರ್ಶನವನ್ನು ನವದೆಹಲಿಯಲ್ಲಿ ಒಂದು ವಾರ ವೀಕ್ಷಿಸಿದ ಅನುಭವ–ಇವು ನನಗೆ ಕಿರಣ್ ಸುಬ್ಬಯ್ಯನವರ ಶಿಲ್ಪಗಳ ವಿವೇಚನೆಗೆ ಸಹಕಾರಿಯಾದವು. ತಮ್ಮೆಲ್ಲಾ ಶಿಲ್ಪಗಳಿಗೂ ಆಂಗ್ಲಭಾಷೆಯ ಶೀರ್ಷಿಕೆ ಕೊಟ್ಟಿದ್ದು, ವಿಷಯಾಂತರವಾಗದಂತೆ ಕನ್ನಡ ಭಾಷೆಗೆ ತರ್ಜುಮೆ ಮಾಡಲು ಬಹಳ ಶ್ರಮಪಡಬೇಕಾಯಿತು. ಇದಕ್ಕಾಗಿ ಅನೇಕ ಆಂಗ್ಲ ಮತ್ತು ಕನ್ನಡ ನಿಘಂಟುಗಳ ಮೊರೆಹೋಗಿದ್ದೇನೆ.

ಕರ್ನಾಟಕದಲ್ಲಾಗಲಿ, ಹೊರ ರಾಜ್ಯಗಳಲ್ಲಾಗಲಿ ಮತ್ತು ವಿಶ್ವದ ಬೇರೆ ಯಾವುದೇ ದೇಶದಲ್ಲಾಗಲಿ, ಸದ್ಯಕ್ಕೆ ಲಭ್ಯವಿರುವ ಮಾಹಿತಿ ಪ್ರಕಾರ, ಯಾವನೇ ಒಬ್ಬ ಶಿಲ್ಪಿ ಏಕಶಿಲೆಯಲ್ಲಿ ಅನೇಕ ಆಯಾಮಗಳ ಬಹುಮುಖಿ ಶಿಲ್ಪಗಳನ್ನು ಇವರಷ್ಟು ಸಂಖ್ಯೆಗಳಲ್ಲಾಗಲಿ, ಪ್ರಭಾವದಲ್ಲಾಗಲಿ ಕೆತ್ತಿದಂತಿಲ್ಲ. ಆದ್ದರಿಂದ ಶಿಲ್ಪಗಳ ಚಿತ್ರಗಳ ಜೋಡಣೆಯಲ್ಲಾಗಲಿ, ಬರಹದಲ್ಲಾಗಲಿ ವ್ಯತ್ಯಾಸವಾಗಬಾರದೆನ್ನುವ ಹಂಬಲದಿಂದಾಗಿ ಬರಹ ಮತ್ತು ಛಾಯಾಚಿತ್ರಗಳ ಡಿ.ಟಿ.ಪಿ. ಹಾಗೂ ಪುಟಗಳ ವಿನ್ಯಾಸಗಳನ್ನು ನಾನೇ ಮಾಡಿಸಿ ಅಕಾಡೆಮಿಗೆ ತಲುಪಿಸಲು ಮುಂದಾದೆ. ಅಕಾಡೆಮಿಯ ಅನುಮತಿ ಪಡೆದು ಮುಂದುವರೆದಾಗ ಇದು ಎಷ್ಟು ತ್ರಾಸದಾಯಕ, ನಿಧಾನ ಮತ್ತು ಖರ್ಚಿನ ಕೆಲಸ–ಎನ್ನುವುದು ದಿನ ಹೋದಂತೆ ಅನುಭವವಾಯಿತು. ಈ ಕೆಲಸವೇ ಸುಮಾರು 4 ತಿಂಗಳುಗಳಷ್ಟು ಕಾಲ ತೆಗೆದುಕೊಂಡಿದೆ. ಅನೇಕ ಸಲ ಸರಿಪಡಿಸಬೇಕಾಯಿತು. ಮುಖ್ಯವಾಗಿ ಮೊದಲ ಹಂತದಲ್ಲಿ ಸುಮಾರು 120 ಪುಟಗಳಷ್ಟಾಗುವುದನ್ನು 90 ಪುಟಗಳ ಸಮೀಪ ಸೀಮಿತಗೊಳಿಸುವ ಕೆಲಸ ನಿಜಕ್ಕೂ ತ್ರಾಸದಾಯಕವಾಯಿತು. ಈ ಸಂದರ್ಭದಲ್ಲಿ ನನ್ನ ಆಪ್ತಮಿತ್ರರೂ ಹೆಸರಾಂತ ಕಲಾಬರಹಗಾರರೂ ಆದ ಎಲ್. ಶಿವಲಿಂಗಪ್ಪ ನವರು ಬಹಳ ನೆರವು ನೀಡಿದ್ದಾರೆ. ನನ್ನ ಲೇಖನದ ನ್ಯೂನತೆಗಳನ್ನು ಎರಡೆರಡು ಸಲ ಸರಿಪಡಿಸಿರುತ್ತಾರೆ. ಅವರೊಡನೆ ಪುಸ್ತಕದ ಸಮಸ್ತ ವಿಷಯಗಳ ಬಗ್ಗೆ ಪ್ರಾರಂಭದಿಂದಲೂ ಚರ್ಚಿಸುತ್ತಾ ಮುಂದುವರಿದಿದ್ದೇನೆ. ಈ ವಿಶೇಷ ಪುಸ್ತಕದ ಸುಂದರ ರೂಪಕ್ಕೆ ಅವರ ನೆರವು ಅಪಾರ ; ಅವರಿಗೆ ನಾನು ಆಭಾರಿಯಾಗಿದ್ದೇನೆ.

ಖ್ಯಾತ ಮೇಧಾವಿಗಳೂ, ನಮ್ಮ ದೇಶದ ಪ್ರಧಾನಿಗಳೂ ಆಗಿದ್ದ ದಿವಂಗತ ಪಿ.ವಿ. ನರಸಿಂಹರಾವ್‌ರವರು ಹೆನ್ರೀಮೂರರ ಶಿಲ್ಪಗಳ ಸಂದರ್ಭದಲ್ಲಿ ಪ್ರಯೋಗಿಸಿದ **"Paean"** ಎನ್ನುವ ಆಂಗ್ಲ ಶಬ್ದ (ಅರ್ಥ : ಜಯಗಾನ–ವಿಜಯಗೀತೆ) ಡಿ.ಟಿ.ಪಿ. ಮಾಡುವ ಸಂದರ್ಭದಲ್ಲಿ **"Poeam"** ಆಗಿ, **"Poem"** ಆಗಿ, **"Paeam"** ಆಗಿ ಕೊನೆ ಹಂತದಲ್ಲಿ ಪುನಃ ಮೊದಲಿನ **"Paean"** ಆಯಿತು. ಪ್ರತಿ ಸಲ ಆಗುವ ವ್ಯತ್ಯಾಸದಿಂದಾಗಿ ನಾನೂ ಶಬ್ದಕೋಶಗಳನ್ನು ಆಗಾಗ ತಡಕಾಡುವಂತಾಗಿ ಇಂತಹ ಅದ್ಭುತ ಶಬ್ದಪ್ರಯೋಗಗಳ ಪಾಂಡಿತ್ಯವನ್ನು ಅನುಭವಿಸುವಂತಾಯಿತು.

ಈ ಪುಸ್ತಕ ಮೂಡಿಬರಲು ಕಾರಣರಾದ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರಾದ ಮಾನ್ಯ ಶ್ರೀ ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿಗಳಿಗೂ, ನನಗೆ ಈ ಅವಕಾಶವನ್ನು ಒದಗಿಸಿದ ಮಾನ್ಯ ಸದಸ್ಯರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ಎಲ್ಲಾ ರೀತಿಯ ಪ್ರೋತ್ಸಾಹ, ಭರವಸೆಗಳಿಂದ ಇಂತಹ ಒಂದು ಅಮೂಲ್ಯ ದೃಶ್ಯಕಲಾ ಪುಸ್ತಕ ಪ್ರಕಟವಾಗಲು ಕಾರಣರಾದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀಮತಿ ಇಂದ್ರಮ್ಮ ಹೆಚ್.ವಿ. ರವರಿಗೆ ನಾನು ಋಣಿಯಾಗಿದ್ದೇನೆ. ಪುಸ್ತಕದ ಪುಟಗಳ ವಿನ್ಯಾಸಗಳನ್ನು ಹಾಗೂ ಮುಖಪುಟ ವಿನ್ಯಾಸವನ್ನು ನಾನು ಕಲ್ಪಿಸಿ, ತೋರಿಸಿಕೊಟ್ಟಂತೆಯೇ (ಪುನಃ ಪುನಃ ತಿದ್ದಿದಾಗಲೂ ಸಹ) ತಮ್ಮ ಕಂಪ್ಯೂಟರ್‌ಗಳಲ್ಲಿ ಶ್ರಮವಹಿಸಿ ಮಾಡಿಕೊಟ್ಟಿರುವ ಮೈಸೂರಿನ ಶ್ರೀ ಎಸ್.ಎನ್. ಮಹೇಶ್ ಹಾಗೂ ಎಸ್. ನಂದೀಶ್‌ರವರನ್ನು ಇಲ್ಲಿ ನೆನಪಿಸಿಕೊಳ್ಳುತ್ತೇನೆ. ಕೆಲವು ಶಬ್ದಪ್ರಯೋಗಗಳ ಬಗ್ಗೆ ತಮ್ಮ ಅನ್ನಿಸಿಕೆಗಳನ್ನು ತಿಳಿಸಿದ ಇನ್ನೂ ಇಬ್ಬರು ಆತ್ಮೀಯರನ್ನು ಸಹ ನೆನಸಿಕೊಳ್ಳುತ್ತೇನೆ. ಈ ಪುಸ್ತಕದ ಮುದ್ರಣವನ್ನು ಸೊಗಸಾಗಿ ಮಾಡಿಕೊಟ್ಟಿರುವ ಇಳಾ ಮುದ್ರಣದವರಿಗೂ ನನ್ನ ವಂದನೆಗಳು.

ಯಾವುದೇ ಈರ್ಷ್ಯೆಯಿಲ್ಲದೆ, ತುಲನಾತ್ಮಕವಾಗಿ ಬರೆದು ರೂಪಿಸಿರುವ ಈ ದೃಶ್ಯಕಲಾ ಪುಸ್ತಕದ ಸಂಪೂರ್ಣ ಪ್ರಯೋಜನದ ಬಗ್ಗೆ ಓದುಗರಿಂದ ಪ್ರತಿಕ್ರಿಯೆಯನ್ನು ಆಶಿಸುತ್ತೇನೆ.

**ಎನ್.ಬಿ. ಕಾವೇರಪ್ಪ**
ಲೇಖಕರು
ಮೊ : 9448554221

## ಪರಿವಿಡಿ

### ಭಾಗ–1

| | | | |
|---|---|---|---|
| | | | ಪುಟ ಸಂಖ್ಯೆ |
| **ಶಿಲ್ಪಿಯ ಜೀವನದ ಒಳನೋಟ** | | | 1–14 |
| 1. | ಜನನ–ಬಾಲ್ಯ–ಸಂಸಾರ | ..... | 1 |
| 2. | ವಿದ್ಯಾಭ್ಯಾಸ | ..... | 2 |
| 3. | ಕಲಾಭ್ಯಾಸ ಮತ್ತದರ ಮಜಲುಗಳು | ..... | 2–6 |
| 4. | ಸ್ವತಂತ್ರ ಶಿಲ್ಪ ರಚನಾ ಕೆಲಸ | ..... | 6–7 |
| 5. | ಶಿಲಾ ಶಿಲ್ಪ ಮಾಧ್ಯಮದ ವಿವರ | ..... | 7–8 |
| 6. | ಶಿಲ್ಪ ರಚನಾ ತಂತ್ರ ವಿಧಿವಿಧಾನಗಳು | ..... | 8–9 |
| 7. | ಆರ್ಥಿಕ ಬೆಂಬಲ | ..... | 9 |
| 8. | ಕೌಟುಂಬಿಕ ಬೆಂಬಲ | ..... | 9–10 |
| 9. | ಶಿಲ್ಪಗಳ ಸಾಮಾನ್ಯ ವಿಂಗಡಣೆ | ..... | 10 |
| 10. | ಬಹುಮುಖಿ ಶಿಲ್ಪಸೃಷ್ಟಿಯ ವಿಶೇಷತೆ | ..... | 10–11 |
| 11. | ವಿಶ್ವದಾಖಲೆಯತ್ತ ಆದಿಶೇಷ | ..... | 11–13 |
| 12. | ಸಂಗ್ರಹಗಳು | ..... | 13 |
| 13. | ಕೊಡವ ಭಾಷೆಗೆ ಲಿಪಿಶೋಧನೆ | ..... | 14 |

### ಭಾಗ–2

| | | | |
|---|---|---|---|
| **ಶಿಲ್ಪಗಳ ಬಾಹ್ಯ ನೋಟದಲ್ಲಿನ ಆಂತರಿಕ ತುಮುಲ** | | ..... | 15–67 |
| 1. | ಸಾಂಪ್ರದಾಯಿಕ ಶಿಲ್ಪಗಳು | ..... | 19–20 |
| 2. | ಸಮಕಾಲೀನ ಏಕಮುಖಿ ಶಿಲ್ಪಗಳು | ..... | 21–26 |
| 3. | ಏಕಶಿಲೆ–ದ್ವಿಮುಖಿ ಶಿಲ್ಪಗಳು (Two in one Sculptures) | ..... | 26–37 |
| 4. | ಏಕಶಿಲೆ–ತ್ರಿಮುಖಿ ಶಿಲ್ಪಗಳು (Three in one Sculptures) | ..... | 38–45 |
| 5. | ಏಕಶಿಲೆ–ಚತುರ್ಮುಖಿ ಶಿಲ್ಪಗಳು (Four in one Sculptures) | ..... | 46–62 |
| 6. | ಏಕಶಿಲೆ–ಪಂಚಮುಖಿ ಶಿಲ್ಪಗಳು (Five in one Sculptures) | ..... | 63–64 |
| 7. | ಕಾಷ್ಠ ಶಿಲ್ಪಗಳು (Wood Carvings) | ..... | 65–66 |
| 8. | ಬಹುಮುಖಿ ಶಿಲ್ಪ ಕೆತ್ತನೆಯ ಸಾಧನೆಯ ಪಕ್ಷಿನೋಟ | ..... | 67 |
| 9. | ಸನ್ಮಾನ ಪುರಸ್ಕಾರಗಳು | ..... | 68 |
| 10. | ಮಾಹಿತಿ | ..... | 69 |
| 11. | ಟಿಪ್ಪಣಿಗಳು | ..... | 70–71 |

## ಬಹುಮುಖೀಯ ಶಿಲ್ಪ ಸಾರ್ವಭೌಮ

# ಎ. ಕಿರಣ್ ಸುಬ್ಬಯ್ಯ

### ಭಾಗ–1

## ಶಿಲ್ಪಿಯ ಜೀವನದ ಒಳನೋಟ

ಕೊಡಗಿನ 'ಆದಿಕವಿ'ಯೆಂದು ಅಮರರಾದ ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿ'ಯ (1868–1944) ನಂತರ ಆ ಮನೆತನಕ್ಕೆ ಹೆಸರು ತಂದುಕೊಡುತ್ತಿರುವ ಮತ್ತೋರ್ವ ವ್ಯಕ್ತಿಯೇ ಪ್ರಸ್ತುತ ನಮ್ಮೊಡನೆ ಇರುವ ಅಪ್ಪನೆರವಂಡ ಕಿರಣ್ ಸುಬ್ಬಯ್ಯನವರು. ಸಮಕಾಲೀನ–ಆಧುನಿಕ ಶಿಲ್ಪಕಲಾ ಪ್ರಾಕಾರದ ಸಂದರ್ಭದಲ್ಲಿ ಕರ್ನಾಟಕದ ಒಬ್ಬ ಶ್ರೇಷ್ಠ ಶಿಲ್ಪಿ ಹೇಗೆ ಕಲಾಬರಹಗಾರರ[2], ಕಲಾವಿಮರ್ಶಕರ ಹಾಗೂ ಕಲಾಸಂಬಂಧಿ ಸಂಸ್ಥೆಗಳ ದೃಷ್ಟಿಯಿಂದ ಬಹಳ ಕಾಲದವರೆಗೆ ಉಪೇಕ್ಷೆಗೊಳಪಟ್ಟರು ಎನ್ನುವುದಕ್ಕೆ ಮೈಸೂರಿನ ಒಂದು ಮೂಲೆಯಲ್ಲಿ ತನ್ನಷ್ಟಕ್ಕೆ ತಾನು ನವ್ಯ–ನವೀನ ಮಾದರಿಯ ಶಿಲೆ ಹಾಗೂ ಕಾಷ್ಟ ಶಿಲ್ಪಗಳನ್ನು ಸೃಷ್ಟಿಸುತ್ತಾ ಬಂದಿರುವ, ನಮ್ಮೊಡನೆ ಇರುವ ಶಿಲ್ಪಿ ಎ. ಕಿರಣ್ ಸುಬ್ಬಯ್ಯನವರು ಸಾಕ್ಷಿಯಾಗಿದ್ದಾರೆ. ನಮ್ಮ ದೇಶದ ಅದರಲ್ಲೂ ಕನ್ನಡ ನಾಡಿನ ಸಮಕಾಲೀನ ಶಿಲ್ಪಕಲಾ ಲೋಕದಲ್ಲಿ ಎ.ಕಿರಣ್ ಸುಬ್ಬಯ್ಯನವರ ಶಿಲ್ಪಗಳ ತುಲನಾತ್ಮಕ ನೆಲಗಟ್ಟನ್ನು ವಿಮರ್ಶಿಸದಿದ್ದರೆ, ನಮ್ಮ ನಾಡಿನ ಸಮಕಾಲೀನ ಶಿಲ್ಪಕಲೆಯ ಪರಿಪೂರ್ಣತೆಯಾಗಲು ಎಂದಿಗೂ ಸಾಧ್ಯವಿಲ್ಲ. ಅಂತಹ ಅಪೂರ್ವ ಶಿಲ್ಪಗಳನ್ನು ಹತ್ತಿಪ್ಪತ್ತಲ್ಲ; ಸಾವಿರಕ್ಕೂ ಮೀರಿ ನಿರ್ಮಿಸಿರುತ್ತಾರೆ. ಒಂದೇ ಶಿಲೆಯಲ್ಲಿ ಕೇವಲ ಒಂದು ಭಾಗಕ್ಕೆ ಕಾಣುವ ರೂಪ ಮಾತ್ರವಲ್ಲ ; ಎರಡು, ಮೂರು, ನಾಲ್ಕು, ಐದು–ಹೀಗೆ ಅನೇಕ ಭಾಗಗಳಿಂದ ನೋಡಬಹುದಾದ ವಿಭಿನ್ನ ಬಹುಮುಖಿ ಸಮಕಾಲೀನ ಶಿಲ್ಪಗಳನ್ನು (Multi Dimentional Sculptures) ಸೃಷ್ಟಿಸುತ್ತಾ ಬಂದಿರುವ ಈ ಶಿಲ್ಪಿ ದಿವಂಗತ ಕ್ಯಾಪ್ಟನ್ ಸಿ.ಪಿ. ರಾಜಾರಾಂರವರ[3] ನಂತರ ನಮ್ಮ ರಾಜ್ಯ ಹಾಗೂ ದೇಶದ ದೃಶ್ಯಕಲೆಗೆ ಕೊಡಗು ನೀಡಿರುವ ಮತ್ತೊಂದು ಅಪೂರ್ವ ಕೊಡುಗೆ.

ಒಂದೇ ಕಲ್ಲಿನ ಒಂದು ಮಗ್ಗುಲಲ್ಲಿ ಮಾತ್ರ ಶಿಲ್ಪಗಳನ್ನು ಕೆತ್ತನೆ ಮಾಡಿರುವುದನ್ನು ಎಲ್ಲೆಡೆ ಕಾಣುತ್ತೇವೆ. ಆದರೆ ಇವರ ಕೃತಿಗಳಲ್ಲಿ ಕೆತ್ತನೆ ಒಂದು ಮುಖವಲ್ಲ. ಹಲವಾರು ಮುಖ. ನಾಲ್ಕು ದಿಕ್ಕುಗಳಿಂದ ನಿಂತು ನೋಡಿದರೂ ನಾಲ್ಕು ತೆರನಾದ ಶಿಲಾಕೆತ್ತನೆ ಕಾಣುತ್ತೇವೆ. ಈ ತೆರನಾದ ಚಿತ್ರಕೆತ್ತನೆ ಮಾಡಿರುವ ಕೊಡಗಿನ ಕಿರಣ್ ಸುಬ್ಬಯ್ಯನವರ ಕಲಾಸಾಧನೆಯ ಹಿಂದೆ ರೋಚಕ ಕತೆಯೇ ಅಡಗಿದೆ. 'ಅಗೆದಷ್ಟು ಆಳ, ಬಗೆದಷ್ಟು ನೀರು' ಎಂಬಂತೆ ಜೀವನ ಶೈಲಿ ಹಾಗೂ ಕೆತ್ತನೆ ಶೈಲಿ–ಎರಡೂ ಮನನಯೋಗ್ಯವಾದದ್ದು. ದಿಟ್ಟತನ, ಏಕಾಗ್ರತೆ ಮತ್ತು ಏಕಲವ್ಯನಂತೆ ಛಲಬಿಡದ ಸ್ವಂತ ಅಭ್ಯಾಸಗಳಿಂದ ಹೇಗೆ ಒಬ್ಬ ವ್ಯಕ್ತಿ ಶ್ರೇಷ್ಠ ಶಿಲ್ಪಗಳನ್ನು ಕೆತ್ತಬಹುದೆನ್ನುವುದಕ್ಕೆ ಇವರು ಜೀವಂತ ಸಾಕ್ಷಿಯಾಗುತ್ತಾರೆ.

### ಜನನ–ಬಾಲ್ಯ–ಸಂಸಾರ :

ಎ. ಕಿರಣ್ ಸುಬ್ಬಯ್ಯನವರು ಮೂಲತಃ ಕೊಡಗಿನ ಪಾರಾಣೆ ಗ್ರಾಮದ ಅಪ್ಪನೆರವಂಡ ಕುಟುಂಬಕ್ಕೆ ಸೇರಿದವರಾದರೂ ಹುಟ್ಟಿಬೆಳೆದದ್ದೆಲ್ಲ ಮೈಸೂರಿನಲ್ಲೆ. ಇವರ ತಾತ ದಿವಂಗತ ಅಪ್ಪನೆರವಂಡ ಕಾಳಪ್ಪನವರು, ಆಗಿನ ಕಾಲದಲ್ಲಿ ಮೈಸೂರಿನ ಪ್ರಸಿದ್ಧ ಮರ ವ್ಯಾಪಾರಿಗಳಾಗಿದ್ದು 'ಕಾಳಪ್ಪ ಸಾಹುಕಾರ' ಎಂದೇ ಕರೆಸಿಕೊಂಡವರು ! ಇವರ ತಂದೆ ದಿವಂಗತ ಎ.ಸಿ. ಸುಬ್ಬಯ್ಯನವರು ಸಹ ತಮ್ಮ ತಂದೆಯಂತೆ ದಿಟ್ಟತನದಿಂದ ಬಾಳಿದವರು. ತಾಯಿ ದಿವಂಗತ ದೇಚವ್ವನವರು. ಈ ಸುಬ್ಬಯ್ಯ ದಂಪತಿಗಳಿಗೆ ಐದು ಜನ ಮಕ್ಕಳು ; ಎರಡನೆಯವರಾದ ಕಿರಣ್‌ನೊಬ್ಬನೆ ಗಂಡು ಸಂತಾನ (ಜನನ : ಜುಲೈ 24, 1950). ಬಾಕಿ ನಾಲ್ಕು ಜನ ಹೆಣ್ಣು ಮಕ್ಕಳು. ಇವರೆಲ್ಲ ದೊಡ್ಡವರಾಗಿ ಇಬ್ಬರು ಬೆಂಗಳೂರಿನಲ್ಲಿಯೂ, ಮತ್ತಿಬ್ಬರು ಆಸ್ಟ್ರೇಲಿಯಾದಲ್ಲಿಯೂ ನೆಲೆನಿಂತಿರುತ್ತಾರೆ. ಕಿರಣ್‌ರವರ ತೊಟ್ಟಿಲು ನಾಮಧೇಯ "ಮುತ್ತಣ್ಣ" ಎಂದಿದ್ದರೂ ಸಹ ಎ. ಕಿರಣ್ ಸುಬ್ಬಯ್ಯ ಎಂದೇ ಜನ ಬಳಕೆಯ ನಾಮಾಂಕಿತವಾಗಿದೆ. ಇವರು ಕೊಡಗಿನ ಪಾಂಡಂಡ ಸ್ವಾತಿ ಅಕ್ಕಮ್ಮನವರನ್ನು 1983 ರಲ್ಲಿ ವಿವಾಹವಾದರು. ಮೂರುಜನ ಹೆಣ್ಣು

ಮಕ್ಕಳು–ಹಿರಿ ಮಗಳಾದ ಎ. ಭಾಗ್ಯವತಿ(ಶಿಲ್ಪ), ಚೆಪ್ಪುಡಿರ ಟಿ. ಮುತ್ತಣ್ಣನವರನ್ನೂ, ಎರಡನೆ ಮಗಳಾದ ಎ. ಗುಣವತಿ(ಚಿತ್ರ), ಚಿಮ್ಮಂಡ ಪಿ. ಪೊನ್ನಣ್ಣನವರನ್ನೂ ವಿವಾಹವಾಗಿ ಸಂಸಾರಸ್ಥರಾಗಿದ್ದಾರೆ. ಕೊನೆ ಮಗಳಾದ ಎ. ವೇದಾವತಿ(ಕಲ್ಪನ) ಇಂಜಿನಿಯರಾಗಿ ಕೆಲಸ ಮಾಡುತ್ತಿದ್ದಾಳೆ.

## ವಿದ್ಯಾಭ್ಯಾಸ :

ಮೈಸೂರಿನ "ಗುಡ್ ಷೆಫರ್ಡ್" ಕಾನ್ವೆಂಟ್‌ನಲ್ಲಿ ಕಿರಿಯ ಪ್ರಾಥಮಿಕ ಶಿಕ್ಷಣ, 'ಸೇಂಟ್ ಮೇರಿಸ್' ಶಾಲೆಯಲ್ಲಿ ಹಿರಿಯ ಪ್ರಾಥಮಿಕ ವ್ಯಾಸಂಗ ಮುಗಿಸಿ 'ಸೇಂಟ್ ಫಿಲೋಮಿನ' ಶಾಲೆಯಲ್ಲಿ ಪ್ರೌಢಶಿಕ್ಷಣ ಕಲಿತು "ಸೇಂಟ್ ಫಿಲೋಮಿನ" ಕಾಲೇಜಿನಲ್ಲಿ ಪಿ.ಯು.ಸಿ. ವ್ಯಾಸಂಗ ಮಾಡಿ 1967 ರಲ್ಲಿ ಪದವಿ ತರಗತಿಗೆ ಸೇರಿಕೊಂಡರು. ಒಬ್ಬನೇ ಮಗ, ಚೆನ್ನಾಗಿ ಓದಿ ಇಂಜಿನಿಯರ್ ಆಗಲೆಂದು ತಂದೆತಾಯಿ ಆಸೆ – ಆದರೆ ಸೇನೆಗೆ ಸೇರಬೇಕೆಂದು ಓಡಾಡುತ್ತಿದ್ದ ಕಿರಣ್ ಕೊನೆಗೆ ತಂದೆತಾಯಿಯರ ಒತ್ತಾಯಕ್ಕೆ ಮಣಿದು ಪದವಿ ತರಗತಿಗೆ ಸೇರಿಕೊಂಡರು. ಸ್ವಲ್ಪವೂ ಇಷ್ಟವಿಲ್ಲದ ಈ ಪದವಿ ಓದಿನಿಂದಾಗಿ ಅಭ್ಯಾಸ ಮಾಡದೆ ಅನುತ್ತೀರ್ಣರಾದರು. ಅಪ್ಪನ "ಪಾಕೆಟ್ ಮನಿ"ಯ ಪ್ರಭಾವದಿಂದ ಆ ವೇಳೆಗಾಗಲೇ ಚಟಕ್ಕೆ ಬಿದ್ದಿದ್ದರು. ತಂದೆತಾಯಿಯರ ಹಠದಿಂದಾಗಿ "ಟ್ಯೂಷನ್" ತೆಗೆದುಕೊಂಡು ಸಪ್ಲಿಮೆಂಟರಿ ಪರೀಕ್ಷೆಗೆ ಕುಳಿತು ಪಾಸಾಗಲೇಬೇಕೆಂದು ಓದುತ್ತಿದ್ದರು. ಪರೀಕ್ಷೆಗೆ ಎರಡು ದಿನ ಬಾಕಿ ಇದ್ದಾಗ ಇವರ ತಂದೆತಾಯಿಯರು–ಮಗ ಪ್ರಯೋಜನಕ್ಕಿಲ್ಲ, ಓದುಬರಹ ಸರಿಯಾಗಿ ಕಲಿಯಲಿಲ್ಲ, ಪೋಲಿಬಿದ್ದು ಹಾಳಾಗುತ್ತಿದ್ದಾನೆ, ಡಿಗ್ರಿ ಮಾಡದಿದ್ದರೆ ಇವನಿಗೆ ಯಾರು ಮರ್ಯಾದೆ ಕೊಡುತ್ತಾರೆ! ಅಕ್ಕ ತಂಗಿಯರೆಲ್ಲ ಎಷ್ಟು ಚೆನ್ನಾಗಿ ಕಲಿಯುತ್ತಿದ್ದಾರೆ.... ಇತ್ಯಾದಿಯಾಗಿ ಮೂದಲಿಸುವುದನ್ನು ಕೇಳಿದವರೆ ಸಿಟ್ಟಾಗಿ, ಕೋಪದಿಂದ ಓದುತ್ತಿದ್ದ ಪುಸ್ತಕಗಳನ್ನೆಲ್ಲಾ ಕಿತ್ತು ಹರಿದಾಕಿ ಪರೀಕ್ಷೆಗೆ ಹಾಜರಾಗಲೇ ಇಲ್ಲ. ಡಿಗ್ರಿ ಇಲ್ಲದೆಯೇ ನಾನು ಮಹತ್ಸಾಧನೆ ಮಾಡಿ ತೋರಿಸುತ್ತೇನೆಂದು ಹಠ ಮಾಡಿದರು (1971). ಮಗನ ಹಠಮಾರಿತನದಿಂದ ನೊಂದ ತಂದೆತಾಯಿಯರು "ಇವನಿಗೆ ಖರ್ಚು ಮಾಡುವುದೇ ದಂಡ, ಜೀವನ ಏನೆಂದು ತಿಳಿಯದವನು" ಎಂದು ಬೈದು, ಕೊಡುತ್ತಿದ್ದ "ಪಾಕೆಟ್ ಮನಿ" ನಿಲ್ಲಿಸಿಬಿಟ್ಟರು. ಆ ವೇಳೆಗಾಗಲೇ ಸಂದರ್ಭಾನುಸಾರ ಕುಡಿಯಲು ಮತ್ತು ಧೂಮಪಾನ ಮಾಡಲು ಕಲಿತಿದ್ದ ಕಿರಣ್‌ಗೆ ಹಣವಿಲ್ಲದೆ ಚಡಪಡಿಸುವಂತಾಗಿ ಹೋಯಿತು. ಚಟ ಬಿಡಲಾಗದೆ ಅಂಗಡಿಯವರಿಂದ, ಸ್ನೇಹಿತರಿಂದ ಸಾಲ ಪಡೆದು ಮುಂದುವರಿಸಿದರು. ಹಣ ಉಳಿಸಲು ಬೀಡಿ ಸೇವನೆಗೆ ಕೈ ಹಾಕಿದರು. "Chain Smoker" ಆದರು. ಈಗ್ಗೆ, ಅನೇಕ ವರ್ಷಗಳಿಂದ ಕುಡಿಯುವ ಚಟ ಬಿಟ್ಟಿದ್ದಾರಾದರೂ, ಸರಣಿ ಸಿಗರೇಟು ಸೇದುವುದನ್ನು ಇನ್ನೂ ಬಿಡಲಾಗಿಲ್ಲ. ನಿಧಾನವಾಗಿ ಇದನ್ನು ಬಿಡುತ್ತೇನೆಂದು ಹೇಳುತ್ತಾರೆ !

## ಕಲಾಭ್ಯಾಸ ಮತ್ತದರ ಮಜಲುಗಳು :

ಕಾಲೇಜು ದಿನಗಳಲ್ಲಿ ರಜಾ ಸಿಕ್ಕಿದಾಗಲೆಲ್ಲಾ ಕಿರಣ್, ರಸ್ತೆ ಬದಿಯ, ಮತ್ತಿತರ ಕಡೆಯ ಮೆದು ಕಲ್ಲುಗಳನ್ನು (Soap Stones) ಸಂಗ್ರಹಿಸಲು ಆರಂಭಿಸಿದರು. ಇದಕ್ಕೆ ಸ್ಫೂರ್ತಿ ಅವರು ಬೇಲೂರು ಹಳೇಬೀಡು ದೇವಸ್ಥಾನಗಳನ್ನು ಕಾಲೇಜು ಪ್ರವಾಸದ ಸಂದರ್ಭಗಳಲ್ಲಿ ವೀಕ್ಷಿಸಿದಾಗ. ಅಲ್ಲಿನ ಅದ್ಭುತ ಕೆತ್ತನೆಗಳನ್ನು ನೋಡಿ ಇವರಿಗೆ ಒಂದು ಬಗೆಯ ರೋಮಾಂಚನ ಉಂಟಾಯಿತು. ತಾನೂ ಸಹ ಅಂತಹದ್ದೇ ಕೆತ್ತನೆ ಕೆಲಸ ಮಾಡಿ ಸಾಧಿಸಿದಂತೆ ಸ್ವಪ್ನಕಂಡರು. ಈ ರೀತಿಯ ಪ್ರೇರಣೆಯಿಂದ ಕಿರಣ್ ತಾವೇ ಮಾಡಿಕೊಂಡ ಒರಟು ಉಳಿ ಮತ್ತು ಸುತ್ತಿಗೆ ಹಿಡಿದು ತಮಗೆ ತೋಚಿದಂತೆ ಕಲ್ಲು ಕೆತ್ತನೆ ಪ್ರಾರಂಭಿಸಿಯೇ ಬಿಟ್ಟರು. ಬಿಡುವಾದಾಗಲೆಲ್ಲ ತಮ್ಮ ಹೊಸ ಸೃಷ್ಟಿಯಲ್ಲಿ ಮಗ್ನರಾದರಲ್ಲದೇ ವರ್ಣಚಿತ್ರ ರಚನೆಗೂ ಆರಂಭಿಸಿದರು. ಈ ಏಕಲವ್ಯನಿಗೆ ಪ್ರಕೃತಿ ಮತ್ತದರ ಛಾಯಾಚಿತ್ರಗಳು ; ಅಂದಿನ ಕಾಲದ ಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿ ಪ್ರಕಟವಾಗುತ್ತಿದ್ದ ವರ್ಣಚಿತ್ರಗಳು, ಶಿಲ್ಪಕೆತ್ತನೆಗಳು–ಇವೇ ಗುರುಗಳಾದವು. ಇದರ ನಡುವೆ ಕಾಲೇಜು ತೊರೆದ ಆತಂಕ ನೀಗಲು ಆಂಗ್ಲ ಭಾಷೆಯಲ್ಲಿ ಕವನಗಳನ್ನು ರಚಿಸಲು ಪ್ರಾರಂಭಿಸಿದರು. ಆದರೆ, ಯಾರೂ ಪ್ರಕಾಶಕರು ಮುದ್ರಣಕ್ಕೆ ಮುಂದೆ ಬಾರದ್ದರಿಂದ ಬರವಣಿಗೆಯನ್ನು ಕೈ ಬಿಟ್ಟರು. ಇದರಿಂದ ಶಿಲ್ಪರಚನೆಯ ಕಡೆಗೆ ಪೂರ್ಣ ಮನಸ್ಸು ತೊಡಗಿಸಿಕೊಂಡು ಎಲ್ಲೆಲ್ಲಿ ಕೆತ್ತನೆಗಳಾಗುತ್ತವೋ, ಅಲ್ಲಿನ ಕೆಲಸಗಳನ್ನು ಗಮನಿಸುವುದು ಹಾಗೂ ಸ್ಥಾಪಿಸಿರುವ ವಿಗ್ರಹಗಳನ್ನು ನೋಡುವ ಹವ್ಯಾಸ ಬೆಳೆಸಿಕೊಂಡರು.

ಪ್ರಾರಂಭದಲ್ಲಿ ತನ್ನ ಮನೆಯ ಹೊರಗಡೆ ಇದ್ದ ಎರಡು ಕಲ್ಲು ಬೆಂಚುಗಳನ್ನು ಪ್ರಯೋಗದ ವಸ್ತುವಾಗಿಸಿಕೊಂಡರು. ದೊಡ್ಡ ದೊಡ್ಡ ಮೊಳೆಗಳ ಚೂಪುಬದಿಯನ್ನು ಸುತ್ತಿಗೆಯಿಂದ ಬಡಿದು ಉಳಿಯಂತೆ ಮಾಡಿಕೊಂಡು, ಕಬ್ಬಿಣದ ಕಂಬಿತುಂಡುಗಳನ್ನು ಬಡಿದು ಚೂಪು ಮಾಡಿಕೊಂಡು, ಮನಸ್ಸು ಕೇಂದ್ರೀಕರಿಸಿ ಕೆತ್ತನೆಯನ್ನು ಆರಂಭಿಸಿದರು. ಈ ಮಧ್ಯೆ 1971 ರಲ್ಲಿ ಪತ್ರಿಕೆಯೊಂದರಲ್ಲಿ ಮೈಸೂರಿನ ಖ್ಯಾತಿವೆತ್ತ "ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆ" (Chamarajendra Technical Institute-CTI–ಈಗಿನ CAVA) ಯಲ್ಲಿ 5 ವರ್ಷಗಳ ಯೋಗ್ಯತಾಪತ್ರ ತರಬೇತಿ (Certificate Course) ನೀಡುತ್ತಾರೆನ್ನುವ ಜಾಹೀರಾತನ್ನು ನೋಡಿದರು. ಫೀಜು ಕಟ್ಟಬೇಕಾಗಿಲ್ಲ ; ಬದಲು ರೂ.40/– ಮಾಸಿಕ ಸ್ಟೈಫಂಡ್ ಸಿಗುತ್ತದೆಂದು ತಿಳಿದು, ತಕ್ಷಣವೇ ಅರ್ಜಿ ಫಾರಂ ತಂದು ಭರ್ತಿಮಾಡಿ, ಮಾರನೆ ದಿನವೇ ಹೋಗಿ ಶಿಲ್ಪಕಲಾ ತರಬೇತಿಗೆ ಸೇರಿಕೊಂಡರು. ಇಲ್ಲಿ 3 ವರ್ಷ ಪ್ರಾರಂಭಿಕ ತರಬೇತಿ, ನಂತರ 2 ವರ್ಷ ಮುಂದುವರಿದ ತರಬೇತಿ–ಹೀಗೆ 5 ವರ್ಷಗಳ ಪೂರ್ಣಾವಧಿಯ ಕಲಿಕೆಯಾಗಿತ್ತು. ತಂದೆ ಇದಕ್ಕೆ ತಡೆಯೊಡ್ಡುತ್ತಾರೆಂದು ತಿಳಿದು ಅರ್ಜಿಗೆ ತನ್ನ ಸ್ನೇಹಿತರ ಕೈಯಿಂದ ತಂದೆಯ "ಪರವಾಗಿ" ಸಹಿ ಹಾಕಿಸಿ 1972 ರಲ್ಲಿ ಸೇರಿಕೊಂಡರು.

ತರಬೇತಿಗೆ ಹಾಜರಾದ ದಿನವೇ ಇವರಿಗೊಂದು ಅಘಾತಕರ ವಿಷಯ ತಿಳಿಯಿತು. ಅದೇನೆಂದರೆ ಇಡೀ 5 ವರ್ಷಗಳ ಶಿಲ್ಪಕಲಾ ತರಬೇತಿ ವಿಭಾಗದಲ್ಲಿ ಒಬ್ಬನೇ ಒಬ್ಬ ವಿದ್ಯಾರ್ಥಿ ಇದ್ದಾನೆ. ಅದೂ 4ನೇ ವರ್ಷ ತರಗತಿಯವನು ಎಂಬುದು ; ಕಿರಣ್ ಸೇರಿಕೊಂಡ ಮೇಲೆ ಇನ್ನೊಬ್ಬನೂ ಬಂದು ಸೇರಿಕೊಂಡ. ಹೀಗಾಗಿ ಇಡೀ ಶಿಲ್ಪ ತರಬೇತಿ ವಿಭಾಗದಲ್ಲಿ ತನ್ನನ್ನೂ ಸೇರಿಸಿ 3 ಜನ ವಿದ್ಯಾರ್ಥಿಗಳು. ಮನಸ್ಸಾರೆ ಆಸೆ ಪಟ್ಟು ಸೇರಿದ್ದರಿಂದ, ಅಲ್ಲಿ ಸರಿಯಾದ ಶಿಲ್ಪ ರಚನಾ ಸಾಧನಗಳನ್ನು ಅರ್ಥಾತ್ ಉಪಕರಣಗಳನ್ನು (Tools) ಪ್ರಯೋಗಿಸುವ ವಿಧಿವಿಧಾನಗಳನ್ನು ಕರತಲಾಮಲಕ ಮಾಡಿಕೊಂಡರು. ಕೆತ್ತನೆ ಕೆಲಸ ಇವರಿಗೆ ತ್ರಾಸವೆನ್ನಿಸಲೇ ಇಲ್ಲ. ಪ್ರಥಮ ವರ್ಷದ ಈ ವಿದ್ಯಾರ್ಥಿ ಇಡೀ ಐದು ವರ್ಷಗಳ ಪಠ್ಯಕ್ರಮಗಳನ್ನು ಒಂದೇ ವರ್ಷದಲ್ಲಿ ಮಾಡಿ ಮುಗಿಸಿದಾಗ ಅಧ್ಯಾಪಕರಿಗೇ ಅಚ್ಚರಿ ! ಪ್ರಥಮ ಪರೀಕ್ಷೆ ಮುಗಿದಂತೆಯೇ ನಾಲ್ಕನೆಯ ವರ್ಷದ ವಿದ್ಯಾರ್ಥಿಯ ಪರೀಕ್ಷಾ ಶಿಲ್ಪಗಳನ್ನೂ ಇವರಿಂದಲೇ ಮಾಡಿಸಿದ್ದರಂತೆ. ಅಲ್ಲದೆ, ಮರುವರ್ಷವೂ ಸಹ ಐದನೆಯ ವರ್ಷದ ಆತನ ಪರೀಕ್ಷಾ ಶಿಲ್ಪಗಳನ್ನು ಸಹ ಇವರಿಂದಲೇ ಕೆತ್ತನೆ ಮಾಡಿಸಿ ಆ ಪೆದ್ದನಿಗೆ "ಮುಂದುವರಿದ ತರಬೇತಿ ಯೋಗ್ಯತಾಪತ್ರ" (Advanced Training Certificate) ವನ್ನು ಸಿ.ಟಿ.ಐ. ನವರು ಕೊಟ್ಟರಂತೆ.

ಕಿರಣ್ ಮೂರನೆಯ ವರ್ಷದ ತರಗತಿಯಲ್ಲಿದ್ದಾಗ, ಅಧ್ಯಾಪಕರಿಗೆ ಖಾಸಗಿಯವರಿಂದ ಸಾಂಪ್ರದಾಯಿಕ ಶಿಲ್ಪಗಳನ್ನು ಮಾಡಿಕೊಡಲು ಬೇಡಿಕೆ ಬಂತಂತೆ. ಅಧ್ಯಾಪಕರು ಎರಡು ದೊಡ್ಡ ದೊಡ್ಡ ಕಲ್ಲುಗಳನ್ನು ವಾಸವಾಗಿದ್ದ ಅಗ್ರಹಾರದಲ್ಲಿನ ತಮ್ಮ ಮನೆಗೆ ಕೊಂಡೊಯ್ದು ಸಾಯಂಕಾಲ ಕಲಾಶಾಲೆ ಬಿಟ್ಟ ಮೇಲೆ ಮತ್ತು ರಜಾ ದಿನಗಳಲ್ಲಿ ಕೆತ್ತನೆ ನಡೆಸುತ್ತಿದ್ದರು. ಶಿಷ್ಯನ ಕೈಚಳಕದ ಸ್ಪಷ್ಟ ಅರಿವಿದ್ದ ಅವರು ಕೆಲಸದ ಆರಂಭದ ದಿನಗಳಲ್ಲಿ ಶಿಷ್ಯನನ್ನು ಕರೆದುಕೊಂಡು ಹೋಗಿ ಆ ಕಲ್ಲಿನ ಮೇಲೆ ಕತ್ತರಿಸಿದ ಕಾರ್ಡುಬೋರ್ಡ್‌ನ್ನು (Template) ಇಟ್ಟು ರೇಖೆಗಳನ್ನು ಎಳೆದು, ಬಾಕಿ ಉಳಿದ ಭಾಗಗಳನ್ನು ಕೆತ್ತಿ ತೆಗೆಯಲು ಬಿಡುತ್ತಿದ್ದರು. ಸಂಜೆ ಹೊತ್ತು ಕೆಲಸ ಮಾಡಲು ಮಾತ್ರ ಕರೆದುಕೊಂಡು ಹೋಗುತ್ತಿದ್ದ ಈ ಶಿಲ್ಪ ಗುರುಗಳು ಬೆಳಗ್ಗಿನಿಂದಲೇ ಕೆಲಸ ಮಾಡಿಸಲು ಆರಂಭಿಸಿದ ಕ್ರಮ ಹೇಗಿತ್ತೆಂದರೆ ; ಆ ಬೆಳಿಗ್ಗೆ ತರಬೇತಿ ಕೇಂದ್ರದಲ್ಲಿ ಹಾಜರಾತಿ ಹಾಕಿ ಸೈಕಲ್‌ನಲ್ಲಿ ಅಧ್ಯಾಪಕರ ಮನೆಗೆ ಹೋಗಿ ಕೆತ್ತನೆ ಕೆಲಸ ; ಮಧ್ಯಾಹ್ನ ತನ್ನ ಮನೆಗೆ ಹೋಗಿ ಊಟ ಮಾಡಿ ಕೇಂದ್ರಕ್ಕೆ ಬಂದು ಹಾಜರಾತಿ ಹಾಕಿ ಪುನಃ ಅಧ್ಯಾಪಕರ ಮನೆ ಕೆತ್ತನೆ ಕೆಲಸ, ಸಾಯಂಕಾಲ ಗುರುಗಳು ಬಂದು ಮಾರನೆ ದಿನ ಏನು ಮಾಡಬೇಕೆಂದು ಆದೇಶ ಕೊಡುತ್ತಿದ್ದರು. ಸಾಂಪ್ರದಾಯಿಕ ಕೆತ್ತನೆ ಕೆಲಸ ಕಲಿಯಬೇಕೆಂದಿದ್ದ ಹಂಬಲದಿಂದ ಕಿರಣ್ ಸುಬ್ಬಯ್ಯ ಗುರುಗಳ ಈ ಖಾಸಗಿ ಶಿಲ್ಪಕೆತ್ತನೆ ಕೆಲಸವನ್ನು ನಿರಂತರ ಮಾಡುತ್ತಾ ಬಂದರು. ಸತತವಾಗಿ ಕೆಲಸ ಮಾಡುತ್ತಿದ್ದ ಈತನನ್ನು ನೋಡಿ ಗುರುಪತ್ನಿ ಸಂಜೆ 4 ಗಂಟೆಯ ಸುಮಾರಿಗೆ ಒಂದು ಲೋಟ ಟೀ ಕೊಡುತ್ತಿದ್ದರಂತೆ. ಒಂದು ದಿನ ಬೇಗನೆ ಮನೆಗೆ ಹಿಂದಿರುಗಿದ ಗುರುಗಳು ಇದನ್ನು ಕಂಡು ಶಿಷ್ಯನ ಎದಿರೇ ಪತ್ನಿಯನ್ನು ಗದರಿಸಿ, "ಟೀ ಏಕೆ ಕೊಟ್ಟೆ ? ಹಾಲಿನ ಬೆಲೆ, ಟೀ ಪುಡಿ ಬೆಲೆ ಗೊತ್ತಿದೆಯಾ ನಿನಗೆ ?" ಎಂದು ದೂಷಿಸಿದನ್ನು ನೋಡಿ ಮನನೊಂದು, ಒಂದು ಕಪ್ ಟೀಗೂ ಗತಿ ಇಲ್ಲದವರ ಸ್ವಂತ ಕೆಲಸ ಮಾಡುತ್ತಿದ್ದೇನಲ್ಲಾ ಎಂದು ಕೋಪಗೊಂಡು, ಮಾರನೆಯ ದಿನದಿಂದ ಆ ಕೆಲಸ ಮಾಡಲು ನಿರಾಕರಿಸಿದರು. "ನಾನು ಸಿ.ಟಿ.ಐ.

ವಿದ್ಯಾರ್ಥಿ; ಇಲ್ಲಿ ತಂದುಕೊಟ್ಟಿದ್ದನ್ನು ಮಾತ್ರ ಮಾಡುತ್ತೇನೆ ; ಮನೆಗೆ ಬರುವುದಿಲ್ಲ" – ಎಂದು ಹೇಳಿದರು. "ನಾನು ಹೇಳಿದಾಗೆ ಬಂದು ಶಿಲ್ಪ ಕೆಲಸ ಮಾಡದಿದ್ದರೆ ನಿನ್ನನ್ನು ಪರೀಕ್ಷೆಯಲ್ಲಿ ಫೇಲು ಮಾಡುತ್ತೇನೆ. ಸರ್ಟಿಫಿಕೇಟ್ ಸಿಗದಿದ್ದರೆ ನೀನು ಶಿಲ್ಪಿಯಾಗೋದೆ ಇಲ್ಲ" – ಎಂದು ಗದರಿಸಿದಾಗ ಶಿಷ್ಯ ಕೋಪದಿಂದ "ನಿಮ್ಮ ಸರ್ಟಿಫಿಕೇಟ್ ಕೊಡದಿದ್ದರೆ ಅಷ್ಟೇ ಆಯ್ತು, ನನ್ನ ಸರ್ಟಿಫಿಕೇಟ್ ನನ್ನ ಕೈಯಲ್ಲಿದೆ ನೋಡಿ, ನಾನು ಶಿಲ್ಪಿಯಾಗಿಯೇ ತೀರುತ್ತೇನೆ" ಎಂದು ತಿರುಗೇಟು ನೀಡಿದ್ದರಂತೆ. ಮೂರನೆಯ ವಾರ್ಷಿಕ ಪರೀಕ್ಷೆಗೆ ಒಂದು ತಿಂಗಳು ಮಾತ್ರ ಇದ್ದಾಗ, ಗುರುಗಳು ಬೇಕೆಂದೇ ಒಂದು ಒರಟು ಕಲ್ಲನ್ನು ಇವರಿಗೆ ಕೊಟ್ಟು 6 ದಿವಸದೊಳಗೆ ಬುದ್ಧನ ರೂಪಶಿಲ್ಪ ಮಾಡಲು ಆದೇಶಿಸುತ್ತಾರೆ. (ಗಟ್ಟಿ ಕಲ್ಲನ್ನು ಕೇವಲ 5ನೆಯ ವರ್ಷದ ಕೊನೆಯ ಪರೀಕ್ಷೆಗೆ ಮಾತ್ರ ಕೊಡುವುದು ವಾಡಿಕೆಯಂತೆ). ಇದನ್ನು ತಿಳಿದ ಶಿಷ್ಯ ಕೇವಲ 3 ದಿವಸಗಳಲ್ಲೇ ಶಿಲ್ಪವನ್ನು ಪೂರೈಸಿ ಕೊಟ್ಟಾಗ ಏನೂ ಮಾಡಲಿಕ್ಕಾಗದೆ ಸುಮ್ಮನೆ ಆದ ಆ ಶಿಲ್ಪ ಗುರುಗಳು ಬೇಕೆಂದೇ ಇವರ ಫಲಿತಾಂಶವನ್ನು ತಡೆಹಿಡಿಸಿದರಂತೆ. ಮಾತಿಗೆ ಮಾತು ಬೆಳೆದು ಈ ವಿಷಯ ಕೊನೆಗೆ ಪ್ರಾಂಶುಪಾಲರಿಗೆ ತಲುಪಿ ಅವರು ಕಿರಣ್‌ನನ್ನು ಕರೆದು "ಏನಯ್ಯಾ ಎಲ್ಲಾ ವಿದ್ಯೆ ಗೊತ್ತಿರುವವನಂತೆ ಆಡುತ್ತೀಯಂತಲ್ಲ? ಮೇಸ್ತ್ರಿಗಿಂತ ನಿನಗೇ ಜಾಸ್ತಿ ಗೊತ್ತಂತೆ ! ಅವರ ಮಾತು ಏನೂ ಕೇಳೋದೆ ಇಲ್ವಂತೆ ? ನಿನ್ನನ್ನು ಮುಂದುವರಿದ ತರಬೇತಿಗೆ ಸೇರಿಸಿಕೊಳ್ಳೋಲ್ಲ ; ಈವರೆಗಿನ 3 ವರ್ಷಗಳ ಸರ್ಟಿಫಿಕೇಟ್ ಕೊಡುತ್ತೇವೆ ತೆಗೆದುಕೊಂಡು ಹೋಗು"–ಎಂದು ಆದೇಶಿಸಿದರು. ಬೇರೆ ದಾರಿ ಕಾಣದೆ, ಇನ್ನು ಇಲ್ಲಿ ಕಲಿಯುವುದೂ ಅಷ್ಟರಲ್ಲೇ ಇದೆ ! ಎಂದು ಸಿ.ಟಿ.ಐ. ನ್ನು ಅರ್ಧಕ್ಕೆ ಬಿಡಬೇಕಾಯಿತು.

1974 ರಲ್ಲಿ ಸಿ.ಟಿ.ಐ. ನಲ್ಲಿ ಕಲಿಯುತ್ತಿರುವಾಗ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯವರು ಬೆಂಗಳೂರಿನಲ್ಲಿ ಪ್ರಾಯೋಜಿಸಿದ್ದ ಅಖಿಲ ಭಾರತ ಶಿಲ್ಪಕಲಾ ಶಿಬಿರದಲ್ಲಿ (All India Sculptors Camp) ಕಲಿಕೆಗೆ ನೋಡುಗನಾಗಿ ಭಾಗವಹಿಸಲು ಕಿರಣ್‌ರವರನ್ನು ಕಳುಹಿಸಿದ್ದರು. ದೇಶದ ಬೇರೆ ಬೇರೆ ಪ್ರಾಂತ್ಯದ "ಕುಶಲ ಶಿಲ್ಪಿಗಳು" (Master Sculptors) ಬಂದು ಮರ ಕೆತ್ತನೆ, ಶಿಲಾ ಶಿಲ್ಪ ಕೆತ್ತನೆ, ಲೋಹ ಶಿಲ್ಪ ನಿರ್ಮಾಣಗಳಲ್ಲಿ ತಮ್ಮ ನೈಪುಣ್ಯತೆಗಳನ್ನು ಉದಯೋನ್ಮುಖ ಶಿಲ್ಪಿಗಳಿಗೆ ಕಲಿಸಲೆಂದೇ ಈ ಯೋಜನೆಯಾಗಿತ್ತು. ಬೆಂಗಳೂರಿನ ಅಪ್ಪುಕುಟ್ಟನ್ ಆಚಾರ್–ಎನ್ನುವ ಕಾಷ್ಠ ಶಿಲ್ಪಿ ಸಮಕಾಲೀನ ಶಿಲ್ಪವನ್ನು ಮರದಲ್ಲಿ ಕೆತ್ತುವುದನ್ನು ಪೂರ್ಣ ವೀಕ್ಷಿಸಿದ ಕಿರಣ್ ಪ್ರಭಾವಿತರಾಗಿ ಮುಂದೆ ಅದೇ ವಿಧಾನವನ್ನು ಅಳವಡಿಸಿಕೊಂಡು ಅನೇಕ ಕಾಷ್ಠ ಶಿಲ್ಪಗಳನ್ನು ಕೆತ್ತಿದರಂತೆ. ಇದೇ ಶಿಬಿರದಲ್ಲಿ ಬೆಂಗಳೂರಿನ ಮತ್ತೊಬ್ಬ 'ಕುಶಲ ಶಿಲ್ಪಿ' ಭಾಗವಹಿಸಿದ್ದು ನಡೆದ ಆಗಿನ ಪ್ರಸಂಗವನ್ನು ಕಿರಣ್ ಈಗಲೂ ನೆನಪಿಸಿಕೊಳ್ಳುತ್ತಾರೆ. 3 ಅಡಿ ಎತ್ತರದ ಕಲ್ಲನ್ನು ಮೇಜಿನ ಮೇಲೆ ಇರಿಸಿ, ಆತ ತನ್ನೊಡನೆ ತಂದಿದ್ದ ಒಂದು ಸಣ್ಣ ಮೇಣದ "ಮಾಡೆಲ್"ನ್ನು ಡ್ರಾಯರ್‌ನಿಂದ ತೆಗೆದು ಕಲ್ಲನ್ನು ಎಲ್ಲಾ ದಿಕ್ಕುಗಳಿಂದ ನೋಡಿ ನಂತರ ಗುರುತು ಮಾಡಿ ಕೆತ್ತನೆ ಪ್ರಾರಂಭಿಸಿದರಂತೆ! ಇವರ ಕೆತ್ತನೆಯ ವಿಶೇಷತೆ ಎಂದರೆ ಉಳಿ, ಸುತ್ತಿಗೆ ಪ್ರಯೋಗಿಸದೇ ಬರೇ ಉಳಿಯಲ್ಲೇ ಕಲ್ಲನ್ನು ಕೆರೆದು ಕೆರೆದು ತೆಗೆಯಲು ಹೊರಟರಂತೆ. ಮೆದುಕಲ್ಲು ಆಗಿರುವುದರಿಂದ (Soap Stone), ಬರೀ ಕೆರೆದೇ ಮುಗಿಸಬಹುದೆಂದು ಆ ಕಲಾವಿದ ಭಾವಿಸಿದ್ದ ; ನೋಡಲು ಸುತ್ತುವರಿದಿದ್ದ ಹುಡುಗರೆಲ್ಲಾ ಜೋರಾಗಿ ನಗಲು ಪ್ರಾರಂಭಿಸಿದರಂತೆ. ಒಬ್ಬ 'ವರ್ಣಚಿತ್ರ ಕಲಾವಿದ' ದೊಡ್ಡವರ ಕೃಪಕಟಾಕ್ಷದಿಂದ "ಕುಶಲ ಶಿಲ್ಪಿ" ಆಗಿ ಅಲ್ಲಿಗೆ ಸೇರಿಸಲ್ಪಟ್ಟಿದ್ದ ! ಈತನ ಕೆತ್ತನೆ ಕ್ರಮ ನೋಡಿ ಅಯ್ಯೋ ಪಾಪ ಎಂದು ತಿಳಿದು ಕಿರಣ್ ತಾನೇ ಹೋಗಿ ಉಳಿ–ಸುತ್ತಿಗೆ ಹಿಡಿದು ಒಂದು ಭಾಗದ ಕಲ್ಲನ್ನು ಕೆತ್ತಿ ಕೆತ್ತಿ ತೆಗೆದು, ಈ ರೀತಿ ಕೆತ್ತನೆ ಮಾಡಿರೆಂದು ಹೇಳಿದರಂತೆ. ದೂರದಲ್ಲಿ ಇದನ್ನೆಲ್ಲಾ ನೋಡುತ್ತಿದ್ದ ಒಬ್ಬ ವ್ಯಕ್ತಿ ಕಿರಣ್‌ರನ್ನು ಪಕ್ಕಕ್ಕೆ ಕರೆದು, "ಆ ಶಿಲ್ಪ ಕೆತ್ತಲು ಸಹಾಯಕನಾಗಿ ಕೆಲಸ ಮಾಡು, ನಾನು ಯಾರನ್ನು ಬೇಕಾದರೂ ದೇಶ ವಿದೇಶಗಳಿಗೆ ತರಬೇತಿಗಾಗಿ ಕಳಿಸುವ ತಾಕತ್ತಿದೆ, ನಿನಗೂ ವಿದೇಶಕ್ಕೆ ಹೋಗಲು ಅವಕಾಶ ಮಾಡುತ್ತೇನೆ" ಎಂದು ಹೇಳಿದನಂತೆ. ತಾನು ಇಲ್ಲಿ ಕಲಿಯಲು ಬಂದವನು, ಶಿಲ್ಪ ಕೆತ್ತಲು ಸಹಾಯಮಾಡಿದರೆ ಅದು ತಪ್ಪಾಗುತ್ತದೆ. ಅವರ ಶಿಲ್ಪ ಅವರೇ ಮಾಡಲಿ ಎಂದು ನಿಷ್ಠುರವಾಗಿ ಹೇಳಿ ಹೊರನಡೆದರಂತೆ. ಶಿಲ್ಪಕ್ಷೇತ್ರದ ಅನುಭವವಿಲ್ಲದಿದ್ದರೂ ಶಿಫಾರಸ್ಸು, ದೊಡ್ಡವರ ಅನುಗ್ರಹವಿದ್ದರೆ ಹೇಗೆ ಆಯ್ಕೆಯಾಗುತ್ತಾರೆಂಬ ಕಟುಸತ್ಯದರ್ಶನ ಇವರಿಗಾಯಿತು. ಹಾಗೆಯೇ ಕೆಲಸವನ್ನು ಕಲಿಯದೇ ಎಂದೂ ತನ್ನ ಜೀವಮಾನದಲ್ಲಿ ಶಿಬಿರ ಶಿಲ್ಪಿಯಾಗಿ ಹೋಗಬಾರದೆಂದು ನಿರ್ಧರಿಸಿ ಇತರ ಅನೇಕ ಶಿಲ್ಪಿಗಳು ಮಾಡುತ್ತಿದ್ದ ಕೆತ್ತನೆಗಳನ್ನು ನೋಡಿ ಅವರೊಡನೆ ಸಂವಾದ ನಡೆಸಿ, ಸಮಕಾಲೀನ ಶಿಲ್ಪರಚನೆಯ ಅನೇಕ ತತ್ವಗಳನ್ನು ಮನದಟ್ಟು ಮಾಡಿಕೊಂಡದ್ದನ್ನು

ನೆನಸಿಕೊಳ್ಳುತ್ತಾ, ಇಂದಿಗೂ ಶಿಲ್ಪಕಲೆಯ ಬಗ್ಗೆ ಕಿಂಚಿತ್ತೂ ಅರಿವಿಲ್ಲದವರು, ಸದಸ್ಯರಾಗಿ, ಶಿಲ್ಪ ಶಿಬಿರಗಳಿಗೆ ಆಯ್ಕೆಯಾಗಿ, ಯಾರಿಂದಲೋ ಮಾಡಿಸಿ ತನ್ನದೆಂದು ಹೇಳುವವರಿದ್ದಾರೆಂದು ತಾವು ಕಂಡದ್ದನ್ನು ನಿರ್ಭಿಡೆಯಿಂದ ಹೇಳುತ್ತಾರೆ.

ಸಿ.ಟಿ.ಐ. ಬಿಡಬೇಕಾದ ಪ್ರಮೇಯದ ನಂತರ ಕೇವಲ ಹತ್ತೇ ತಿಂಗಳಿನಲ್ಲಿ ಸುಮಾರು 45 ಶಿಲ್ಪಗಳನ್ನು ಹಾಗೂ ವರ್ಣಚಿತ್ರಗಳನ್ನು ಮಾಡಿ ತಮ್ಮ ಪ್ರಥಮ 'ಏಕವ್ಯಕ್ತಿ ಪ್ರದರ್ಶನ' ವನ್ನು 1976 ರಲ್ಲಿ ಮೈಸೂರು ರೋಟರಿ ಸಂಸ್ಥೆಯ ಮುಖಾಂತರ ಏರ್ಪಡಿಸಿದರು. ಈ ಪ್ರದರ್ಶನದ ಉದ್ಘಾಟನೆಯನ್ನು ಮಾಡಿದ ಅಂದಿನ ಮೈಸೂರಿನ ಖ್ಯಾತ ಉದ್ಯಮಿಯೂ, 'ಜಾವಾ ಫ್ಯಾಕ್ಟರಿ" ಮಾಲೀಕರೂ ಆಗಿದ್ದ ದಿವಂಗತ ಪಿ.ಡಿ.ಜಿ. ಎಫ್.ಕೆ. ಇರಾನಿರವರು ತುಂಬಾ ಪ್ರಭಾವಿತರಾಗಿ ಶಿಲ್ಪಿಗೆ ತಕ್ಕ ಪ್ರೋತ್ಸಾಹನೀಡಬೇಕೆನ್ನುವ ಹಂಬಲದಿಂದ ತಮ್ಮ ಕಾರನ್ನು ಅಂದೇ ಸಂಜೆ ಕಿರಣ್‌ರವರ ಮನೆಗೆ ಕಳಿಸಿ ಅವರನ್ನು ಕರೆಸಿಕೊಂಡು ಅಂದೇ ಅವರಿಗೆ ತಮ್ಮ ಫ್ಯಾಕ್ಟರಿಯ "ಡಿಸೈನ್ ವಿಭಾಗದಲ್ಲಿ" "ಆರ್ಟಿಸ್ಟ್" ಹುದ್ದೆಯನ್ನು ನೀಡಿದರು. ಅಂದಿನ ಕಾಲದಲ್ಲಿ 'ಜಾವಾ' ಎಂದರೆ ಸಾಕು. ಎಲ್ಲೆಲ್ಲಿಂದೆಲ್ಲೋ ಪ್ರಭಾವ ಬೀರಿ ಕೆಲಸಗಿಟ್ಟಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಅಂತಹದ್ದರಲ್ಲಿ ಕೆಲಸ ಸಿಕ್ಕಿದ ಎರಡನೆಯ ದಿವಸವೇ ಇವರು ಕೆಲಸ ಬಿಟ್ಟುಬಿಟ್ಟರು. ಮನೆ ಬಾಗಿಲಿಗೆ ಒಲಿದು ಬಂದ ಲಕ್ಷ್ಮಿಯನ್ನು ತುಳಿದುಬಿಟ್ಟ ; ಇವನನ್ನು ಉದ್ಧಾರ ಮಾಡೋದು ಹೇಗೆಂದು ಮಾತಾಪಿತ್ರರು ವಾಚಾಮಗೋಚರವಾಗಿ ಬಯ್ದರೂ ಅದ್ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದೆ, ಶಿಲ್ಪಿಯಾಗೋದೆ ತನ್ನ ಪರಮಧ್ಯೇಯವೆಂದು ಛಲದಿಂದ ಶಿಲ್ಪರಚನಾ ಕಾರ್ಯಕ್ಕೆ ತೊಡಗುತ್ತಾರೆ. ಈ ಪ್ರಸಂಗ ನಡೆದು ಕೆಲವೇ ವರ್ಷಗಳಲ್ಲಿ "ಜಾವಾ" ಫ್ಯಾಕ್ಟರಿಯೇ ಮುಚ್ಚಿಹೋಗಿ ಸಾವಿರದಷ್ಟು ಕೆಲಸಗಾರರು ಬೀದಿ ಪಾಲಾಗಿ ಹೋದರು. ದೇವರೇ ಇಂತಹ ಪ್ರಸಂಗದಿಂದ ತನ್ನನ್ನು ಪಾರುಮಾಡಿದನೆಂದು ಕಿರಣ್ ಈಗಲೂ ನೆನೆಯುತ್ತಾರೆ.

ಸ್ವತಂತ್ರವಾಗಿ ಶಿಲ್ಪಕಲಾ ಪ್ರೌಢಿಮೆಯನ್ನು ಮೆರೆದಂತೆಲ್ಲಾ (ಸಿ.ಟಿ.ಐ.ಬಿಟ್ಟ ಅನೇಕ ವರ್ಷಗಳ ನಂತರ) ಇವರನ್ನು ಅಲ್ಲಿಂದ ಹೊರದೂಡಿಸಿದ್ದ ಅಧ್ಯಾಪಕರೇ ಇವರ ಮನೆಗೆ ಬಂದು, ತಾನು ಅಧ್ಯಾಪಕ ವೃತ್ತಿಯಿಂದ ನಿವೃತ್ತಿಹೊಂದುತ್ತಿರುವುದಾಗಿಯೂ, ಆ ಹುದ್ದೆಗೆ ಕಿರಣ್ ನೀನು ಖಂಡಿತ ಅರ್ಜಿ ಹಾಕಬೇಕೆಂದೂ ಒತ್ತಾಯಿಸಿದ್ದರಂತೆ. ತಮ್ಮ ನಿವೃತ್ತಿ ನಂತರ ಸಿ.ಟಿ.ಐ.ನ ಶಿಲ್ಪಕಲಾ ವಿಭಾಗ ಮುಚ್ಚುವಂತಾಗಬಾರದೆಂದು ಅವರ ಅಳಲು. ಆದರೆ ತನ್ನ ಬಳಿ ಯಾವುದೇ "ಯೋಗ್ಯತಾ ಪತ್ರ" ಇಲ್ಲದಿರುವ ಕಾರಣ ಕೆಲಸ ಕೊಡುವುದು ಹೇಗೆ? ಎಂದು ಇವರು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ, ಅದರ ಯೋಚನೆ ಬಿಡಿ, ಸ್ವತಃ ನಾನೇ ಶಿಫಾರಸ್ಸು ಮಾಡಿ ಕೊಡಿಸುತ್ತೇನೆಂದು ಕೇಳಿಕೊಂಡರಂತೆ. ಕೆಲಸ ಸಿಕ್ಕಿದಲ್ಲಿ ಪ್ರತಿ ತಿಂಗಳು ಸಂಬಳ ಆಮೇಲೆ ಪಿಂಚಣಿ ಸಿಗುತ್ತದೆಂದು ಇವರ ತಂದೆ ತಾಯಿಯರೂ ಸಹ ಒತ್ತಾಸೆ ಮಾಡಿದರು. ಆದರೆ ಕಿರಣ್ ರವರು ಹುಡುಗರೇ ಕಲಿಯಲಿಕ್ಕೆ ಬಾರದ, ಏನೂ ಕೆಲಸವಿಲ್ಲದ ಸಿ.ಟಿ.ಐ. ಅಧ್ಯಾಪಕ ಹುದ್ದೆ ತನ್ನ ಶಿಲ್ಪಕಲಾ ಸಾಧನೆಗೆ ದೊಡ್ಡ ತೊಡಕು ಉಂಟುಮಾಡುತ್ತದೆಂದು ಒಪ್ಪಲೇ ಇಲ್ಲ. ಕಲಿಯುವ ಸಂಸ್ಥೆಯಿಂದಲೇ ತಮ್ಮನ್ನು ಹೊರಹಾಕಿಸಿದ್ದ ಗುರುಗಳೇ ಹಿಂದಿನ ಘಟನೆಗಳನ್ನೆಲ್ಲಾ ಮರೆತು ತಮ್ಮ ಹುದ್ದೆಯನ್ನೇ ಅಲಂಕರಿಸೆಂದು ಕೇಳಿದ ಆ ಘಳಿಗೆಯನ್ನು ನೆನೆಯುತ್ತ ಗುರುಗಳ ಹೃದಯ ವೈಶಾಲ್ಯತೆಯನ್ನು ಹೊಗಳುತ್ತಾರೆ.

## ಸ್ವತಂತ್ರ ಶಿಲ್ಪ ರಚನಾ ಕೆಲಸ :

ಮೇಲಿನ ಎಲ್ಲಾ ಅನುಭವಗಳನ್ನು ಅರ್ಥಮಾಡಿಕೊಂಡು ತನ್ನ ಸ್ವತಂತ್ರ ಕಲಾಶಿಲ್ಪರಚನೆಯ ಕಡೆಗೇ ಹೆಚ್ಚಿನ ಒತ್ತುಕೊಟ್ಟು ಮುನ್ನಡೆದ ಕಿರಣ್‌ರವರು ಪೂರ್ಣ ಪ್ರಮಾಣದ ಶಿಲ್ಪಿಗಳಾಗಿ ತಳವೂರಿದರು. ಆಗಿನ ಸಂದರ್ಭದಲ್ಲಿ ಮೈಸೂರಿನ ಸುತ್ತಮುತ್ತ ಇರುವ ದೇವಸ್ಥಾನಗಳಿಗೆ ಅಲ್ಲದೆ ಹೊರಗಿನ ದೇವಸ್ಥಾನಗಳಿಗೂ ಸಾಂಪ್ರದಾಯಿಕ ಶಿಲ್ಪಗಳನ್ನು ಮಾಡಿಕೊಡಲು ಪ್ರಾರಂಭಿಸಿದರು. ಇದರ ಜೊತೆಗೆ ಸಮಕಾಲೀನ ಶಿಲ್ಪಗಳನ್ನೂ ಸಾಕಷ್ಟು ಮಾಡಿ ಮಾರಾಟ ಮಾಡುತ್ತಿದ್ದರು. ಆಗ ಮೂರು ನಾಲ್ಕು ಜನ ಕಿರಿಯ ಶಿಲ್ಪಿಗಳ ಸಹಕಾರ ಪಡೆದು ಅವರಿಂದ ಪ್ರಾರಂಭಿಕ ಒರಟು ಕೆಲಸಗಳನ್ನು ಮಾಡಿಸಿ ಕೊನೆಯ ಹಂತದ ರೂಪ, ಕೆತ್ತನೆಗಳನ್ನೆಲ್ಲಾ ಇವರೇ ಮಾಡುತ್ತಿದ್ದರು. ಆಗಿನ ಸಂದರ್ಭದಲ್ಲಿ ಅವರೇ ಹೇಳುವಂತೆ ಸುಮಾರು 850 ರಿಂದ 900 ಶಿಲ್ಪಗಳನ್ನು ಕೆತ್ತಿ ಮಾರಾಟ ಮಾಡಿರುತ್ತಾರೆ.

ಮುಂದೆ ಶಿಲ್ಪ ಮಾರಾಟವನ್ನು ಸ್ವಯಂ ಪ್ರೇರಣೆಯಿಂದ ಸ್ಥಗಿತಗೊಳಿಸಿದ ನಂತರ ಎಲ್ಲ ಸಹಾಯಕರನ್ನೂ ಒಬ್ಬೊಬ್ಬರನ್ನಾಗಿ ಕಳುಹಿಸಿ ಕೊನೆಗೆ ತಾವೇ ಸಂಪೂರ್ಣ ಕೆತ್ತನೆಯನ್ನು ಮಾಡುತ್ತ ಬಂದಿದ್ದಾರೆ. ಏಕ ಶಿಲೆಯಲ್ಲಿ ಬಹುಮುಖಿ

ಶಿಲ್ಪಗಳನ್ನು ಕೆತ್ತುವಾಗಲಂತೂ ಏಕಾಗ್ರಚಿತ್ತದಿಂದ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ನಡೆದ "MANPHO 2011 Art and Craft Exhibition" ನಲ್ಲಿ ಕಿರಣ್‌ರವರನ್ನು "ಬಹುಮುಖಿ ಶಿಲ್ಪಗಳ ರಾಜ" (King of Multi-sided Sculptures) ಎಂದು ಕರೆದು ಸನ್ಮಾನಿಸಿದರು. ಹಾಗೆಯೇ **"9ನೇ ಅಂತರರಾಷ್ಟ್ರೀಯ ಗ್ರಾನೈಟ್ ಮತ್ತು ಶಿಲಾ ಮೇಳ 2011"**ರ ಸಂದರ್ಭದಲ್ಲಿ ಕಿರಣ್‌ರವರನ್ನು "ಬದುಕಿರುವ ಐತಿಹ್ಯ ಪುರುಷ" (The Living Legend) ಎಂದು ಕರೆದರಂತೆ ! ಇಂತಹ ಸನ್ಮಾನಗಳು ತನ್ನ ಶಿಲ್ಪ ಕಲಾವೃದ್ಧಿಗೆ ಪೂರಕವಾಗಿವೆ ಎನ್ನುತ್ತಾರವರು.

## ಶಿಲಾ ಶಿಲ್ಪ ಮಾಧ್ಯಮದ ವಿವರ :

ಕಿರಣ್‌ರವರ ಶಿಲ್ಪಗಳನ್ನು ನೋಡುತ್ತಾ ಹೋದಂತೆ ಕಲ್ಲಿನಿಂದ ಮಾಡಿರುವುದೇ ಅಧಿಕವಾಗಿದ್ದು, ಕನ್ಯೆಯ ಕೆನ್ನೆಯನ್ನು ಮುಟ್ಟಿದರೆ ಆಗುವ ಅನುಭವದಂತೆ ನುಣುಪು ಮತ್ತು ಅವುಗಳ ಕಣ್ಣುಗಳನ್ನು ಕಂಡಾಗ ರಾಗದ್ವೇಷರಹಿತವಾದ ಸುಕೋಮಲತೆಯ ಸಾಂತ್ವನದ ಇಲ್ಲವೇ ತನ್ನ ಕಣ್ಣಿಂಚಿನ ಕುಡಿನೋಟದಲ್ಲಿ ಯುವ ಮನಸ್ಸುಗಳನ್ನು ಸೆಳೆಯುವಂತೆ ಕೆತ್ತಿರುವ ಆ ಕಲ್ಲುಗಳನ್ನು ಎಲ್ಲಿಂದ ತರುತ್ತೀರಿ? ಅದರ ಮರ್ಮವನ್ನು ಒಂದಿಷ್ಟು ತಿಳಿಸಿ, ಎಂದಾಗ ತಮ್ಮ ಸಹಜ ನಡೆಯಾದ ಸಿಗರೇಟ್ ಒಂದನ್ನು ಬಾಯಲ್ಲಿಟ್ಟು ಕಡ್ಡಿಗೀರಿ ಹಚ್ಚಿಕೊಂಡು ಒಂದು ದಮ್ ಎಳೆದು, ಕಲ್ಲಿನ ಪಂಚಾಂಗ ಹೇಳುತ್ತಾ ಹೊರಟರು.

ತಮ್ಮ ಎಲ್ಲಾ ಪಾರಂಪರಿಕ, ಸಾಂಪ್ರದಾಯಿಕ ಹಾಗೂ ಸಮಕಾಲೀನ ಶಿಲ್ಪಗಳಿಗೆ ಉಪಯೋಗಿಸಿರುವುದು ಕೃಷ್ಣಶಿಲೆ. ಇದನ್ನು ಕರಿಕಲ್ಲು ಎಂದೂ ಇಂಗ್ಲೀಷ್‌ನಲ್ಲಿ Soap Stone ಎಂದೂ ತಾಂತ್ರಿಕ ಭಾಷೆಯಲ್ಲಿ Steatite ಎಂದೂ ಕರೆಯುತ್ತಾರೆ. ಇದು ಸ್ವಲ್ಪ ಹಸಿರು-ನೀಲಿ ಬಣ್ಣಕ್ಕೆ ತಿರುಗಿರುವ ಕಲ್ಲು. ಅನೇಕರು ಇದನ್ನು ಬಳಪದ ಕಲ್ಲೆಂದೂ, ಬಹಳ ಮೆದುವೆಂದೂ ಭಾವಿಸಿದ್ದಾರೆ. ಆದರೆ ಅದು ತಪ್ಪು ಕಲ್ಪನೆಯಷ್ಟೆ. ಅನೇಕ ವಿಧಗಳಲ್ಲಿ ಇದು ಲಭ್ಯ.

1) **ಬಹಳ ಮೆದುವಿದ್ದು ಅತ್ಯಂತ ಸಣ್ಣ ನಾಜೂಕು ಎಳೆಗಳು (grains) ಇರುವಂತದ್ದು :**
   ಇದನ್ನು ಗ್ರಾಮಾಂತರಗಳಲ್ಲಿ ಸಾಮಾನ್ಯವಾಗಿ ಕಲ್ಲಿನ ದೀಪಗಳಿಗೆ, ದೋಸೆ ಕಲ್ಲುಗಳಿಗೆ, ಮತ್ತಿತರ ಸಾಮಾಗ್ರಿಗಳಿಗೆ ಬಳಸುತ್ತಾರೆ. ಸೂಕ್ಷ್ಮ ಕೆತ್ತನೆಗೆ ಇದು ಸೂಕ್ತವಾದುದಲ್ಲ. ಮಾಡಿದರೆ ಬಾಳಿಕೆ ಬರುವುದಿಲ್ಲ.

2) **ಮೆದು ಮತ್ತು ಕಾಠಿಣ್ಯ ಸಮಪ್ರಮಾಣದಲ್ಲಿರುವ (ಮಧ್ಯಮ) ಸಣ್ಣ-ನಾಜೂಕು ಎಳೆಗಳಿರುವ ಕಲ್ಲು :**
   ಇದನ್ನು ಸಂಪ್ರದಾಯಿಕ ಶಿಲ್ಪಗಳಿಗೆ ಅನೇಕರು ಬಳಸುತ್ತಾರೆ. ಸುಲಭದಲ್ಲಿ ಉಳಿಯಿಂದ ಕೆತ್ತಿ, ನಾಜೂಕು ಕೆತ್ತನೆ ವಿನ್ಯಾಸಗಳನ್ನು ಮಾಡಬಹುದು ; ಹಾಗೂ ತ್ವರಿತವಾಗಿ ನಯಗೊಳಿಸಬಹುದು.

3) **ಸ್ವಲ್ಪ ಗಟ್ಟಿ ಇದ್ದು ಸಣ್ಣ ನಾಜೂಕು ಎಳೆಗಳಿರುವಂತದ್ದು :**
   ಈ ಕಲ್ಲನ್ನು ದೊಡ್ಡ ಗಾತ್ರದ ಶಿಲ್ಪಗಳಿಗೆ ಹಾಗೂ ನಾಜೂಕು ಕೆತ್ತನೆ ವಿನ್ಯಾಸಗಳಿಗೆ ಉಪಯೋಗಿಸಬಹುದು. ಇದು ಪರಿಸರದ ವ್ಯತಿರಿಕ್ತ ಪರಿಣಾಮಗಳನ್ನು ತಡೆದುಕೊಂಡು ಹೆಚ್ಚಿನ ಬಾಳಿಕೆ ಮತ್ತು ಸದೃಢತೆಯನ್ನು ಕೊಡುತ್ತದೆ. ಆದರೆ ಕೆತ್ತನೆಗೆ ಹೆಚ್ಚು ಕಾಲಾವಕಾಶವಿರಬೇಕಾಗುತ್ತದೆ.

4) **ಬಹಳ ಗಡುಸಾಗಿದ್ದು ಸಣ್ಣ ಹಾಗೂ ದೊಡ್ಡ ಎಳೆಗಳನ್ನು ಹೊಂದಿರುವಂತದ್ದು :**
   ಈ ಕಲ್ಲನ್ನು ಅನೇಕ ಶಿಲ್ಪಿಗಳು ಇಷ್ಟಪಡುವುದಿಲ್ಲ. ಇದರಲ್ಲಿ ನಯ ನಾಜೂಕು ಕೆತ್ತನೆಗಳನ್ನು ಮಾಡಲು ಬಹಳ ಶ್ರಮಪಡಬೇಕಾಗುತ್ತದೆ. ಅಲ್ಲದೆ ತುಂಬ ಸಮಯ ಹಿಡಿಯುತ್ತದೆ.

ಈ ಮೇಲಿನ ಶಿಲೆಗಳಲ್ಲಿ ಕೆಲವು ದೋಷಗಳು, ನ್ಯೂನತೆ-ಕುಂದುಕೊರತೆಗಳು ಸೇರಿಕೊಂಡು ತೊಂದರೆ ಕೊಡುತ್ತವೆ. ಕಲ್ಲನ್ನು ತೆಗೆದುಕೊಳ್ಳುವಾಗ "ಕೋರೆ"ಗಳಿಗೇ ಹೋಗಿ ಸೂಕ್ಷ್ಮವಾಗಿ ಪರಿಶೋಧಿಸಿ ಪಡೆದುಕೊಳ್ಳಬೇಕು. ದೋಷಗಳ ಬಗ್ಗೆ ತಿಳುವಳಿಕೆ ಇಲ್ಲದಿದ್ದರೆ ಮುಂದೆ ತೊಂದರೆ ಖಂಡಿತ. "ಊತಕಲ್ಲು" ಎನ್ನುವುದು ಒಂದು ರೀತಿಯ ಮಣ್ಣಿನ ಅಂಶ ಕಲ್ಲಿನಲ್ಲಿ ಸೇರಿಕೊಂಡು ಕೆತ್ತುವಾಗ ಪುಡಿಯಾಗುವಂತದ್ದು. "ಪೊರೆ"ಯಾ "ಅಂಟುಕಲ್ಲು" ಎನ್ನುವುದು ಕಲ್ಲಿನಲ್ಲಿ ಸೀಳಿಕೊಂಡಂತ ಗುರುತು ಇದ್ದು ಕೆತ್ತನೆ ಮಾಡುವಾಗ ಎರಡು ಹೋಳಾಗಿ ಒಡೆದು ಹೋಗುವಂತದ್ದು ; "ಬೆಂಚ್‌ಕಲ್ ಎಳೆ" ಎನ್ನುವುದು ಕಲ್ಲಿನಲ್ಲಿ

ನೇರವಾಗಿ ದಪ್ಪಗೆ ಗಟ್ಟಿಯಾಗಿ ಉದ್ದಕ್ಕೆ ಗುರುತು ಎದ್ದುಕಾಣುವಂತಿದ್ದು, ಕೆತ್ತುವಾಗ ಹೋಳಾಗದಿದ್ದರೂ ಸಹ ಯಾವುದೇ ಸೂಕ್ಷ್ಮ ಕೆತ್ತನೆ ಮಾಡುವುದು ಕಷ್ಟವಾಗುವಂತದ್ದು ; "ಬೆಂಚ್‌ಕಲ್ ಕಾಳು" ಎನ್ನುವುದು ಕಲ್ಲಿನ ಮೇಲೆಲ್ಲಾ ಗಟ್ಟಿಯಾದ ಒರಟು ಭಾಗವಿದ್ದು ಅದರ ಮೇಲೆ ಯಾವುದೇ ಕೆತ್ತನೆಯನ್ನಾಗಲೀ ವಿನ್ಯಾಸಗಳನ್ನಾಗಲೀ ಮಾಡುವುದು ಬಹಳ ಕಷ್ಟವಾಗುವಂತದ್ದು. ಈ ರೀತಿಯ ವಿವರಣೆ ನೀಡುವ ಕಿರಣ್ ಸುಬ್ಬಯ್ಯನವರು ತಮ್ಮ ಶಿಲ್ಪಕ್ಕೆ ಬೇಕಾದ ಕಲ್ಲುಗಳನ್ನು ಪ್ರಮುಖವಾಗಿ ಎಚ್.ಡಿ. ಕೋಟೆಯ ಕೋರೆಗಳಿಂದ ; ಕೆಲವು ಸಲ ಹಂಪಾಪುರ, ಮಾರ್ಚಳ್ಳಿ, ಮದ್ದೂರು ಹಾಗೂ ದೂರ ಗ್ರಾಮಗಳಲ್ಲಿನ ಕೋರೆಗಳಿಂದ ಸಂಗ್ರಹಿಸಿರುವುದಾಗಿ ತಿಳಿಸುತ್ತಾರೆ. ಕಲ್ಲುಗಳನ್ನು ತೂಕದ ಆಧಾರದ ಮೇಲೆ ಕ್ರಯಕ್ಕೆ ತೆಗೆದುಕೊಂಡು ಲಾರಿ ಹಾಗೂ ವ್ಯಾನುಗಳಲ್ಲಿ ಸಾಗಿಸಿ ತಂದಿದ್ದಾರೆ.

ಸಂಪ್ರದಾಯಕ ಕೆತ್ತನೆಗಳಿಗೆ ಹಾಗೂ ಸಮಕಾಲೀನ ಬಹುಮುಖಿ ಶಿಲ್ಪಗಳ ಕೆತ್ತನೆಗಳಿಗೆ ಇವರು ಸಾಮಾನ್ಯವಾಗಿ ಮಧ್ಯಮವರ್ಗದ ಹಾಗೂ ಸ್ವಲ್ಪ ಜಾಸ್ತಿ ಗಡುಸಾಗಿರುವ ಕಲ್ಲುಗಳನ್ನು ಇದುವರೆಗೂ ಬಳಸಿಕೊಂಡು ಬಂದಿದ್ದಾರೆ. ಕೆಲವು ಸಲ ಅನುಭವಕ್ಕಾಗಿ, ಕುತೂಹಲ ಮತ್ತು ಅಪೇಕ್ಷೆಪಟ್ಟು ಬಹಳ ಗಡುಸಾಗಿರುವ ಶಿಲಾಮಾಧ್ಯಮವನ್ನೂ ಬಳಸಿಕೊಂಡಿರುವುದು ಉಂಟು.

## ಶಿಲ್ಪರಚನಾ ತಂತ್ರ ವಿಧಿವಿಧಾನಗಳು :

ಕಿರಣ್ ಸುಬ್ಬಯ್ಯನವರು ತಮ್ಮ ಅಗಾಧ ಸಂಖ್ಯೆಯ ಶಿಲ್ಪಗಳನ್ನು ಕೆತ್ತುವುದಕ್ಕೆ ತಮ್ಮದೇ ಆದ ಸ್ವತಂತ್ರ ಶೈಲಿಯನ್ನು ಬಳಸಿಕೊಂಡು ಬಂದಿದ್ದಾರೆ. ಪ್ರಾರಂಭದಲ್ಲೇ ಪೂರ್ಣ ನಕ್ಷೆಗಳನ್ನು ಹಾಕಿಕೊಂಡು ಕರಡು ತಯಾರಿಸಿ ಎಂದೂ ಶಿಲ್ಪರಚನೆ ಮಾಡಿಲ್ಲ. ಮೂಲ ಶಿಲೆಯನ್ನು ತನ್ನ ಮುಂದೆ ಇಟ್ಟುಕೊಂಡು ವಸ್ತು ರೂಪ ಹಾಗೂ ಸೃಷ್ಟಿಯ ಒಂದು ಕಲ್ಪನಾ ಬಿಂಬವನ್ನು (Subject and Ideas) ಮನಸ್ಸಿನಲ್ಲಿ ತಂದುಕೊಂಡು ಸ್ಫುಟಗೊಳಿಸಿ ನಂತರ ನೇರವಾಗಿ ಕಲ್ಲಿನ ಮೇಲೆ ಕರಡು ರೇಖೆಗಳನ್ನು ಹಾಕಿಕೊಂಡು (Rough Sketch) ತಕ್ಷಣದಿಂದಲೇ ಕೆತ್ತಲು ಪ್ರಾರಂಭಿಸುತ್ತಾರೆ. ಏಕಶಿಲೆಯಲ್ಲಿ ಬಹುಮುಖಿ ಶಿಲ್ಪಗಳನ್ನು ಸೃಷ್ಟಿಸಬೇಕಾದ ಸಂದರ್ಭದಲ್ಲಿ ತನ್ನ ಮನಸ್ಸಿನಾಳದಲ್ಲಿ ಯಾವ್ಯಾವ ದಿಕ್ಕುಗಳಲ್ಲಿ ಯಾವ್ಯಾವ ರೂಪಗಳನ್ನು ಯಾವ್ಯಾವ ಆಯಾಮಗಳಲ್ಲಿ ಕೆತ್ತಬೇಕೆನ್ನುವುದರ ಸ್ಫುಟ ಕಲ್ಪನೆಯನ್ನು ಮೊದಲೇ ಎಚ್ಚರಿಕೆಯಿಂದ ಮಾಡಿಕೊಳ್ಳುತ್ತಾರೆ. ಇಂತಹ ಶಿಲ್ಪಗಳ ಕೆತ್ತನೆಗೆ ಬಹಳಷ್ಟು ದಿನಗಳ ಶ್ರಮ ಅಗತ್ಯ. ಏಕ ಶಿಲ್ಪಗಳಾದರೆ, ಕಲ್ಲಿನ ಮೇಲೆ ಕರಡು ನಕ್ಷೆ ಹಾಕಿ ಸುಲಭದಲ್ಲಿ ಕೆತ್ತಿ ಮುಗಿಸಬಹುದು. ಆದರೆ ಬಹುರೂಪಿ–ಬಹುಮುಖಿ ಶಿಲ್ಪಗಳ ವಿಷಯದಲ್ಲಿ ಹಾಗಾಗುವುದಿಲ್ಲ. ಅವರ ವ್ಯಕ್ತಿತ್ವದಂತೆ ಅವರ ಕೆತ್ತನೆಯ ವಿಧಾನಗಳೂ ಸಹ ವಿಭಿನ್ನ ! ವಿಶೇಷ ! ಯಾವುದೇ ಶಿಲ್ಪವನ್ನು ಪ್ರಾರಂಭಿಸಿ ಅದನ್ನೇ ಮಾಡುತ್ತ ಕೂರುವವರಲ್ಲ ; ಎಲ್ಲಿ ತಮ್ಮ ಕಲ್ಪನೆಯ ಸೃಷ್ಟಿಲಯ ಜಾರಿಹೋಗುತ್ತದೋ ಎನ್ನುವ ಆತಂಕ. ಹಾಗಾಗಿ ಬಹುರೂಪಿ ಬಹುಮುಖಿ ಶಿಲ್ಪಗಳ ರಚನೆಯ ಸಂದರ್ಭ ಬೇರೆ ಬೇರೆ ಆಲೋಚನಾ ಲಹರಿ ಮನಸ್ಸಿನಾಳದಿಂದ ಮುನ್ನುಗ್ಗಿ ಹೊರ ಹೊಮ್ಮುತ್ತಿದ್ದಂತೆ, ನಮ್ಮ ಬದುಕು, ಈ ಸಮಾಜ, ಪ್ರೀತಿ, ಪ್ರೇಮ, ವಿರಸ, ಸರಸ, ಪ್ರಲಾಪ ಮುಂತಾದವುಗಳ ಆಕೃತಿಗಳು ಮೂಡುತ್ತ ಬರುತ್ತಿರಬೇಕಾದರೆ, ಮಾಡುತ್ತಿರುವ ಶಿಲ್ಪವನ್ನು ಬಿಟ್ಟು ಹೊಸ ಕಲ್ಲನ್ನು ತೆಗೆದುಕೊಂಡು ಅದನ್ನು ಕೆತ್ತಲು ತಕ್ಷಣವೇ ಪ್ರಾರಂಭಿಸುತ್ತಾರೆ ! ಹೀಗೆ ತನ್ನ ಸ್ವಪ್ನಲಹರಿಯಲ್ಲಿ ಮುಳುಗುತ್ತ, ತೇಲುತ್ತಾ, ಕೆತ್ತುತ್ತಾ ಹೋದಂತೆ, ಸಾಮಾನ್ಯವಾಗಿ ನಾಲ್ಕೈದು ಶಿಲ್ಪಗಳ ಕರಡು ಕೆತ್ತನೆಗಳೇ ಮುಗಿಯುತ್ತಾ ಬಂದಿರುತ್ತವೆ. ಅಂತಹ ಸಂದರ್ಭದಲ್ಲಿ ಆತಂಕ ಮಾಯವಾಗಿ ಮಾಡಿರುವ ಕರಡು ಕೆತ್ತನೆಗಳ ಕೊನೆಯ ಹಂತದ ಕೆತ್ತನೆಗಳನ್ನು ಪ್ರಾರಂಭಿಸುತ್ತಾರೆ. ನುರಿತ ನೃತ್ಯಗಾರ (Play-boy Casanova) ಅನೇಕ ಸುಂದರಿಯರೊಡನೆ ಏಕಕಾಲದಲ್ಲಿ ನರ್ತಿಸುತ್ತ ಆಟವಾಡುವಂತೆ, ಇವರು ಬೇರೆ ಬೇರೆ ಶಿಲ್ಪಗಳೊಡನೆ ಒಂದರ ನಂತರ ಒಂದರಂತೆ ಕೇಂದ್ರಿಕೃತರಾಗಿ ಕೊನೆಯ ಹಂತದ ಕೆತ್ತನೆಗಳನ್ನು ಮುಗಿಸುತ್ತ ಬಂದಿರುತ್ತಾರೆ. ಈ ಘಟ್ಟ ಮುಗಿದ ಮೇಲೆ ಮಾತ್ರ, ಶಿಲ್ಪಗಳನ್ನು ಬೇರೆ ಬೇರೆಯೇ ಆಗಿ ನಯಗೊಳಿಸುತ್ತ ಪೂರ್ಣಗೊಳಿಸುತ್ತಾರೆ.

ಬಹುಮುಖಿ ಶಿಲ್ಪಗಳನ್ನು ಪೂರ್ಣಗೊಳಿಸಲು ಇಷ್ಟೇ ಸಮಯ ಸಾಕೆಂದು ನಿಗದಿ ಮಾಡಲು ಸಾಧ್ಯವಿಲ್ಲ. ಕಲ್ಲಿನ ಅಳತೆ, ಗಡಸುತನ ಅಥವಾ ಮೆದುತ್ವ ಮತ್ತು ಮುಖ್ಯವಾಗಿ ಶಿಲ್ಪಿಯ ಮನೋಧರ್ಮ (Mood) ಗಳ ಮೇಲೆ ಅವಲಂಬಿಸಿರುತ್ತದೆ.

ಅಲ್ಲದೆ, ಶಿಲ್ಪಿಯು ತನ್ನ ಕೌಟುಂಬಿಕ ಆತಂಕಗಳನ್ನು, ಸಾಮಾಜಿಕ ದಾಕ್ಷಿಣ್ಯಗಳನ್ನು (Social obligation), ಆರ್ಥಿಕ ಚಿಂತನೆಗಳನ್ನು ಬದಿಗೊತ್ತಿ ತನ್ನ ಕಾಯಕದಲ್ಲೇ ನಿರತನಾಗಿರಬೇಕು. ಪ್ರತೀ ದಿನ 10 ಗಂಟೆಯಿಂದ 12 ಗಂಟೆಯವರೆಗೆ ಕೆತ್ತನೆ ಕೆಲಸ ಮಾಡುತ್ತಿದ್ದ ಕಿರಣ್‌ರವರು ಕಳೆದ ಕೆಲವು ವರ್ಷಗಳಿಂದ ಕೇವಲ 8 ಗಂಟೆಯಷ್ಟು ಕೆತ್ತನೆ ಕೆಲಸ ಸಾಧ್ಯವೆನ್ನುತ್ತಾರೆ.

## ಆರ್ಥಿಕ ಬೆಂಬಲ :

ತಮ್ಮ ಮನೆಯ ಹಿಂಭಾಗದಲ್ಲಿ ಎರಡು ಮಳಿಗೆಗಳನ್ನು ಕಟ್ಟಿಸಿ ಬಾಡಿಗೆ ಬರುವಂತೆ ಮಾಡಿಕೊಂಡದ್ದು ಇವರ ಜಾಣ್ಮೆಯ ಕೆಲಸ. 2002 ರಲ್ಲಿ ತಮ್ಮ ಮನೆಯ ಮುಂದಿನ ನಿವೇಶನದಲ್ಲಿ ಕಟ್ಟಡ ಕಟ್ಟಿಸಿ ಬಾಡಿಗೆಗೆ ಕೊಟ್ಟು ಕೌಟುಂಬಿಕ ಜೀವನಕ್ಕೆ ಆಧಾರ ಮಾಡಿಕೊಂಡಿದ್ದಾರೆ. ಆ ಕಟ್ಟಡ ಕಟ್ಟುವ ಸಂದರ್ಭದಲ್ಲಿ ಆರ್ಥಿಕ ಮುಗ್ಗಟ್ಟಿನಿಂದಾಗಿ ತಮ್ಮ ಅನೇಕ ಉತ್ತಮ ಶಿಲ್ಪಗಳನ್ನೆಲ್ಲಾ ಕಡಿಮೆ ಬೆಲೆಗಳಿಗೆ ಮಾರಾಟ ಮಾಡಬೇಕಾಯಿತು ಎನ್ನುವ ನೋವು ಈಗಲೂ ಇದೆ. ಜನರು ಇವರ ಶಿಲ್ಪಗಳನ್ನು ಕಡಿಮೆ ಬೆಲೆಗೆ ಪಡೆದುಕೊಳ್ಳಲು ಪ್ರಯತ್ನಿಸುತ್ತಲೇ ಬಂದಂತೆ, ಮಾನಸಿಕವಾಗಿ ನೊಂದು, ಒಂದು ಕಠಿಣ ನಿರ್ಧಾರಕ್ಕೆ ಬಂದರು. ಮಾರಾಟ ಮಾಡುವುದನ್ನೇ ನಿಲ್ಲಿಸಿ, ಹೊಸ ಕಟ್ಟಡದ ನೆಲಮಾಳಿಗೆಯನ್ನೇ "ಕೆ.ಎಸ್. ಮ್ಯೂಸಿಯಂ ಆಫ್ ಸ್ಕಲ್ಪ್‌ಚರ್ಸ್" (K.S. Museum of Sculptures) ಎಂದು ರೂಪಿಸಿ ತಮ್ಮ ಬಳಿ ಇದ್ದ ಎಲ್ಲಾ ಸುಮಾರು 70 ಶಿಲ್ಪಗಳನ್ನು ಪ್ರದರ್ಶಿಸಿದರು. ಆರ್ಥಿಕವಾಗಿ ಸ್ವಲ್ಪ ಸುಧಾರಣೆ ಕಂಡದ್ದರಿಂದ ಹಣದ ಆಮಿಷಕ್ಕೆ ಒಳಗಾಗದೆ ತನ್ನ ಮನಸ್ಸಿಗೆ ಒಪ್ಪಿದ ಶಿಲ್ಪಗಳನ್ನು ಕೆತ್ತುತ್ತಾ ಸಂಗ್ರಹಾಲಯದಲ್ಲೇ ಪ್ರದರ್ಶಿಸುತ್ತಾ ಬಂದಿದ್ದಾರೆ. ಈಗ ಇವರ ಸಂಗ್ರಹಾಲಯದಲ್ಲಿ ಐನೂರಕ್ಕೂ(500) ಅಧಿಕ ಶಿಲ್ಪಗಳಿವೆ. ಸ್ಥಳಾಭಾವದ ಕೊರತೆ ವಿಪರೀತ ; ಇವರ ಬಹುಮುಖಿ ಶಿಲ್ಪಗಳನ್ನೆಲ್ಲಾ ಸೂಕ್ತವಾಗಿ ಪ್ರದರ್ಶಿಸಬೇಕಾದರೆ ಕಡಿಮೆಯೆಂದರೆ 100x150 ಅಡಿಗಳ ದೊಡ್ಡ ಸಂಗ್ರಹಾಲಯವೇ ಬೇಕಾಗುತ್ತದೆ. ನಗರಪಾಲಿಕೆಗೆ ಈಗ ಕೊಡಬೇಕಾದ ಕಟ್ಟಡ ತೆರಿಗೆಯೇ ಸುಮಾರು ಇಪ್ಪತ್ತೈದು ಸಾವಿರ ರೂಪಾಯಿಗಳಾಗುತ್ತದೆ. ಏನೇ ಆದರೂ ನಿರಾಶರಾಗದೆ ತಮ್ಮ ಕಾಯಕವನ್ನು ಹಠಯೋಗಿಗಳಂತೆ ಸಾಧಿಸುತ್ತ ಬಂದಿದ್ದಾರೆ. ಪ್ರಪಂಚದ ಅನೇಕ ಶಿಲ್ಪ ದಾಖಲೆಗಳನ್ನೆಲ್ಲ ಮುರಿದು ಹಾಕುತ್ತಿದ್ದಾರೆ ! ಕೆಲವು ಇವರದ್ದೇ ಹೊಸ ದಾಖಲೆಗಳಾಗಬೇಕಿವೆ.

## ಕೌಟುಂಬಿಕ ಬೆಂಬಲ :

"ಕಲೆಗಾಗಿ ಕಲೆ" ಎಂದು ನಂಬಿ ಶಿಲ್ಪಗಳನ್ನು ಒಂದರ ಮೇಲೊಂದರಂತೆ ಸೃಷ್ಟಿಸುತ್ತಾ ಬಂದಿರುವ ಕಿರಣ್‌ರವರಿಗೆ ತಮ್ಮ ಸಹಧರ್ಮಿಣಿಯ ಸಂಪೂರ್ಣ ಬೆಂಬಲ ಸಿಕ್ಕಿರುವುದನ್ನು ನೆನೆಸಿಕೊಳ್ಳುತ್ತಾರೆ. ತನ್ನನ್ನು ಸರಿಯಾಗಿ ಅರಿತುಕೊಂಡು ತನ್ನ ಶಿಲ್ಪ ಕಾರ್ಯಕ್ಕೆ ಯಾವುದೇ ನ್ಯೂನತೆ ತಾರದೆ ನೋಡಿಕೊಂಡಿರುವ ಪತ್ನಿ ಹಾಗೂ ತನ್ನ ಧ್ಯೇಯಕ್ಕೆ ಚ್ಯುತಿಯಾಗದಂತೆ ಎಲ್ಲಾ ಕಷ್ಟ ಕಾರ್ಪಣ್ಯಗಳನ್ನು ತಡೆದುಕೊಂಡು ಬೆಂಬಲಿಸಿದ ತನ್ನ ಮೂವರು ಹೆಣ್ಣು ಮಕ್ಕಳನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ.

ಸಂಸಾರದಲ್ಲಿ ಬೆಂಬಲವಿರುವುದರಿಂದ ತಾನು ಇನ್ನೂ ಹೊಸ ಹೊಸ ಶಿಲ್ಪಗಳ ರಚನೆ ಮಾಡಬೇಕೆಂದೂ, ಪ್ರಪಂಚದಲ್ಲಿಯೇ ಯಾರೂ ಮಾಡದೇ ಇರುವ ಇಂತಹ ಶಿಲ್ಪಗಳ ಬಗ್ಗೆ ತಕ್ಕ ಸಂಮಾನ ಗಳಿಸಲೇಬೇಕೆಂದೂ ಮುನ್ನಡೆಯುತ್ತಿದ್ದಾರೆ, ಕಿರಣ್ ಸುಬ್ಬಯ್ಯ.

## ಶಿಲ್ಪಗಳ ಸಾಮಾನ್ಯ ವಿಂಗಡಣೆ :

1. ಸಾಂಪ್ರದಾಯಕ ಶಿಲ್ಪಗಳು
2. ಸಮಕಾಲೀನ ಏಕ ಶಿಲ್ಪಗಳು
3. ಬಹುಮುಖಿ ಶಿಲ್ಪಗಳು (ದಾಖಲೆ ಸಾಧಿಸುವಷ್ಟು)
4. 135 ಹೆಡೆಗಳ ಆದಿಶೇಷನ ಶಿಲ್ಪ ಸೃಷ್ಟಿ (ಪ್ರಪಂಚದಲ್ಲೇ ಪ್ರಥಮ)

ತಮ್ಮ ಪ್ರಾರಂಭಿಕ ದಿನಗಳಲ್ಲಿ ಸ್ವತಂತ್ರವಾಗಿ ಪೂರ್ಣ ಪ್ರಮಾಣದ ಶಿಲ್ಪಿಗಳಾಗಿ ವೃತ್ತಿ ನಡೆಸುತ್ತಿದ್ದ ಸಂದರ್ಭ ಕಿರಣ್‌ರವರು ಸುಮರು 850 ರಿಂದ 900 ರಷ್ಟು ಸಾಂಪ್ರದಾಯಿಕ ಶಿಲ್ಪಗಳ ಕೆತ್ತನೆ ನಡೆಸಿದ್ದು ಇವು ಅನೇಕ ದೇವಸ್ಥಾನಗಳಲ್ಲಿ ಹಾಗೂ ಖಾಸಗಿ ಸಂಗ್ರಹಗಳಲ್ಲಿ ಸೇರಿಕೊಂಡಿವೆ.

ಈ ಘಟ್ಟದಲ್ಲೇ ಸಮಕಾಲೀನ ಆಧುನಿಕ ಶಿಲ್ಪಗಳನ್ನು ಕೆತ್ತಿ ಅನೇಕ ಶಿಲ್ಪಗಳನ್ನು ಮಾರಾಟ ಮಾಡಿರುತ್ತಾರೆ.

ಇವರ "ಏಕಶಿಲೆ–ಬಹುಮುಖಿ ಶಿಲ್ಪ"ಗಳಂತೂ, ಯಾರೇ ಒಬ್ಬ ಶಿಲ್ಪಿ, ನಮ್ಮ ದೇಶದಲ್ಲಾಗಲೀ ಬೇರೆ ದೇಶಗಳಲ್ಲಾಗಲೀ ಎಲ್ಲಿಯೂ ಸಾಧಿಸಲಾಗದ ಹೊಸ ಶಿಲ್ಪ ಆಯಾಮ ಎನ್ನಬಹುದು. ಸಮಕಾಲೀನ ಶಿಲ್ಪ ಲೋಕಕ್ಕೆ ಇವರ ಈ ಕೊಡುಗೆ ಅಪೂರ್ವ. ಇವುಗಳ ವಿಂಗಡಣೆಗಳನ್ನು (2015ರ ಪ್ರಾರಂಭದಲ್ಲಿದ್ದಂತೆ) ಈ ರೀತಿ ಮಾಡಬಹುದು :

| | ಶಿಲ್ಪ ವಿವರಣೆ | ಸಂಖ್ಯೆ | ಅಡಕವಾದ ಒಟ್ಟು ಶಿಲ್ಪಗಳು |
|---|---|---|---|
| 1. | ಏಕಶಿಲೆ–ದ್ವಿಮುಖಿ ಶಿಲ್ಪಗಳು (Two in One) | 76 | 152 |
| 2. | ತ್ರಿಮುಖಿ ಶಿಲ್ಪಗಳು (Three in One) | 47 | 141 |
| 3. | ಚತುರ್ಮುಖಿ ಶಿಲ್ಪಗಳು (Four in One) | 83 | 332 |
| 4. | ಪಂಚಮುಖಿ ಶಿಲ್ಪಗಳು (Five in One) | 6 | 30 |

ಈ 212 ಶಿಲ್ಪಗಳಲ್ಲಿ ಅಡಕವಾಗಿರುವ ಪ್ರತ್ಯೇಕ ಬಹುಮುಖಿ ಶಿಲ್ಪಗಳ ಸಂಖ್ಯೆ ಒಟ್ಟು 655 ಆಗುತ್ತದೆ. ಬಹುತೇಕ ಈ ಎಲ್ಲಾ ಶಿಲ್ಪಗಳನ್ನೂ ಕಿರಣ್ ಸುಬ್ಬಯ್ಯನವರ "ಕೆ.ಎಸ್. ಮ್ಯೂಸಿಯಂ ಆಫ್ ಸ್ಕಲ್ಪ್‌ಚರ್ಸ್" ನಲ್ಲಿ ವೀಕ್ಷಿಸಬಹುದಾಗಿದೆ.

## ಬಹುಮುಖಿ ಶಿಲ್ಪ ಸೃಷ್ಟಿಯ ವಿಶೇಷತೆ :

ಏಕಶಿಲೆಯಲ್ಲಿ ಬಹುಮುಖಿ ಶಿಲ್ಪಗಳೇಕೆ? ಇದರ ಔಚಿತ್ಯವೇನು? ಧ್ಯೇಯೋದ್ದೇಶಗಳೇನು? ಎನ್ನುವ ಚಿಂತನೆ ನಮ್ಮೆಲ್ಲರಲ್ಲೂ ಬಂದೇ ಬರುತ್ತದೆ.

ಒಬ್ಬ ಶಿಲ್ಪಿಯ ಬಳಿ ಯಥೇಚ್ಛವಾಗಿ ಪ್ರತಿಮೆಗಳನ್ನು ಕಲ್ಪಿಸಿಕೊಳ್ಳುವ ಮನಶಕ್ತಿ, ಸ್ವಪ್ನದೃಷ್ಟಿ, ಕಲ್ಪನೆಗಳನ್ನು ದೃಶ್ಯರೂಪಕ್ಕೆ ತರುವ ತಾಕತ್ತು ಇದ್ದಾಗ ತನ್ನ ಮನಸ್ಸಿಗೆ ಹೊಳೆಯುವ ಒಂದೊಂದು ಕಲ್ಪನೆಗೂ ಬೇರೆ ಬೇರೆ ಕಲ್ಲುಗಳನ್ನು ಬಳಸುವ ಬದಲು ಒಂದೊಂದು ಕಲ್ಲಿನಲ್ಲಿಯೂ ಬಹುಮುಖಿ ಶಿಲ್ಪಗಳನ್ನು ಕೆತ್ತುವ ಹೊಸ ಆಯಾಮದ ಸೃಷ್ಟಿ ತನ್ನ ಮೂಲೋದ್ದೇಶ; ಅಲ್ಲದೆ, ಇವುಗಳು ತನ್ನ ಕ್ರಿಯಾಶಕ್ತಿಯ ತಾಕಲಾಟಕ್ಕೆ ತುಂಬಾ ಪೂರಕವಾದವು. ಕಲ್ಲುಗಳನ್ನು ಉಳಿಸುವ ಯೋಜನೆಯೂ ಇದರಲ್ಲಿ ಬಹಳಷ್ಟಿದೆ. ಎಲ್ಲಕ್ಕಿಂತ ಮಿಗಿಲಾಗಿ ಮುಂದೆ ಇಟ್ಟುಕೊಂಡ ಒಂದು ಕಲ್ಲಿನ ಬೇರೆ ಬೇರೆ ದಿಕ್ಕುಗಳಲ್ಲಿ ಬೇರೆ ಬೇರೆ ವಿಭಿನ್ನ ಶಿಲ್ಪಗಳನ್ನು ಕೆತ್ತುವಾಗಿನ ಒತ್ತಡ, ಏಕಾಗ್ರತೆ ಹಾಗೂ ಸೃಷ್ಟಿಕ್ರಿಯೆಗಳಿಂದ ಸಿಗುವ ಆತ್ಮಾನಂದವೇ ಬೇರೆ. ಹಾಗೆಯೇ, ಇಂತಹ ಶಿಲ್ಪಗಳನ್ನು ಸುತ್ತ ತಿರುಗಿ ನೋಡಿ ಆಸ್ವಾದಿಸುವ ಆನಂದವೂ ವೀಕ್ಷಕನಿಗೆ ಇಲ್ಲಿ ಲಭ್ಯ.

## ವಿಶ್ವದಾಖಲೆಯತ್ತ ಆದಿಶೇಷ :

ಕಿರಣ್ ಸುಬ್ಬಯ್ಯನವರ ಒಂದು ಶ್ರೇಷ್ಠ ಶಿಲ್ಪ ಎಂದರೆ 135 ಹೆಡೆಗಳ ಆದಿಶೇಷ ಮತ್ತದರ ವಿಶಿಷ್ಟ ಪೀಠ. ಈ ಪೀಠದಲ್ಲಿಯೂ ಸಹ ಪೂರ್ಣಗೊಂಡಾಗ 45 ವಿವಿಧ ಭಂಗಿಗಳ ನಾಗಗಳ ಕೆತ್ತನೆಗಳಿರುತ್ತವೆ. 5 ಅಡಿ 1 ½ ಇಂಚು ಎತ್ತರವಿರುವ ವಿನೂತನ ಶಿಲ್ಪವಿದು. ಪ್ರಪಂಚದಲ್ಲಿ ಈ ತನಕದ ಗಿನ್ನಿಸ್ ದಾಖಲೆ ಎಂದು ಪರಿಗಣಿಸಿರುವ, ನೇಪಾಳದ ಕಠ್ಮಂಡುವಿನ ಪಶುಪತಿನಾಥ ದೇವಸ್ಥಾನದಲ್ಲಿರುವ, ಆದಿಶೇಷನಿಗೆ 108 ಹೆಡೆಗಳಿವೆ. ಈ ದೃಷ್ಟಿಯಲ್ಲಿ ಮಾತ್ರವಲ್ಲ ; ಲಾಲಿತ್ಯದಲ್ಲಿಯೂ ಸಹ ಕಿರಣ್‌ರವರ "ಆದಿಶೇಷ" ಸಂಪೂರ್ಣಗೊಂಡಾಗ ವಿಶ್ವದಲ್ಲೇ "ಏಕಮೇವಾದ್ವಿತೀಯ" ಎನ್ನಿಸಿಕೊಳ್ಳಲಿದೆ. ಯಾವಾಗ ಉಳಿದಿರುವ ಕೆತ್ತನೆಗಳನ್ನು ಪೂರ್ಣಗೊಳಿಸುತ್ತಾರೆನ್ನುವುದನ್ನು ಕಾದುನೋಡಬೇಕಿದೆ.

ಈ ಶಿಲ್ಪದ ಕೆತ್ತನೆಯ ಹಿಂದೆ ಒಂದು ಸಾಹಸ–ನೋವು–ಹಠಗಳ ಕಥೆಯೇ ಇದೆ. 1985 ರಲ್ಲಿ ಬೆಂಗಳೂರಿನ ಉದ್ಯಮಿಯೊಬ್ಬರು ಇವರಿಗೆ ಸಾಕಷ್ಟು ಶಿಲ್ಪಗಳನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡಿದ್ದರು. ಅವರೇ ಕೆಲವು ಶಿಲ್ಪಗಳನ್ನೂ ಕ್ರಯಕ್ಕೆ ಪಡೆದುಕೊಂಡಿದ್ದರು. ನಂತರ ಅವರ ಕೋರಿಕೆ ಆದೇಶದಂತೆ "ಮಹಾಗಣಪತಿ" ಮತ್ತು "ಶ್ರೀ ಲಕ್ಷ್ಮೀನಾರಾಯಣ" ವಿಗ್ರಹಗಳನ್ನೂ ಕೆತ್ತಿಕೊಟ್ಟಿದ್ದರು. ಆ ಉದ್ಯಮಿ ಒಮ್ಮೆ ನೇಪಾಳಕ್ಕೆ ಪ್ರವಾಸ ಹೋದವರು ಕಠ್ಮಂಡುವಿನಲ್ಲಿ ಪ್ರಸಿದ್ಧ ಪಶುಪತಿನಾಥ ದೇವಸ್ಥಾನದಲ್ಲಿರುವ 108 ಹೆಡೆಗಳ ಆದಿಶೇಷನ ವಿಗ್ರಹವನ್ನು ನೋಡಿ ಪ್ರಭಾವಿತರಾಗಿ ವಾಪಾಸು ಬಂದವರೆ ಕಿರಣ್‌ರವರಿಗೆ ಅದಕ್ಕಿಂತಲೂ ಅಧಿಕ ಹೆಡೆಗಳ ವಿಶ್ವಶ್ರೇಷ್ಠ "ಆದಿಶೇಷ" ವಿಗ್ರಹವನ್ನು ಕೆತ್ತಿಕೊಡಲು ಕೋರಿಕಾ ಆದೇಶ (Supply order) ನೀಡಿದರು. ವಿಗ್ರಹದ ಎಲ್ಲಾ ರೂಪ, ವಿನ್ಯಾಸ, ಹೆಡೆಗಳ ಸಂಖ್ಯೆ, ಗಾತ್ರ, ಮುಂತಾದವುಗಳೆಲ್ಲಾ ಶಿಲ್ಪಿಯ ಕಲ್ಪನಾಸಾಮರ್ಥ್ಯಕ್ಕೆ ಬಿಟ್ಟದ್ದೆಂದು ಮಾತುಕೊಟ್ಟು ಮುಂಗಡ ಹಣವನ್ನೂ ಕೊಟ್ಟರು. "ಈ ಶಿಲ್ಪಕ್ಕೆ ಎಷ್ಟು ಖರ್ಚಾದರೂ ಪರವಾಗಿಲ್ಲ ; ಪೂರ್ಣ ಮುಗಿಸಿ, ನೀವು ಕೊನೆಗೆ ಎಷ್ಟು ಕೇಳುತ್ತೀರೋ ಅಷ್ಟು ಹಣ ಕೊಡಲು ಸಿದ್ದ" ಎಂದೂ ಆಶ್ವಾಸನೆ ನೀಡಿದರು. ದೊಡ್ಡದೊಂದು ಸಾಧನೆಗೆ ಇದು ನಾಂದಿ ಎಂದು ಕಿರಣ್‌ರವರು ಖುಷಿಯಿಂದ ಶಿಲ್ಪಕ್ಕೆ ಬೇಕಾಗುವ ಸೂಕ್ತ ಕಲ್ಲುಗಳನ್ನು ಕೋರೆಯಿಂದ ತರಿಸಿ 1989 ರಲ್ಲಿ ಕೆತ್ತನೆ ಪ್ರಾರಂಭಿಸಿ ಸುಮಾರು 3½ ವರ್ಷಗಳಷ್ಟು ಕಾಲ ಕೆತ್ತನೆ ನಡೆಸಿದರು. ಆರ್ಥಿಕ ತೊಂದರೆಯಿಂದ ಬಳಲುತ್ತಿದ್ದ ಆ ಸಂದರ್ಭದಲ್ಲಿ ಇನ್ನೂ ಸ್ವಲ್ಪ ಹಣ ಮುಂಗಡ ಕೇಳಿದರು. ಆದರೆ, ಅಷ್ಟರಲ್ಲೇ ಉದ್ಯಮಿ ಪರಿವರ್ತಿತರಾಗಿ ಹೋಗಿದ್ದರು. ಹಿಮಾಲಯದ ಸಾಧು ಒಬ್ಬನ ಪ್ರೇರಣೆಯಿಂದ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಪೂಜೆ ಪುರಸ್ಕಾರ ನಡೆಸಿ ಒಂದು ರುದ್ರಾಕ್ಷಿಮಾಲೆಯನ್ನು ಪಡೆದಿದ್ದರು. ಆ ರುದ್ರಾಕ್ಷಿಮಾಲೆಯ "ಶಕ್ತಿ ಅತೀತ ; ಧರಿಸಿದವನ ಕಣ್ಣುಗಳನ್ನು ನೋಡಿ ಬೇರೆಯವರು ಮಾತಾಡಲಾಗದು ; ಸಂಮೋಹಿತರಾಗುತ್ತಾರೆ. ಅಲ್ಲದೆ ಅವರ ಮಾತಿನಂತೆಯೇ ಇತರರು ನಡೆದುಕೊಳ್ಳುತ್ತಾರೆ" ಎಂದು ರುದ್ರಾಕ್ಷಿಕೊಟ್ಟವರು ಪಡೆದವನ ಮನಸ್ಸಿನಲ್ಲಿ ಒಂದು ವಿಷ ಬೀಜವನ್ನು ಬಿತ್ತಿದ್ದರು. ಆ ಮಾತುಗಳನ್ನು ಪ್ರಬಲವಾಗಿ ನಂಬಿದ್ದ ಉದ್ಯಮಿಗೆ ಒಂದು ರೀತಿಯ ಅಹಮಿಕೆ ತುಂಬಿತ್ತು. ವರ್ಷಗಟ್ಟಲೇ ಕೆಲಸ ಮಾಡಿದ್ದೇನೆ. ಇನ್ನೂ ಮಾಡಬೇಕಾದ್ದು ಅಗಾಧವಾಗಿದೆ ಸ್ವಲ್ಪ ಹಣಬೇಕು ಎಂದು ಕೇಳಿದಾಗ "ಇನ್ನು ಯಾವುದೇ ಹಣ ಕೊಡುವುದಿಲ್ಲ ; ನೀನೇ ವಿಗ್ರಹವನ್ನು ಮುಗಿಸಿ ನನ್ನ ಬಳಿಗೆ ತಂದು ಕೊಡಬೇಕು ; ನನ್ನ ರುದ್ರಾಕ್ಷಿ ಶಕ್ತಿಯ ಮುಂದೆ ನೀನು ಬಗ್ಗಲೇಬೇಕು ; ಇದೇ ನನ್ನ ಆದೇಶ!" ಎಂದು ಹೇಳಿಬಿಟ್ಟರಂತೆ. ಮೂರೂವರೆ ವರ್ಷ ಕೆಲಸ ಮಾಡಿ ಮೋಸಹೋದೆನಲ್ಲಾ ಎಂದು ಮನನೊಂದು ತಾನೂ ಸಹ ಹಠದಿಂದ ಏನಾಗುತ್ತೋ ನೋಡುತ್ತೇನೆಂದು ತಕ್ಷಣವೇ "ಆದಿಶೇಷ"ನ ಕೆತ್ತನೆ ಕೆಲಸ ನಿಲ್ಲಿಸಿಬಿಟ್ಟರು.

ಇದಾದ ಕೆಲ ವರ್ಷಗಳಲ್ಲೇ ಆ ಉದ್ಯಮಿ ಮೃತರಾದರು ; ಅಲ್ಲದೆ ಅವರ ಕುಟುಂಬಸ್ಥರೂ ಬಹಳಷ್ಟು ಕಷ್ಟನಷ್ಟಗಳಿಗೆ ಒಳಗಾದರಂತೆ. ದೇವ ದೇವತೆಗಳ ಮತ್ತು ಶ್ರೇಷ್ಠರ ಶಿಲ್ಪಗಳನ್ನು ಕೆತ್ತಿದ ಶಿಲ್ಪಿಗೆ ಯಾರೂ ಮೋಸ ಮಾಡಬಾರದೆನ್ನುವುದು ಪ್ರತೀತಿ. ಈ ರೀತಿಯಲ್ಲಿ ಬಿಟ್ಟುಹೋದ ಶಿಲ್ಪ ಇವರ ಕಾರ್ಯಾಗಾರದ ಒಂದು ಮೂಲೆ ಸೇರಿ ಅನೇಕ ವರ್ಷಗಳ ತನಕ "ವನವಾಸ" ಅನುಭವಿಸಿದೆ. ಕಿರಣ್‌ರವರ ಬಹುಮುಖಿ ಶಿಲ್ಪಗಳ ಕೆತ್ತನೆಗಳ ಆವೇಗದಲ್ಲಿ ಇದು ಅಜ್ಞಾತವಾಗಿ ಉಳಿದಿದೆ. ಈ ಲೇಖಕರೂ ಸೇರಿದಂತೆ ಹಿತೈಷಿಗಳ ಒತ್ತಾಸೆಯಿಂದಾಗಿ ಈ ಶಿಲ್ಪವನ್ನು ಯಾರಾದರೂ ಕೊಳ್ಳಲು ಬಯಸಿ ಬಂದರೆ ಪೂರ್ಣಗೊಳಿಸುತ್ತೇನೆ. ಇಲ್ಲವೇ, ಇನ್ನೂ ಸ್ವಲ್ಪ ಅವಧಿ ಕಳೆದು, ತಾನೇ ಪೂರ್ಣಗೊಳಿಸಿ ಸೂಕ್ತಸ್ಥಾನದಲ್ಲಿ ಪ್ರತಿಷ್ಠಾಪಿಸಲು ಅನುವು ಮಾಡುತ್ತೇನೆಂದು ಹೇಳುತ್ತಾರೆ.

"ಅತ್ಯಂತ ಶ್ರದ್ಧೆ, ನೀತಿ, ನೇಮಗಳಿಂದ "ಆದಿಶೇಷ"ನ ವಿಗ್ರಹವನ್ನು ತಮ್ಮ ಕಲ್ಪನಾಲೋಕದಲ್ಲಿ ವಿಹರಿಸಿ ದೈವದ ಸ್ಮರಣೆಯೊಂದಿಗೆ ಕೆತ್ತನೆ ಮಾಡಿದ್ದೇನೆ. ಇನ್ನುಳಿದಿರುವ ಸೂಕ್ಷ್ಮ ಕುಸುರಿ ಕೆಲಸದೊಂದಿಗೆ ಪೀಠದಲ್ಲಿ ಕೊನೆಯ ಹಂತದ ವಿವಿಧ ಭಂಗಿಗಳ ನಾಗದೇವತೆಗಳ ಕೆತ್ತನೆಗಾಗಿ ಇನ್ನೂ ಆರೇಳು ತಿಂಗಳು ಕಠಿಣ ಪರಿಶ್ರಮಪಡಬೇಕಾಗುತ್ತದೆ"–ಎಂದು ಅವರೇ ಹೇಳುತ್ತಾರೆ. ಈ ಶಿಲ್ಪದ ಹಿಂಬದಿಯಲ್ಲಿ ಈಗಾಗಲೇ "ಶ್ರೀಯಂತ್ರ", "ಓಂ ಯಂತ್ರ" ಮತ್ತು "ಗಾಯತ್ರಿ ಮಂತ್ರ" ಗಳನ್ನು ಕೆತ್ತಿರುವುದು ಇದರ ಮತ್ತೊಂದು ವಿಶೇಷ.

ಸರ್ಪರಾಜನಾದ ಆದಿಶೇಷ ಪುರಾಣ ಪ್ರಸಿದ್ಧ ; ಸರ್ಪಗಳಲ್ಲೇ ಪ್ರಥಮ. ದಕ್ಷನ ಮಗಳೂ ಕಶ್ಯಪ ಮಹರ್ಷಿಯ ಪತ್ನಿಯೂ ಆದ ಕದ್ರುವಿನ ಮಗ ಆದಿಶೇಷ. ಈತನ ಮಡಿಲಲ್ಲಿ ಪವಡಿಸಿರುವವನೇ ಶೇಷ ಶಯನ ಮಹಾವಿಷ್ಣು. ಅಲ್ಲದೆ,

ಬ್ರಹ್ಮನ ಅಣತಿಯಂತೆ ಇಡೀ ಭೂಮಂಡಲದ ಭಾರವನ್ನು ತನ್ನ ಶಿರಗಳಲ್ಲಿ ಹೊತ್ತು ಸಮತೋಲನವನ್ನು ಕಾಪಾಡಿಕೊಂಡು ಬಂದಿರುವವನು ಎನ್ನುವುದು ಪುರಾಣ ಪ್ರತೀತಿ. ಮಹಾಜ್ಞಾನಿ ಮತ್ತು ಸಂಯಮಿಯಾದ ಈತನು ಚಂಚಲಚಿತ್ತದಿಂದ ಮುಕ್ತಿ ಹೊಂದಿ ಮೋಕ್ಷದ ಶ್ರೇಷ್ಠತೆಯನ್ನು ಮೆರೆದವನು. ಆದ್ದರಿಂದಲೇ ಈತನ ರೂಪವಿಗ್ರಹ ದರ್ಶನ ಮಾಡುವ ಯಾತ್ರಾರ್ಥಿಯ ಚಂಚಲತೆ ದೂರವಾಗಿ ಏಕಾಗ್ರತೆ ಮೂಡುತ್ತದೆ. ಪಾರಮಾರ್ಥದೆಡೆಗೆ ಮನ ತಿರುಗುತ್ತದೆ. ಅಲ್ಲದೆ, ಸತ್ಕಾರ್ಯ ಮಾಡಬೇಕೆನ್ನುವ ಹಂಬಲ ಹುಟ್ಟುತ್ತದೆ.

135 ಎನ್ನುವ ಸಂಖ್ಯೆಯ ಬಿಡಿ ಸಂಖ್ಯೆಗಳನ್ನು ಕೂಡಿಸಿದಾಗ 9 ಆಗುತ್ತದೆ. (1+3+5=9) ಇದು ಮಹತ್ವದ ಬೆಸ ಸಂಖ್ಯೆ ಎಂದು ಹೇಳುತ್ತಾರೆ. ಈ 135 ಹೆಡೆಗಳ ಆದಿಶೇಷನ ರೂಪವಿಗ್ರಹ ವಿವರ ಹೀಗಿದೆ :

| | | | |
|---|---|---|---|
| 1. | ಮೂಲ ವಿಗ್ರಹದ ಎತ್ತರ | ..... | 4 ಅಡಿ 3 ಅಂಗುಲ |
| 2. | ಮೂಲ ವಿಗ್ರಹದ ಅಗಲ | ..... | 3 ಅಡಿ |
| 3. | ಮೂಲ ವಿಗ್ರಹದ ಅಡ್ಡಗಲ (ದಪ್ಪ) | ..... | 2 ಅಡಿ 8 ಅಂಗುಲ |
| 4. | ಪೀಠದ ಎತ್ತರ | ..... | 10½ ಅಂಗುಲ |
| 5. | ಪೀಠದ ಅಗಲ | ..... | 3 ಅಡಿ |
| 6. | ಪೀಠದ ಅಡ್ಡಗಲ (ದಪ್ಪ) | ..... | 3 ಅಡಿ 8 ಅಂಗುಲ |
| 7. | ಪೀಠಸಮೇತ ಆದಿಶೇಷನ ಎತ್ತರ | ..... | 5 ಅಡಿ 1½ ಅಂಗುಲ |
| 8. | ಪೀಠಸಮೇತ ಆದಿಶೇಷನ ಅಗಲ | ..... | 3 ಅಡಿ |
| 9. | ಪೀಠಸಮೇತ ಆದಿಶೇಷನ ಅಡ್ಡಗಲ (ದಪ್ಪ) | ..... | 3 ಅಡಿ 8 ಅಂಗುಲ |

ಇಂತಹ ಅಪೂರ್ವವಾದ ವಿಗ್ರಹ "ಗಿನ್ನೀಸ್ ವಿಶ್ವದಾಖಲೆ" ಪಡೆಯುವ ದಿನವನ್ನು ಶಿಲ್ಪಿಯ ಅಭಿಮಾನಿಗಳೆಲ್ಲ ಕಾಯುತ್ತಿದ್ದಾರೆ. ಕಲಾ ರಸಿಕರು ಮುಂದೆ ಬಂದು ಪ್ರೋತ್ಸಾಹಿಸಿದಾಗ ಎಲ್ಲಾ ಸಾಧ್ಯ ಎನ್ನುತ್ತಾರೆ ಸಮಚಿತ್ತದಿಂದ ಕಿರಣ್ ಸುಬ್ಬಯ್ಯ (ಚಿತ್ರ ಸಂಖ್ಯೆ – 1 ಎ, ಬಿ, ಸಿ, ಡಿ).

**ಸಂಗ್ರಹಗಳು :**

ದೇವದೇವತೆಗಳ ನೂರಾರು ವಿಗ್ರಹಗಳನ್ನು ಮೈಸೂರು ಸುತ್ತಮುತ್ತಲಿನ ಅನೇಕ ದೇವಸ್ಥಾನಗಳಲ್ಲಿ ಅಲ್ಲದೆ ಕೊಡಗು, ಬೆಂಗಳೂರು, ಚನ್ನೈ ಮತ್ತು ಆಂಧ್ರಪ್ರದೇಶಗಳಲ್ಲೂ ಇಂದಿಗೂ ನೋಡಬಹುದಾಗಿದೆ.

ಇವರ ಅನೇಕ "ಶೃಂಗಾರ ಶಿಲ್ಪಗಳನ್ನು" ಮುಂಬಯಿಯ ಒಬ್ಬ ಶಿಲ್ಪವ್ಯಾಪಾರಿ ಪಡೆದುಕೊಂಡಿದ್ದಾರೆ.

ಆಸ್ಟ್ರೇಲಿಯಾ ಮತ್ತು ಅಮೇರಿಕೆಯಲ್ಲೂ ಇವರ ಶಿಲ್ಪಗಳ ಸಂಗ್ರಹವಿದೆ.

6½ ಅಡಿ ಎತ್ತರದ "ಶ್ರೀ ಕಾವೇರಿ" ವಿಗ್ರಹ ಕೊಡಗಿನ ಗೋಣಿಕೊಪ್ಪಲು ಕಾವೇರಿ ಕಾಲೇಜಿನ ಮುಂಭಾಗದಲ್ಲಿದೆ.

ಹಾರಂಗಿ ಜಲಾಶಯದ ಮುಖ್ಯದ್ವಾರ ಹಾಗೂ ಕಮಾನುಗೇಟು ಮತ್ತು ಹಿಂಬದಿಯ ದ್ವಾರ ಇವುಗಳ ಹೊರಭಾಗ ಮತ್ತು ಒಳಭಾಗಗಳ ಸಂಪೂರ್ಣ ಪುಷ್ಪವಿನ್ಯಾಸ ಕಿರಣ್‌ರವರಿಂದ ಆದದ್ದು, ಅಲ್ಲಿಗೆ 4x2½ ಅಡಿಗಳ ಮತ್ತು 2½x2½ ಅಡಿಗಳ ಸುಮಾರು ನೂರಕ್ಕೂ ಹೆಚ್ಚು ಪುಷ್ಪಕೆತ್ತನೆಗಳನ್ನು ಪೂರೈಸಿರುತ್ತಾರೆ.

ಮಹಾಶಿವನ ಎದೆಮಟ್ಟದ ಒಂದು ವಿಗ್ರಹ ಮೈಸೂರಿನ ಚೆಲುವಾಂಬ ಪಾರ್ಕಿನಲ್ಲಿ ಇನ್ನೊಂದು ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಇವೆ.

'ಶ್ರೀಕಾವೇರಿ' ಯ ಪೂರ್ಣ ವಿಗ್ರಹಗಳನ್ನು ಮೈಸೂರಿನ ಕೊಡಗು ಸಹಕಾರ ಸಂಘದ ಮುಖದ್ವಾರದಲ್ಲಿ ಹಾಗೂ ಕೊಡಗಿನ ಕೆಲವು ಸಮಾಜಗಳಲ್ಲಿ ಸ್ಥಾಪಿಸಲಾಗಿವೆ.

ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಬೆಂಗಳೂರು ಹಾಗೂ ಇನ್ನೂ ಅನೇಕ ಕಡೆಗಳಲ್ಲಿವೆ.

ಐನೂರಕ್ಕೂ ಮಿಕ್ಕಿದ ಶಿಲ್ಪಗಳು ಮೈಸೂರಿನ ಅವರ ಸಂಗ್ರಹಾಲಯದಲ್ಲೇ ಇವೆ.

ನಿಖರವಾದ ವಿವರಗಳು ಇವರ ಬಳಿ ಲಭ್ಯವಿಲ್ಲದ ಕಾರಣ ಸಂಪೂರ್ಣ ವಿಗ್ರಹಗಳ/ಶಿಲ್ಪಗಳ ಸಂಗ್ರಹ ಎಲ್ಲೆಲ್ಲಿ ಇವೆ ಎನ್ನುವುದು ಪೂರ್ಣ ತಿಳಿದು ಬರುವುದಿಲ್ಲ. ಹೀಗೇಕೆ ಮಾಡಿದಿರಿ ಎಂದರೇ ನನಗೆ ಆಗ್ಗೆ ನಾ ಮಾಡಿದ ಶಿಲ್ಪಗಳ ಫೋಟೋಗಳನ್ನು ತೆಗೆಸಿ ಯಾರ್‍ಯಾರಿಗೆ ಮಾರಿದೆ ಎಂಬುದನ್ನು ಬರೆದಿಟ್ಟುಕೊಳ್ಳುವ ಆಲೋಚನೆ ತಲೆಗೆ ಹೊಳೆದಿರಲಿಲ್ಲ. ಇದು ನನ್ನ ಬೇಜವಾಬ್ದಾರಿಯೂ ಹೌದು ಎಂದು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುತ್ತಾರೆ. ಪ್ರಾಯಶಃ ಕಿರಣ್ ಸುಬ್ಬಯ್ಯ ಮಾತ್ರವಲ್ಲ ಬಹುತೇಕ ಹಿಂದಿನ ಶಿಲ್ಪಿಗಳು ಯಾವ ದಾಖಲೆಗಳನ್ನಿಡದೇ ಇರುವುದನ್ನು ಸಮೀಕ್ಷೆಯಿಂದ ತಿಳಿಯಬಹುದಾಗಿದೆ. ಕಾರಣ : ದಾಖಲೀಕರಣ, ಪ್ರಚಾರ ಇವುಗಳಿಂದ ಅಂದಿನವರು ಹೊರತಾಗಿದ್ದರು.

## ಕೊಡವ ಭಾಷೆಗೆ ಲಿಪಿಶೋಧನೆ :

ಬಹುಮುಖ ಪ್ರತಿಭೆಯ ಕಿರಣ್ ಸುಬ್ಬಯ್ಯನವರು 80ರ ದಶಕದಲ್ಲೇ ತಮ್ಮದೇ ಆದ ವಿಧಾನವನ್ನು ಅನುಸರಿಸಿ ಕೊಡವ ಭಾಷೆಯ ಬಗ್ಗೆ ಸಂಶೋಧನೆ ಸಹ ನಡೆಸಿದ್ದರು. ಅದರ ಫಲಿತಾಂಶದಿಂದ ಅವರು 35 ಪೂರ್ಣಾಕ್ಷರಗಳು, 25 ಅರ್ಧಾಕ್ಷರಗಳು ಹಾಗೂ ಕಾಗುಣಿತದ 336 ಅಕ್ಷರಗಳು–ಹೀಗೆ ಒಟ್ಟು 396 ಅಕ್ಷರಗಳ ಕೊಡವ ಭಾಷಾ ಲಿಪಿಯನ್ನು ಹುಟ್ಟುಹಾಕಿದರು. ಆದರೆ ಈ ಹೊಸ ಅವಿಷ್ಕಾರಕ್ಕೆ ಕೊಡವ ಜನಾಂಗ ಸ್ಪಂದಿಸಲಿಲ್ಲ. ಕನ್ನಡ ಲಿಪಿಯನ್ನೇ ಬಳಸಿ ಕೊಡವ ಭಾಷೆಯನ್ನು ಬಹಳ ಕಾಲದಿಂದ ಬರೆಯುತ್ತಿರುವ ಕಾರಣ ಜನ ಈ ಹೊಸ ಅವಿಷ್ಕಾರಕ್ಕೆ ಬೆಂಬಲಕೊಡಲಿಲ್ಲ. ಇದನ್ನು ಅರಿತ ಕಿರಣ್, ಪುನಃ 1983 ರಲ್ಲಿ ಕನ್ನಡ ಲಿಪಿಯನ್ನೇ ಸ್ವಲ್ಪ ಬದಲಾವಣೆ ಮಾಡಿ ಕೊಡವ ಭಾಷೆಯನ್ನು ಬರೆಯಲು, ಓದಲು ಹಾಗು ಕೊಡವ ಭಾಷೆಯ ಅನೇಕ ಉಚ್ಚಾರಗಳನ್ನು ಸುಲಭದಲ್ಲಿ ಪ್ರಯೋಗಿಸಲು ಸಾಧ್ಯವಾಗುವಂತ ವಿಧಾನವನ್ನು ಕಂಡುಹಿಡಿದರಾದರೂ, ಕೊಡಗಿನವರಾಗಲೀ, ಕನ್ನಡ ಭಾಷಾ ತಜ್ಞರಾಗಲೀ ಅದಕ್ಕೆ ತಕ್ಕ ಪ್ರೋತ್ಸಾಹ ನೀಡಲಿಲ್ಲ. ಇದಲ್ಲದೆ ಕೊಡವ ಭಾಷೆಯ ಸಾಹಿತ್ಯವನ್ನು ಬರೆಯಲು ಹೊಸರೂಪದ "ಜೋಡ್ ಬೊಡಿ" ಮತ್ತು "ಜೋಡ್ ತಕ್ಕ್" ಗಳ ಪ್ರಯೋಗವನ್ನೂ ಸಹ ಕಿರಣ್‌ರವರು ಮಾಡಿದ್ದರು. ಆದರೆ ಈ ಎಲ್ಲಾ ಪ್ರಯತ್ನಗಳಿಗೆ ಜನರು ಯಾವುದೇ ರೀತಿಯಲ್ಲಿ ಸ್ಪಂದಿಸಲಿಲ್ಲವಾಗಿ ಈ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಲು ಇವರು ಮುಂದಾಗಲಿಲ್ಲ. ಶಿಲ್ಪಕೆತ್ತನೆಗೆ ಸಂಪೂರ್ಣ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಇದೂ ಒಂದು ಕಾರಣವಾಯಿತ್ತೆನ್ನಿಸುತ್ತದೆ. ಅಂದರೆ, ಒಂದು ಕ್ಷೇತ್ರದ ನಷ್ಟ ಮತ್ತೊಂದು ಕ್ಷೇತ್ರದ ಲಾಭವೆನ್ನಬಹುದು.

### ಭಾಗ–2

ತಮ್ಮೆಲ್ಲ ಸಂತೋಷ, ಹರ್ಷ, ನೆಮ್ಮದಿ, ಸಂಪತ್ತು, ಸಾಮಾಜಿಕ ಒಡನಾಟದ ಕಾಳಜಿಗಳನ್ನೆಲ್ಲಾ ಬದಿಗಿಟ್ಟು, ಕಳೆದ 40 ವರ್ಷಗಳಿಂದಲೂ ತಾನಾಯಿತು ತನ್ನ ಶಿಲ್ಪಗಳ ಸೃಷ್ಟಿಯಾಯಿತು ಎಂದು ಏಕಾಗ್ರಚಿತ್ತದಿಂದ ಶಿಲ್ಪಕೆತ್ತನೆಯಲ್ಲೇ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡಿರುವ ಕಿರಣ್ ಸುಬ್ಬಯ್ಯ ಪ್ರಾರಂಭಿಕ ದಿಸೆಯಲ್ಲಿ ಸಾಂಪ್ರದಾಯಕ ಶಿಲ್ಪಗಳನ್ನೇ ಬಂಡವಾಳವಾಗಿಟ್ಟುಕೊಂಡು ಹೆಚ್ಚು ಹೆಚ್ಚು ಕೆತ್ತಿ ಮಾರಾಟ ಮಾಡುತ್ತಿದ್ದರು. ಪೂರ್ಣ ಪ್ರಬುದ್ಧತೆ ಪಡೆದಂತೆಲ್ಲಾ ಸಮಕಾಲೀನ ಕೆತ್ತನೆಗಳಿಗೆ ಮನಸೋತವರು. "ಏಕಶಿಲೆ–ಬಹುಮುಖಿ ಶಿಲ್ಪಗಳು" ಎನ್ನುವ ಕಲ್ಪನೆ ಇವರ ಅಂತರಾಳದಲ್ಲಿ ನೆಲೆನಿಂತು, ಯಾವಾಗ ತಮ್ಮ ಶಿಲ್ಪಗಳ ಮಾರಾಟ ಪ್ರಕ್ರಿಯೆಯನ್ನು ತಟಸ್ಥಗೊಳಿಸಿದರೋ ಅಂದಿನಿಂದಲೇ "ಏಕಶಿಲೆ–ದ್ವಿಮುಖ ಶಿಲ್ಪಗಳು", "ಏಕಶಿಲೆ–ತ್ರಿಮುಖಿ ಶಿಲ್ಪಗಳು", ನಂತರ "ಏಕಶಿಲೆ–ಚತುರ್ಮುಖಿ ಶಿಲ್ಪಗಳು", "ಏಕಶಿಲೆ–ಪಂಚಮುಖಿ ಶಿಲ್ಪಗಳು"–ಹೀಗೆ ಮುಂದುವರೆದಂತೆಲ್ಲಾ ಹೊಸ ಹೊಸ ಅನ್ವೇಷಣೆಗಳನ್ನು ಶಿಲ್ಪ ಮಾಧ್ಯಮದಲ್ಲಿ ಮೂಡಿಸುತ್ತ ಬಂದವರು. ಆರುನೂರ ಐವತ್ತಕ್ಕಿಂತ ಮಿಗಿಲಾಗಿರುವ ಇಂತಹ ಶಿಲ್ಪಗಳು ಒಂದರಂತೆ ಮತ್ತೊಂದಿಲ್ಲ ; ಎಲ್ಲವೂ ವಿಭಿನ್ನ ಶೀರ್ಷಿಕೆಗಳೊಡನೆ, ವಿಭಿನ್ನ ಶಿಲ್ಪಗಳಾಗಿ ಮೈದಾಳಿವೆ.

ನವನವೀನ ಆಯಾಮಗಳನ್ನು ಶಿಲ್ಪಗಳಲ್ಲಿ ಸೃಷ್ಟಿಸುತ್ತ ಬಂದಿರುವ ಕಿರಣ್ ಸುಬ್ಬಯ್ಯನವರನ್ನು ವರ್ತಮಾನ ಕಾಲದ ಇತರ ಅನೇಕ ಶಿಲ್ಪಿಗಳ ಜೊತೆಯಲ್ಲಿ ತೂಗಿಸಲಾಗದು. ಇವರ ಸಾಧನೆಯ ಶಿಖರವಾಗಿರುವ "ಏಕಶಿಲೆ ಬಹುಮುಖಿ ಶಿಲ್ಪಗಳು" (Multi sided Sculptures) ನಮ್ಮ ರಾಜ್ಯದಲ್ಲಾಗಲೀ, ಇನ್ನಾವುದೇ ಪ್ರಾಂತ್ಯದಲ್ಲಾಗಲೀ ಯಾವ ಶಿಲ್ಪಿಯೂ ಸಾಧಿಸಿಲ್ಲ; ವಿದೇಶಗಳಲ್ಲೂ ಯಾವ ಒಬ್ಬ ಶಿಲ್ಪಿಯು ಈ ರೀತಿ ಸೃಷ್ಟಿಸಿದಂತಿಲ್ಲ. ಒಂದೆರಡು ಶಿಲ್ಪಗಳನ್ನು ಕೆತ್ತಿ ಅದನ್ನೇ ಬಂಡವಾಳವಾಗಿಸಿಕೊಂಡು ಹೆಸರು–ಪದವಿಗಳಿಗಾಗಿ ಪರದಾಡುವ ಈಗಿನ ನಮ್ಮ ಅನೇಕ ಶಿಲ್ಪಿಗಳು ನಾಚಿ ನೀರಾಗಿ ಹೋಗುವ

ಮಟ್ಟದಲ್ಲಿ ಇವರ ಶಿಲ್ಪಗಳಿವೆ. ಯಾವುದೇ ಮಜಲಿನಲ್ಲಿ ನೋಡಿದರೂ ಸಹ, ವಿಶ್ವಶ್ರೇಷ್ಠ ಶಿಲ್ಪಗಳ ಮಟ್ಟಕ್ಕೆ ನಿಂತವು ಎನ್ನಬಹುದಾಗಿದೆ.

ಕಿರಣ್‌ರವರೇ ಬೇಜಾರಿನಿಂದ ಹೇಳುವಂತೆ, ತನಗೆ ನಯವಾಗಿ ಬೆಣ್ಣೆ ಹಚ್ಚಿ ಸವರಿ ಮುಂದುವರೆಯುವ ಜೀವನ ಮಾರ್ಗದ ಕಲೆ ಮಾತ್ರ ಸಾಧಿಸಲೇ ಇಲ್ಲ. ಕಟ್ಟಾ ಕೊಡವ ಜನಾಂಗವರಂತೆಯೇ ನೇರತನ, ಒರಟುತನ ಜನ್ಮತಾ ಬಂದುಬಿಟ್ಟಿದೆ. ಇದು ತನ್ನ ಕರ್ಮ ; ಯಾರನ್ನೂ ದೂಶಿಸಲಾಗುವುದಿಲ್ಲ. "To achieve something in life one should be prepared to loose some other thing. But, if one does not achieve his goal or his dreams, then it is a sheer waste of life and time. But, whatever, atleast I have a consolation and satisfaction that I have achieved so many things in the filed of sculptures that no other man could achieve so far....." ಎಂದು ಬರದೇ ಇಟ್ಟಿದ್ದಾರೆ.

2003 ರಲ್ಲಿ ಜರ್ಮನಿಯ ಕೆಲವು ಪ್ರತಿಷ್ಠಿತ ವೀಕ್ಷಕರು ಇವರ ಗ್ಯಾಲರಿಗೆ ಬಂದು ನೋಡಿ ಅಲ್ಲಿ ಆಗ ಇದ್ದ ಸುಮಾರು ತೊಂಬತ್ತು (90) ಶಿಲ್ಪಗಳನ್ನು ಐದುಕೋಟಿ ರೂಪಾಯಿಗಳಿಗೆ ಕೊಂಡುಕೊಳ್ಳಲು ಮುಂದಾಗಿದ್ದರಂತೆ ! ಆ ಎಲ್ಲ ಶಿಲ್ಪಗಳನ್ನೂ ಜರ್ಮನಿಗೆ ಒಯ್ದು ಪ್ರತ್ಯೇಕ ಮ್ಯೂಸಿಯಂ ಕಟ್ಟಿಸುತ್ತೇವೆಂದೂ, ಕಿರಣ್‌ರವರನ್ನೂ ಅಲ್ಲಿಗೇ ಬರಲು ಆಹ್ವಾನಿಸಿದ್ದಲ್ಲದೇ ಸಮಕಾಲೀನ ಕಲಾವಿಭಾಗದ ಮುಖ್ಯಸ್ಥನನ್ನಾಗಿ ಗೌರವಿಸುತ್ತೇವೆಂದು ಪುಸಲಾಯಿಸಿದ್ದರಂತೆ. ಆದರೆ ಬೇರೆ ಬೇರೆ ಕಾರಣಗಳಿಂದಾಗಿ ಈ ಯೋಜನೆ ಕಾರ್ಯರೂಪಕ್ಕೆ ಬಾರದ್ದರಿಂದ ಇವರು ನಮ್ಮ ದೇಶದಲ್ಲೇ ನಮ್ಮ ನಡುವೆ ಮೈಸೂರಿನ ಮೂಲೆಯಲ್ಲಿ ಉಳಿಯುವಂತಾದರು.

ಸಮಕಾಲೀನ ಹಾಗೂ ನವ್ಯ ಶಿಲ್ಪಗಳ ಬಗ್ಗೆ ಪ್ರಥಮವಾಗಿ ಕಿರಣ್‌ರವರಿಗೆ ಮನದಟ್ಟಾದದ್ದು 1974 ರಲ್ಲಿ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಶಿಲ್ಪಕಲಾ ಶಿಬಿರದಲ್ಲಿ. ಆ ನಂತರ ಬೇಲೂರಿನಲ್ಲಿ ನಡೆದ ಮತ್ತೊಂದು ಶಿಬಿರದಲ್ಲಿ. ಮೈಸೂರು ದಸರಾ ಕಲಾ ಪ್ರದರ್ಶನ ಸಮಿತಿಯ ಸದಸ್ಯರಾಗಿದ್ದಾಗ (1981–82) ಅಮೂರ್ತ ಶಿಲ್ಪಗಳ ಪ್ರಭಾವ ತಿಳಿಯಿತು. ತಮಗರಿವಿಲ್ಲದೆಯೇ ಇವರು ಬಹಳಷ್ಟು ಹೊರಜಗತ್ತಿನ ಶಿಲ್ಪಗಳ ಪ್ರಭಾವಕ್ಕೆ ಒಳಗಾಗಿದ್ದಾರೆಂದೆನಿಸುತ್ತದೆ. ಇವರ ಅನೇಕ ಶಿಲ್ಪ ಕೆತ್ತನೆಗಳಲ್ಲಿ ನಾವು ಮೆಕ್ಸಿಕೋ ದೇಶದಲ್ಲಿ 15ನೆಯ ಶತಮಾನದ ಆಸುಪಾಸಿನ ಅವಧಿಯಲ್ಲಿ ಲಭ್ಯವಾದ ಕೆಲವು ಶಿಲ್ಪಗಳ ಪ್ರಭಾವವನ್ನು ಕಾಣಬಹುದು.[4] ಆಗಿನ ಜಪೋಟೆಕ್ಸ್ (Zapotecs) ಎನ್ನುವ ರಾಜವಂಶಜರ ಕಾಲದ ಶಿಲ್ಪಗಳ ಪ್ರಸ್ತುತಿಯನ್ನು ಇಲ್ಲಿ ನೆನೆಸಿಕೊಳ್ಳಬೇಕು. "ಬರ್ನಾರ್ಡ್ ನೋ ಎಲ್" ರವರು ತಮ್ಮ 'Mexican Art' ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ: "The sculptors always catches the expression on the face, whether it is laughing or reflective, at its most vital moment. This is the secret of their intense presence which touches us beyond time and difference with an inexhaustible power". ಹೀಗೆ ಮುಖ ಲಕ್ಷಣದ ಮರ್ಮವನ್ನು ಇಲ್ಲಿ ಹೇಳಿದಂತೆ ನಾವು ಕಿರಣ್‌ರವರ ಕೆಲವು ಶಿಲ್ಪಗಳಲ್ಲಿ ಕಾಣಬಹುದಾಗಿದೆ.

20ನೆಯ ಶತಮಾನದ ಜಗತ್ತಿನ ಶ್ರೇಷ್ಠ ಶಿಲ್ಪಿ "ಹೆನ್ರಿಮೂರ್"[5]ರ ಶಿಲ್ಪಗಳ ಪ್ರಭಾವ ಕಿರಣ್‌ರವರ ಮೇಲೆ ಆಗಿದೆಯೆನ್ನುವುದನ್ನು ಚೆನ್ನಾಗಿ ಗ್ರಹಿಸಬಹುದು. ನಮ್ಮ ದೇಶದ ಹಿಂದಿನ ಪ್ರಧಾನಿಗಳೂ ಮೇಧಾವಿಗಳೂ ಆಗಿದ್ದ ದಿವಂಗತ ಪಿ.ವಿ. ನರಸಿಂಹರಾವ್‌ರವರು ಈ ಹೆನ್ರಿಮೂರ್‌ರ ಬಗ್ಗೆ ಬರೆಯುತ್ತ, "In his inimitable way and in the granduer of his vision, Henry Moore heralds through the figures the triumphant emergence of the human body as a spirited song of joy, an impassioned paean for peace". (Henry Moore, New Delhi 1987 - The British council). ಈ ಮಾತು ಪ್ರಸ್ತುತ ಕಿರಣ್ ಸುಬ್ಬಯ್ಯನವರ ಶಿಲ್ಪಗಳಿಗೂ ಅನ್ವಯವಾಗುತ್ತದೆ. ಹೆನ್ರಿ ಮೂರ್‌ರೇ ಅನೇಕ ಸಂದರ್ಭಗಳಲ್ಲಿ ತಮ್ಮ ಶಿಲ್ಪಗಳ ಬಗ್ಗೆ ಹೇಳುವಾಗ "The one great advantage of sculpture over painting is that it can be looked at from all round and if this attribute is used and fully exploited then it

can give to sculpture a continual, changing, never ending surprise and interest." ಎಂದಿದ್ದಾರೆ. ತಮಗರಿವಿಲ್ಲದೆಯೇ ಕಿರಣ್‌ರವರು ಈ ತತ್ವವನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ.

ಕಠಿಣ ಮಾಧ್ಯಮಗಳನ್ನು ಸಹ ಯಥೇಚ್ಛವಾಗಿ ಬಳಸುತ್ತಿದ್ದ ಹೆನ್ರಿ ಮೂರ್ ಹೀಗೆ ಬರೆದಿದ್ದಾರೆ– "Unless you had some tussle, some collaboration and yet battle with your materials, you were being nobody. The artist must impose some of himself and his ideas on the material sympathetically but non-passively. Otherwise you are only behaving like the waves. There must be a human imprint and a human idea" (Henry Moore, New Delhi 1987. The British council)". ಈ ಮೇಲಿನ ಹೇಳಿಕೆ ಎಷ್ಟು ಸಲೀಸಾಗಿ ಕಿರಣ್‌ರವರಿಗೆ ಅನ್ವಯವಾಗುತ್ತದೆನ್ನುವುದೇ ಸೋಜಿಗ.

ಹೆನ್ರಿ ಮೂರ್‌ರ ಶಿಲ್ಪಗಳಿಗಿಂತಲೂ ಒಂದು ಹೆಜ್ಜೆ ಮುಂದಿಟ್ಟವರು ಕಿರಣ್‌ರವರು. ಹೆನ್ರಿ ಮೂರರ ಶಿಲ್ಪಗಳಲ್ಲಿ ಬಹುತೇಕ ಅಮೂರ್ತ ಪ್ರಧಾನ. ಆಕಾರ ವಿವರಣೆಗಳು ಅತ್ಯಲ್ಪ. ಆದರೆ ಕಿರಣ್‌ರವರ ಶಿಲ್ಪಗಳಲ್ಲಿ ಆಕಾರ ವಿವರಣೆಗಳನ್ನು ಕಾಣುತ್ತೇವೆ. ಸಮಕಾಲೀನ ತಂತ್ರವಿನ್ಯಾಸಗಳನ್ನು ಪೂರ್ಣ ಅಮೂರ್ತಕ್ಕೆ ಒಯ್ಯದೆ ವೀಕ್ಷಕನಿಗೆ ಅರ್ಥವಾಗಿಸುವ ಕಡೆಗೆ ಎಳೆದಿದ್ದಾರೆ. ತಮ್ಮ ಪ್ರತೀ ಶಿಲ್ಪಗಳ ತಳದಲ್ಲಿ ಶಿರೋನಾಮೆ ಕೊರೆದು ಏಕಶಿಲೆಯ ಬಹುರೂಪಿ(ಬಹುಮುಖಿ) ಶಿಲ್ಪಗಳನ್ನು ನೋಡುಗನು ತನ್ನ ಅಂತರಾಳದಿಂದ ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ. ಇವರ ಯಾವ ಶಿಲ್ಪವೂ "ಅನಾಮಧೇಯ" ಅಲ್ಲ! ನೋಡುವವ ನೋಡಿ ಬೇಕಾದಂತೆ ಅರ್ಥಮಾಡಿಕೊಳ್ಳಲಿ–ಎನ್ನುವಷ್ಟರ ದ್ರಾಷ್ಟ್ಯ ಇವರಲ್ಲಿ ಇಲ್ಲವೇ ಇಲ್ಲ. ಎಲ್ಲವೂ ನೇರ, ನಿಖರ, ಸ್ಪಷ್ಟ.

ಕಿರಣ್‌ರವರ ಶಿಲ್ಪಗಳಲ್ಲಿ ವಿಷಯಗಳು ಅನೇಕ, ಸಾಮಾಜಿಕ ಕಳಕಳಿ, ಲಂಚಗುಳಿತನದ ಪಿಡುಗು, ಸಮಾಜದ ಒಳಿತು ಕೆಡುಕುಗಳಿಗೆ ಕಾರಣೀಭೂತವಾಗಿರುವ ಪ್ರೀತಿ, ಪ್ರೇಮ, ರತಿಕ್ರೀಡೆ, ಮಿಥುನ ಮೊದಲಾದ ಮಾನವ ಸಹಜ ಕ್ರಿಯೆಗಳು ಇತ್ಯಾದಿ. ಆರುನೂರ ಐವತ್ತಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕೆತ್ತಿರುವ ಇವರ ಯಾವುದೇ ಸಮಕಾಲೀನ ಶಿಲ್ಪಗಳಲ್ಲಿ ಪುನರಾವರ್ತನೆ ಎಂಬುದಿಲ್ಲ. ತನ್ನ ಮನದಾಳದ ನೋವು, ನಲಿವು, ತುಡಿತ, ತೃಪ್ತಿ, ಸ್ವಪ್ನಲಹರಿ, ಆಸೆ ಆಕಾಂಕ್ಷೆಗಳನ್ನೆಲ್ಲಾ ಶಿಲ್ಪಗಳ ಮಾಧ್ಯಮದ ಮುಖಾಂತರ ಹೊರಹೊಮ್ಮಿದ್ದಾರೆ.

ಇವರ ಬಹುತೇಕ ಶಿಲ್ಪಗಳಲ್ಲಿ ಸ್ತ್ರೀ ಸಂಬಂಧಿ ರೂಪಕಗಳನ್ನು, ಸಂವೇದನೆಗಳನ್ನು, ಪ್ರೇಮ ಸಲ್ಲಾಪಗಳನ್ನು ಕಾಣುತ್ತೇವೆ. ಅವರ ಮಾತಿನಲ್ಲೇ ಹೇಳುವುದಾದರೆ– "Frankly speaking, the Female Forum in the nude, from time immemorial i.e., from the stone age, has caught the fancy, imagination, liking and admiration of a vast majority of mankind, artists, sculptors and writers. The Female nude Form has influenced them to a very great extent to excel themselves in their respective creative fields."

ಇವರ ಶಿಲ್ಪಕೆತ್ತನೆಗಳ ಬಗ್ಗೆಯೇ ಬೇಕಾದಷ್ಟು ಸಂಶೋಧನೆಗಳನ್ನು ಮಾಡಬಹುದು. ಬೇರೆ ಬೇರೆ ಆಯಾಮಗಳಲ್ಲಿ ಬೇರೆ ಬೇರೆ ಡಾಕ್ಟರೇಟುಗಳನ್ನು ಪಡೆದುಕೊಳ್ಳಬಹುದಾದಷ್ಟು ವಿಷಯ ಅಡಕಗೊಂಡ ಶಿಲ್ಪಗಳಿವು. ಇಂತಹ ಕೆಲವು ಶಿಲ್ಪಗಳ ಒಂದು ವಿವರಣಾತ್ಮಕ ಅವಲೋಕನ ಹಾಗೂ ಪರಾಮರ್ಶೆ ಈ ಭಾಗದ ಉದ್ದಿಶ್ಯ.

**ಸಾಂಪ್ರದಾಯಿಕ ಶಿಲ್ಪಗಳು :**

ಮುಮ್ಮುಖವೇ ಪ್ರಧಾನವಾಗಿರುವ ಶ್ರೀರಾಮ–ಸೀತಾ–ಲಕ್ಷ್ಮಣ ಹಾಗೂ ಹನುಮಂತನನ್ನು ಒಳಗೊಂಡ ಏಕಶಿಲ್ಪದ ಪೀಠ ಮಾತ್ರ ಬೇರೆಯಾಗಿದ್ದು ಪಾರಂಪರಿಕವಾದ ಸೌಂದರ್ಯವನ್ನು ಪಡೆದುಕೊಂಡಿದೆ (ಚಿತ್ರ ಸಂಖ್ಯೆ–2)

ಸರ್ವಾಂಗ ಆಭರಣ ಭೂಷಿತೆಯಾಗಿ ನಾಲ್ಕು ಕೈಗಳನ್ನು ಹೊಂದಿ, ಎರಡೂ ಕೈಗಳಲ್ಲಿ ಸಣ್ಣ ಕೊಡವನ್ನು (ಚೆಂಬು) ಹಿಡಿದು ನೀರು ಹರಿಸುತ್ತಿರುವ "ಶ್ರೀ ಕಾವೇರಿ" ಮಾತೆಯ ಮೂರು ಶಿಲ್ಪಗಳು ಇವರ ಸಂಗ್ರಹದಲ್ಲಿವೆ. ಸಂಪೂರ್ಣ ಹೊಯ್ಸಳ

ಶೈಲಿಯಲ್ಲಿ ಪೀಠವೂ ಸೇರಿದಂತೆ ಸೂಕ್ಷ್ಮ ಕುಸುರಿ ಕೆಲಸಗಳೊಡನೆ ಕೆತ್ತಿರುವ ಈ ಶಿಲ್ಪದಲ್ಲಿ ಪಾದದ ಬಳಿಯಲ್ಲಿ ಹೆಡೆಯೆತ್ತಿರುವ ಸರ್ಪಗಳು ಹಾಗೂ ಪ್ರಭಾವಳಿ ರಚನೆಯಲ್ಲಿ ಹೂಬಳ್ಳಿಗಳ ವಿನ್ಯಾಸ ಆಕರ್ಶಿಸುತ್ತವೆ. (ಚಿತ್ರ ಸಂಖ್ಯೆ–3)

ತಮ್ಮ ಶಿಲ್ಪ ಸೃಷ್ಟಿ ಪ್ರಕ್ರಿಯೆಯಲ್ಲಿ ಮೇಲೇರಿದಂತೆ ಸಹಜತೆಗೆ ಒತ್ತುಕೊಟ್ಟು ವಿಭಿನ್ನ ನಿರೂಪಣೆಯೊಡನೆ "ಶ್ರೀ ಕಾವೇರಿ" ಯ ಬೇರೊಂದು ವಿಗ್ರಹ ಕೆತ್ತಿರುತ್ತಾರೆ. ಇದರಲ್ಲಿ ಮಾತೆಗೆ ಕೇವಲ ಎರಡೇ ಕೈಗಳು. ಕೊಡ (ಚೆಂಬು) ಹಿಡಿದು ನೀರು ಹರಿಸುತ್ತಿಲ್ಲ ; ವರದಹಸ್ತ ಮತ್ತು ಅಭಯಹಸ್ತ ಶೋಭಿತಳಾಗಿ 'ಕುಂಡಿಕೆ'ಯ ನೀರಿನ ಚಿಲುಮೆಯೊಳಗಿಂದ ಉದ್ಭವವಾಗಿ ನಿಂತಿದ್ದಾಳೆ. ತಾನೇ ನೀರಾಗಿ, ನದಿಯಾಗಿ, ಹರಿದು ಕೋಟಿ ಜನರ ತೃಷೆಯನ್ನು ನೀಗಿಸುವ ಕಾವೇರಿಯ ಈ ಕಲ್ಪನೆ ಒಂದು ಅದ್ಭುತ ವಾಸ್ತವ ನಿರೂಪಣೆಯಾಗಿದೆಯೆನ್ನಬಹುದು. (ಚಿತ್ರ ಸಂಖ್ಯೆ–4)

ಆಂಜನೇಯನ ವೀರ್ಯಗುಣ ಭಕ್ತಿಭಾವ ತೋರಿಸುವ ಶಿಲ್ಪ (ಚಿತ್ರ ಸಂಖ್ಯೆ–5) ಹಾಗೂ ಗಣಪತಿಯ ಒಂದು ವಿಗ್ರಹ (ಚಿತ್ರ ಸಂಖ್ಯೆ–6) ಇವರ ಸಂಗ್ರಹದಲ್ಲಿವೆ. ಶ್ರೀ ಕೃಷ್ಣ (ಚಿತ್ರ ಸಂಖ್ಯೆ–7), ಶ್ರೀರಾಮ (ಚಿತ್ರ ಸಂಖ್ಯೆ–8), ವರಾಹಸ್ವಾಮಿ (ಚಿತ್ರ ಸಂಖ್ಯೆ–9), ಪರಶುರಾಮ (ಚಿತ್ರ ಸಂಖ್ಯೆ–10) ಹಾಗೂ ವಾಮನ ಮೂರ್ತಿ (ಚಿತ್ರ ಸಂಖ್ಯೆ–11) ಕೋರಿಕೆಯ ಮೇರೆ ಕೆತ್ತಿ ದೇವಸ್ಥಾನಗಳಿಗೆ ಪೂರೈಸಿದಂತವುಗಳಾಗಿವೆ.

ಪರಶಿವನ ಎದೆಮಟ್ಟದ ರೂಪಶಿಲ್ಪಗಳನ್ನು "ಚಿತಾಗಾರ", ನೀರಿನ ಬುಗ್ಗೆಗಳು ಇರುವ ಪಾರ್ಕ್ ಮತ್ತಿತರ ಕಡೆ ಸ್ಥಾಪಿಸಲಾಗಿವೆ (ಉದಾ: ಚಿತ್ರ ಸಂಖ್ಯೆ–12, 13).

## ಸಮಕಾಲೀನ ಏಕಮುಖ ಶಿಲ್ಪಗಳು :

ನೂರಾರು ಸಮಕಾಲೀನ ಆಧುನಿಕ ತತ್ವಾಧಾರಿತ ಶಿಲಾ ಶಿಲ್ಪಗಳನ್ನು ಇವರು ಕೆತ್ತಿರುತ್ತಾರೆ. ಒಂದು ಶಿಲೆಯಲ್ಲಿ ಒಂದೇ ವಿಷಯಾಧಾರಿತ ಶಿಲ್ಪಗಳಿವು.

ಏಳೆಂಟು ಬಗೆಯ ಸಣ್ಣಗಾತ್ರದ ಆನೆಗಳ ಶಿಲಾಶಿಲ್ಪಗಳನ್ನು ನೈಜತೆಗೆ ಒತ್ತುಕೊಟ್ಟು ಕೆತ್ತಿರುತ್ತಾರೆ. ಪ್ರಥಮ ನೋಟಕ್ಕೆ ಬೀಟೆ ಮರದಲ್ಲಿ ಕೆತ್ತಿದ್ದಾರೇನೋ ಹೇಗೋ ಎನ್ನುವಷ್ಟರ ಮಟ್ಟಿಗೆ ಪ್ರಬುದ್ಧತೆಯನ್ನು ಹೊಂದಿವೆ. ಉದಾಹರಣೆಗೆ "ಆನೆ ಮತ್ತು ಮರ" (ಚಿತ್ರ ಸಂಖ್ಯೆ–14). ಕುಸುರಿ ಕೆಲಸ ಸಮೇತ ಕೆತ್ತಿರುವ ಕಲ್ಲಿನ ತಿರುಗುವ ಪೀಠಗಳು ಅನೇಕ ಇವೆ. (ಉದಾ: ಚಿತ್ರ ಸಂಖ್ಯೆ–15) ; 'ಮೊಲ' (ಚಿತ್ರ ಸಂಖ್ಯೆ–16), "ರತಿಕ್ರೀಡಾ ಚುಂಬನ" (ಚಿತ್ರ ಸಂಖ್ಯೆ–17), ಕಲ್ಪನಾ ಚಾತುರ್ಯದೊಡನೆ ಕೆತ್ತಿರುವ "ನುಣುಚಿಕೊಳ್ಳುವವ" (Elluding) ಎನ್ನುವ ಶಿಲ್ಪ (ಚಿತ್ರ ಸಂಖ್ಯೆ–18), ದೇಹ ಸೌಂದರ್ಯ ಪ್ರತೀಕವಾಗಿರುವ "ನಿನ್ನ ಕಣ್ಣಿಗೆ ಮಾತ್ರ" (For your Eyes only) ಎನ್ನುವ ನುಣುಪಾದ ಶಿಲ್ಪ (ಚಿತ್ರ ಸಂಖ್ಯೆ–19) ಹಾಗೂ "ವ್ಯಾಮೋಹಕ್ಕೆ ಸೆಳೆಯುವ ಸ್ತ್ರೀ ಶಕ್ತಿ" (Seduction power of Women) ಎನ್ನುವ ಶೃಂಗಾರ ಪ್ರಧಾನವಾದ ನೀಳ ಏಕಶಿಲಾಶಿಲ್ಪ (ಚಿತ್ರ ಸಂಖ್ಯೆ–20) ಗಳನ್ನು ಇಲ್ಲಿ ಉದಾಹರಿಸಬಹುದು.

ಸಂಪೂರ್ಣ ಅಮೂರ್ತ ರಚನೆಗಳಾದ "ಎಚ್ಚರ ಮರೆತವಳು" (Carefree) – (ಚಿತ್ರ ಸಂಖ್ಯೆ–21); "ಖಿನ್ನ ಸುಂದರಿ" (The dejected female)– (ಚಿತ್ರ ಸಂಖ್ಯೆ–22) ; ಪ್ರೇಮಸಂಗಮ (Love Play)– (ಚಿತ್ರ ಸಂಖ್ಯೆ–23); ಹಾಗೂ "ಹೆಂಟೆ" (Hen)–(ಚಿತ್ರ ಸಂಖ್ಯೆ–24) ಮುಂತಾದವುಗಳನ್ನು ವೀಕ್ಷಿಸುವಾಗ ಹೆನ್ರಿ ಮೂರರ (Henry Moore) ಶಿಲ್ಪಗಳ ತಂತ್ರಗಾರಿಕೆಯನ್ನು ನೆನಪಿಸುತ್ತದೆ. ಆದರೂ ಸಹ ಕಿರಣ್ ರವರ ಸ್ವಂತಿಕೆಯ ಛಾಪು ಇವುಗಳಲ್ಲಿ ಪ್ರಕಟಗೊಂಡಿವೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರೂ, ನಾಡಿನ ಒಬ್ಬ ಖ್ಯಾತಶಿಲ್ಪಿಗಳೂ ಆದ ವೆಂಕಟಾಚಲಪತಿಯವರ ಕೆಲವು ಶಿಲ್ಪಗಳಿಗೂ, ಮೈಸೂರಿನ "ಕಾವಾ"ದ ಡೀನ್ ಆಗಿರುವ ಶಿಲ್ಪಿಗಳೂ ಆದ ವಿ.ಎ.ದೇಶಪಾಂಡೆ ಮತ್ತು ಬೆಂಗಳೂರಿನ ಖ್ಯಾತ ಕಲಾವಿದ ಶಿಲ್ಪಿ ಯು. ಭಾಸ್ಕರ್‌ರಾವ್‌ರವರ ಕೆಲವು ಶಿಲ್ಪಗಳಿಗೂ, ಕಿರಣ್ ಸುಬ್ಬಯ್ಯನವರ ಇಂತಹ ಅಮೂರ್ತ ಶಿಲ್ಪಗಳಿಗೂ ಸ್ವಲ್ಪ ಸಾಮರಸ್ಯ ಕಂಡುಬರುತ್ತದೆ. ಆದರೆ ಇವರ್‍ಯಾರೂ ಪರಸ್ಪರ ಪ್ರಭಾವಕ್ಕೆ ಒಳಾಗಾದವರಲ್ಲ; ಅಂತಹ

ಹೇಳಿಕೊಳ್ಳುವ ಮಟ್ಟದ ಪರಿಚಯಸ್ತರೂ ಅಲ್ಲ ; ಮತ್ತು ಈ ಶಿಲ್ಪಗಳೆಲ್ಲಾ ಕಿರಣ್‌ರವರ ಪ್ರಾರಂಭಿಕ ದಿಸೆಯವುಗಳು ಅನ್ನಬಹುದು.

## ಏಕಶಿಲೆ–ದ್ವಿಮುಖ ಶಿಲ್ಪಿಗಳು (Two in One Sculptures) :

ದೊಡ್ಡ ಕನ್ನಡಿಯ ಮುಂದೆ ಸರಿಯಾಗಿ ಇಡುವ ಏರ್ಪಾಟು ಮಾಡಿದರೆ ಕಿರಣ್‌ರವರ ಇಂತಹ ಶಿಲ್ಪಗಳನ್ನು ನೋಡುವಾಗ ಮುಂಭಾಗದ ಶಿಲ್ಪ ಒಂದಾದರೆ, ಪ್ರತಿಬಿಂಬದಲ್ಲಿ ಕಾಣಿಸುವ ಹಿಂಭಾಗದ ಶಿಲ್ಪ ಮತ್ತೊಂದು. ಒಂದೇ ಶಿಲೆಯ ಎರಡು ಕಡೆಗಳಲ್ಲಿ ಬೇರೆ ಬೇರೆಯಾದ ಎರಡು ಶಿಲ್ಪಗಳು ! ಇಂತಹ ಒಟ್ಟು 76 ಶಿಲ್ಪಗಳನ್ನು (ಅಂದರೆ 152 ಬೇರೆ ಬೇರೆ ಶಿಲ್ಪಗಳಾಗುತ್ತವೆ) ಇವರು ಕೆತ್ತಿರುತ್ತಾರೆ. ಇವುಗಳಿಗೆ ಸಾದಾ ನಿದರ್ಶನ ಇವರ "ನಮಸ್ತೆ" ಮತ್ತು "ನಾಚಿಕೆ" ಎನ್ನುವ ಏಕಶಿಲಾ ಶಿಲ್ಪ (ಚಿತ್ರ ಸಂಖ್ಯೆ–25). ವಿಡಂಬನೆ (Satire) ಕಿರಣ್‌ರವರ ಬಹುತೇಕ ಶಿಲ್ಪಗಳಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಉದಾ: ಒಂದೇ ಅಮೃತ ಶಿಲೆಯಲ್ಲಿ (Marble) ಕೆತ್ತಿರುವ "ಕಾಮೋದ್ರೇಕದ ಉರಿ" (Flame of passion) ಮತ್ತು "ಕಾಮೋದ್ರೇಕದ ಫಲ" (Fruits of passion) ಎನ್ನುವ ಶಿಲ್ಪ (ಚಿತ್ರ ಸಂಖ್ಯೆ: 26, ಎ, ಬಿ). ಹೀಗೆಯೇ 'ಜಟಾಯು ಭಂಗ' ಶಿಲ್ಪದ ಹಿಂಭಾಗದಲ್ಲಿ "ಶಿವಪಾರ್ವತಿ" ಶಿಲ್ಪ. ಇಲ್ಲಿ ರಾವಣನ ಕ್ರೋಧಭರಿತ ಭಂಗಿ, ಕೆಳಗೆ ಬಿದ್ದಿರುವ ಅವನ ಕಿರೀಟ, ಚೆಲ್ಲಾಪಿಲ್ಲಿಯಾಗಿರುವ ಇತರ ಆಕರಗಳು, ಮಾರಣಾಂತಿಕ ಹೊಡೆತ ಬಿದ್ದು ನಲುಗುತ್ತಿರುವ ಜಟಾಯು, ಬಲಾತ್ಕಾರದಿಂದ ಹೆಗಲಮೇಲೆ ಹಿಸುಕಲ್ಪಟ್ಟ ಶೋಕತಪ್ತೆ ಸೀತೆ–ಸಮಕಾಲೀನ ಉತ್ತಮ ಶಿಲ್ಪಕ್ಕೊಂದು ನಿದರ್ಶನ (ಚಿತ್ರ ಸಂಖ್ಯೆ : 27 ಎ, ಬಿ).

ಇನ್ನೊಂದು ನೀಳಶಿಲ್ಪದ ಮುಂಭಾಗದಲ್ಲಿ "ಹೆಸರಾಂತ ಸುಂದರಿ ಮತ್ತವಳ ಅಭಿಮಾನಿಗಳು" (Celebrity and her Fans) ಎನ್ನುವ ನುಣುಪಾದ ಸುಂದರ ಸ್ತ್ರೀಯ ಶಿಲ್ಪವಿದ್ದರೆ, ಹಿಂಭಾಗದಲ್ಲಿ "ಕರ್ವ ಚೌತ ಆಚರಿಸುವ ಖಾರ್ವಿ ಹೆಣ್ಣು" (A Fisher woman performing a ritual - karva chouth) ಎನ್ನುವ ಸುಂದರ ಕಲ್ಪನೆಯ ಶಿಲ್ಪವಿದೆ. (ಚಿತ್ರ ಸಂಖ್ಯೆ 28, ಎ, ಬಿ)

ಅಮೂರ್ತತೆಗೆ (Abstract) ಹತ್ತಿರದ ದ್ವಿಮುಖ ಶಿಲ್ಪಗಳು ಅನೇಕ ಇವೆ. "ಒಲ್ಲದವಳು" (Reluctant) ಶಿಲ್ಪ ಒಂದು ಬದಿಯಲ್ಲಾದರೆ "ವಿಶ್ವಾಮಿತ್ರ ಮೇನಕ" ಇನ್ನೊಂದು ಬದಿಯಲ್ಲಿದೆ (ಚಿತ್ರ ಸಂಖ್ಯೆ–29, ಎ, ಬಿ). ಒಂದು ಬದಿ "ಬಂಧನದಲ್ಲಿ" (In captivity) ಶಿಲ್ಪವಿದ್ದರೆ, ಮತ್ತೊಂದು ಕಡೆ "ಬೀಜಶಕ್ತಿ" (Seed power) ಶಿಲ್ಪವಿದೆ (ಚಿತ್ರ ಸಂಖ್ಯೆ 30, ಎ, ಬಿ). "ಕುಟುಂಬ" (Family) ಎನ್ನುವ ಶಿಲ್ಪದ ಹಿಂಭಾಗದಲ್ಲಿ "ತಪ್ಪಿದ ಹೊಂದಾಣಿಕೆ (Disharmony) ಎನ್ನುವ ಬೇರೊಂದು ಶಿಲ್ಪವಿದೆ (ಚಿತ್ರ ಸಂಖ್ಯೆ 31 ಎ, ಬಿ). 'ದೌರ್ಜನ್ಯ' (Atrocity) ಒಂದು ಕಡೆಯಲ್ಲಾದರೆ ಅದರ ಇನ್ನೊಂದು ಕಡೆಯಲ್ಲಿ "ಬಿದ್ದವರು" (The Fallen) ಎನ್ನುವ ಮನುಷ್ಯನನ್ನು ಪಶುವರ್ಗಕ್ಕೆ ವಿರೂಪಗೊಳಿಸುತ್ತ ವಿಡಂಬನಾತ್ಮಕವಾಗಿ ತೋರಿಸಿರುವ ಶಿಲ್ಪವಿದೆ (ಚಿತ್ರ ಸಂಖ್ಯೆ 32, ಎ, ಬಿ).

"ಒಂದು ಹೆಣ್ಣಿನ ಹಿಂಬದಿ" (Back of a women) ಎನ್ನುವ ಶಿಲ್ಪದ ಹಿಂಭಾಗದಲ್ಲಿ "ಸಲಿಂಗಕಾಮಿಗಳು" (Lesbians) ಎನ್ನುವ ಸರ್ವಾಂಗ ನುಣುಪಾಗಿರುವ ತೀಕ್ಷ್ಣ ಪರಿಣಾಮ ಕಾರಿಯಾದ ಅಮೂರ್ತ ಶಿಲ್ಪವಿದೆ. (ಚಿತ್ರ ಸಂಖ್ಯೆ–33 ಎ, ಬಿ), ಗಂಡಿನ ಭ್ರಮಾಲೋಕದ ದ್ವಿಮುಖಗಳನ್ನು ತಮ್ಮ "ಭ್ರಮೆ" (Illusion) ಎನ್ನುವ ಶಿಲ್ಪದ ಎರಡೂ ಕಡೆಗಳಲ್ಲಿ ಬೇರೆ ಬೇರೆ ಕೆತ್ತಿದ್ದಾರೆ (ಚಿತ್ರ ಸಂಖ್ಯೆ–34 ಎ, ಬಿ). ಸುಂದರ ಹೆಣ್ಣಿನ ಅರ್ಧಾಂಗ ನಿರೂಪಣೆಯ ಹಿಂದು ಮುಂದಿನ ಸರಳ ಶಿಲ್ಪಗಳು "ಚಾಪ್ಟರ್–1" (Chapter-1) ಮತ್ತು "ಚಾಪ್ಟರ್–2" (Chapter-2) (ಚಿತ್ರ ಸಂಖ್ಯೆ–35 ಎ,ಬಿ); "ಬಾಟಮ್ಸ್ ಅಪ್" (Bottoms up) ಎನ್ನುವ ಶಿಲ್ಪದ ಹಿಂಭಾಗದಲ್ಲಿ 'ಜಾಗೃತಿಯ ದೇವಾಲಯ' (Temple of Awakening) ಎನ್ನುವ ಶಿಲ್ಪವಿದೆ. (ಚಿತ್ರ ಸಂಖ್ಯೆ–36, ಎ, ಬಿ). ಮೇಲ್ನೋಟಕ್ಕೆ ವಿಕೃತ ಕಲ್ಪನೆಯೆಂದಿನ್ನಿಸಿದರೂ ಸಹ "ದೇವ ಮಾನವ" ಓಸೋ ರಜನೀಶರ ತತ್ವಾಧಾರಿತ ಶಿಲ್ಪಗಳೆನ್ನಿಸುತ್ತವೆ. ಇದಕ್ಕೆ ಪುಷ್ಟಿಕೊಡುವಂತೆಯೇ ಯೋಗನಿದ್ದೆ ಯಿಂದೆಬ್ಬಿಸುವ ಅರ್ಥದಲ್ಲಿ ಸರ್ಪದ ಕೆತ್ತನೆಯನ್ನೂ ಇಲ್ಲಿ ಬಳಸಿಕೊಂಡಿದ್ದಾರೆ. ಇದೇ ಬಗೆಯ ಇನ್ನೆರಡು ದ್ವಿಮುಖಿ ಶಿಲ್ಪಗಳಿವೆ. "ಕಾಮಕೇಳಿ ಸ್ವಪ್ನ" (Orgical Dream) ಶಿಲ್ಪದ ಹಿಂಭಾಗದಲ್ಲಿ "ಶಿವಶಕ್ತಿ" (Shiva Shakthi) (ಚಿತ್ರ ಸಂಖ್ಯೆ–37, ಎ, ಬಿ); ಮತ್ತೊಂದು "ಭ್ರಾಂತ

ಸ್ವಪ್ನದಲ್ಲಿರುವ ಇಬ್ಬರು ಹೆಂಗಳೆಯರು" (Two Women Fantasize) ಶಿಲ್ಪದ ಹಿಂಭಾಗದಲ್ಲಿರುವ "ಅರಳಿದ ಸುರತ-ಲಿಂಗ" (Coitus in Bloom-Linga) ಎನ್ನುವ ಶಿಲ್ಪ (ಚಿತ್ರ ಸಂಖ್ಯೆ-38 ಎ, ಬಿ).

ಕೆತ್ತನೆಯಲ್ಲಿ ಮುಂದುವರೆದಂತೆಲ್ಲಾ ಅವರ ಶಿಲ್ಪಗಳಲ್ಲಿ ಸ್ಫುಟತೆ ಮತ್ತು ಭಾವನಾತ್ಮಕ ಚಿಂತನೆಗಳನ್ನು ಹೆಚ್ಚಾಗಿ ಕಾಣುತ್ತೇವೆ. ಅನೇಕ ಶಿಲ್ಪಗಳ ಉದಾಹರಣೆ ಕೊಡಬಹುದು. "ದುಡಿಯುವ ತಾಯಿ" (A Working Mother) ಮತ್ತದರ ಹಿಂಬದಿಯ "ಧನ್ಯತೆ" (Bliss) ಎನ್ನುವ ಶಿಲ್ಪ. ಅಲಂಕಾರಿಕ ಶಿಲ್ಪಗಳಂತೆ ಕಂಡುಬಂದರೂ ಸಹ ಸದೃಢ ಭಾವನೆಗಳನ್ನು ಹೊರಸೂಸುತ್ತವೆ. (ಚಿತ್ರ ಸಂಖ್ಯೆ-39 ಎ,ಬಿ).

"ಪಂಚಲಿಂಗೇಶ್ವರ" (Panchalingeshwara) ಶಿಲ್ಪದ ಹಿಂಬದಿಯಲ್ಲಿ "ಸರ್ವವ್ಯಾಪಿ ಶಿವ ಮತ್ತು ಪುತ್ರರು" (The Omnipresent Lord Shiva & Sons) ಇದೆ. ಟಿ. ನರಸೀಪುರದ ಪಕ್ಕದಲ್ಲಿರುವ ಪಂಚಲಿಂಗಗಳು ಬೇರೆ ಬೇರೆ ಗುಡಿಗಳಲ್ಲಿವೆ ; ಇವೆಲ್ಲದರ ದರ್ಶನ ಒಂದರಲ್ಲೇ ಆಗುವಂತೆ ಈ ಶಿಲ್ಪ ಕೆತ್ತಿರುತ್ತಾರೆ. (ಚಿತ್ರ ಸಂಖ್ಯೆ-40ಎ, ಬಿ). "ಕೃತ್ರಿಮ ಮುಖವಾಡ" (Put on Facade) ಎನ್ನುವ ಮಾರ್ಮಿಕ ಕೆತ್ತನೆಯ ಹಿಂಭಾಗದಲ್ಲಿ "ಸಮಾಧಾನಪಡಿಸಿ ಕೊಳ್ಳುವವರು" (Consoling each other) ಎನ್ನುವ ಶಿಲ್ಪವಿದೆ (ಚಿತ್ರ ಸಂಖ್ಯೆ-41 ಎ, ಬಿ).

ಮಾನವ ಪಾದವನ್ನೇ ಆಧಾರವಾಗಿಟ್ಟುಕೊಂಡು ಕೆತ್ತಿರುವ ದ್ವಿಮುಖ ಶಿಲ್ಪದ ಒಂದು ಬದಿ "ಮೋಹ ಚಪಲತೆ ನಿನ್ನನ್ನು ಎಳೆಯಬಹುದು-ತಪ್ಪಿಸಿಕೊಂಡು ಸರಿ ಹೆಜ್ಜೆ ಹಾಕು" (Temptation may pull you-avoid them and take the right step Forward) ಇದ್ದರೆ ಇನ್ನೊಂದು ಬದಿ "ಅಡಚಣೆಗಳೇ? ಸರಿಯಾದ ಪಾದ ಇಟ್ಟು ಮುನ್ನಡೆ" (Obstacles ? Put your Best Foot Forward and Carry on) ಶಿಲ್ಪ ಕೆತ್ತನೆಯಿದೆ. ಸಾಮಾಜಿಕ ಕಳಕಳಿಯ ಮಾನವನ ಮುನ್ನಡೆಗೆ ಪ್ರೇರಕವಾದ ದೀರ್ಘ ವಿವರಣೆಯ ಈ ಶಿಲ್ಪ ಸರಳ ಮತ್ತು ಅರ್ಥಗರ್ಭಿತವಾಗಿದೆ (ಚಿತ್ರ ಸಂಖ್ಯೆ-42 ಎ, ಬಿ). ಸಹಜ ಕೆತ್ತನೆಯ "ಗುಡಿಯ ಪೂಜಾರಿ" (Temple Priest) ಶಿಲ್ಪದ ಹಿಂಭಾಗದಲ್ಲಿ "ಹಳ್ಳಿಯ ಯಜಮಾನ" (Village Headman) ಶಿಲ್ಪ ಕೆತ್ತನೆಯಿದೆ (ಚಿತ್ರ ಸಂಖ್ಯೆ-43 ಎ, ಬಿ). ನಮ್ಮ ಸಮಾಜದ ಒಂದು ಅನಿವಾರ್ಯ ಪಿಡುಗಿನ ಸಂಕೇತವಾಗಿ "ಫ್ಯಾಷನ್ ಮಾಡೆಲ್" (Fashion Model), ಮತ್ತದರ ಹಿಂಭಾಗದ "ಪಾರ್ಟಿ ಮುಗಿದ ಮೇಲೂ ಅಪೇಕ್ಷಿಸುತ್ತ ಉಳಿದ ಅತಿಥಿಗಳು" (Even after the party is over guests still lingering on........) ಶಿಲ್ಪಗಳಿವೆ (ಚಿತ್ರ ಸಂಖ್ಯೆ-44 ಎ, ಬಿ). ಈ ದ್ವಿಮುಖ ಶಿಲ್ಪಗಳು ಸುಂದರ ಹೆಣ್ಣಿನ ಶೋಷಣೆಯ ಪ್ರತೀಕವಾಗಿ ಕೆತ್ತಲ್ಪಟ್ಟಿವೆ.

ಇನ್ನೊಂದು ಶಿಲ್ಪದ ಮುಂದುಗಡೆ, "ಧೀರ ಹಾಗೂ ಸಾಹಸಿಗನನ್ನು ಒಲಿವ ಅದೃಷ್ಟ ಕನ್ಯೆ" (Lady Luck Favours the Bold and Adventurous) ಎನ್ನುವ ಕೆತ್ತನೆಯಿದ್ದು, ಹಿಂದುಗಡೆ "ವಾತ್ಸ್ಯಾಯನ ತನ್ನ ಅನ್ವೇಷಣೆಯಲ್ಲಿ ತಲ್ಲೀನ" (Vatsyayana immersed in Research) ಎನ್ನುವ ವಿವರಣಾತ್ಮಕ ಕೆತ್ತನೆಯನ್ನು ಕಾಣಬಹುದು (ಚಿತ್ರ ಸಂಖ್ಯೆ-45 ಎ, ಬಿ).

"ಸಂತಸದ ಹೊನಲು" (Spirit of Joy) ಎನ್ನುವ ಶಿಲ್ಪದಲ್ಲಿ ತಾಯಿ ತನ್ನ ಮಗಳನ್ನು ತಬ್ಬಿ ಹಿಡಿದು ಸುಖಪಡುವ ಪರಮಾನಂದ ಭಾವವಿದ್ದರೆ ಅದರ ಹಿಂಬದಿಯಲ್ಲಿ "ಯೋನಿ ಪೂಜಾ" (Yoni Pooja) ಎನ್ನುವ ಮಾರ್ಮಿಕ ಸತ್ಯಾನ್ವೇಷಣೆಯ ಶಿಲ್ಪವಿದೆ (ಚಿತ್ರ ಸಂಖ್ಯೆ-46 ಎ. ಬಿ).

## ಏಕಶಿಲೆ-ತ್ರಿಮುಖಿ ಶಿಲ್ಪಗಳು (Three in one sculptures) :

ಒಂದೇ ಶಿಲೆಯ ಮೂರು ದಿಕ್ಕುಗಳಲ್ಲಿಯೂ ಮೂರು ಬೇರೆ ಬೇರೆಯ ಶಿಲ್ಪಗಳ ಕೆತ್ತನೆಗಳನ್ನು ಸುಮಾರು 47 ರಷ್ಟು ಮಾಡಿದ್ದಾರೆ ; ಅಂದರೆ ಇದರಲ್ಲಿ ಒಟ್ಟು 141 ವಿಭಿನ್ನ ಕೆತ್ತನೆಯ ಶಿಲ್ಪಗಳನ್ನು ಕಾಣಬಹುದು.

ಒಂದು ಕಲ್ಲಿನ ಬಲಗಡೆಯಲ್ಲಿ "ದುಃಖಾರ್ತ" (Grief) ಎನ್ನುವ ಶಿಲ್ಪದ ಕೆತ್ತನೆಯಿದ್ದರೆ, ಎಡಗಡೆಯಲ್ಲಿ "ಸ್ತ್ರೀಶಕ್ತಿ" (Sthree Shakthi) ಎನ್ನುವ ಕೆತ್ತನೆಯಿದೆ. ಮುಂಭಾಗದಿಂದ ನೋಡಿದರೆ "ಬಳಲಿದವ" (Sulky) ಎನ್ನುವ ಬೇರೆಯೇ ಶಿಲ್ಪಕೆತ್ತನೆಯಿದೆ. ಸಮಕಾಲೀನ ತತ್ವಾಧಾರಿತ ಶಿಲ್ಪಗಳಿವು (ಚಿತ್ರ ಸಂಖ್ಯೆ–47 ಎ, ಬಿ, ಸಿ).

ಸಾಮಾಜಿಕ ಪ್ರಭಾವಗಳ ಪ್ರತಿಬಿಂಬದಂತಿರುವ ಒಂದು ತ್ರಿಮುಖಿ ಶಿಲ್ಪದ ಮುಂಭಾಗದಲ್ಲಿ "ಭ್ರಷ್ಟ ಸರ್ಕಾರಿ ನೌಕರನಿಗೆ.......... ನಿಮ್ಮ ಜೇಬಿನ ಮೇಲೆನೇ ಕಣ್ಣು !" (A corrupt govt. official....... eyes only your pockets) ಎನ್ನುವ ವಿನೂತನ ಕೆತ್ತನೆಯಿದೆ. ಇದರ ಒಂದು ಬದಿಯಲ್ಲಿ ಬೇರೆ ತತ್ವ ಪ್ರಸಾರದ "ವನ್ಯಜೀವಿ ಪ್ರೀತಿಸಿ, ಉಳಿಸಿ !" (Save and Love wild life) ಎನ್ನುವ ಕೆತ್ತನೆಯಿದ್ದು ಇನ್ನೊಂದು ಬದಿಯಲ್ಲಿ "ಶಿಶ್ನ–ಯೋಗರಹಸ್ಯ ಶಕ್ತಿಕೇಂದ್ರ" (Penis....... a mystical power house) ಎನ್ನುವ ವಿಭಿನ್ನ ಕೆತ್ತನೆಯಿದೆ (ಚಿತ್ರ ಸಂಖ್ಯೆ–48 ಎ,ಬಿ,ಸಿ). ಕೊನೆಯ ಶಿಲ್ಪದ ಸೇರ್ಪಡೆಯ ಔಚಿತ್ಯವೇನೆಂದು ಪ್ರಶ್ನಿಸಿದಾಗ, ಏಕ ಶಿಲೆಯಲ್ಲಿ ಸಂಪೂರ್ಣ ವಿಭಿನ್ನ ಮಾದರಿಗಳ ಶಿಲ್ಪಗಳ ಸೃಷ್ಟಿಯನ್ನು ನೋಡಿರೆಂದು ಅವರೇ ಹೇಳುತ್ತಾರೆ.

ಬಿರುಗಾಳಿ (Storm) ಒಂದು ಬದಿಯಲ್ಲಾದರೆ, "ಕ್ಷೋಭೆ" (Tempest) ಮತ್ತೊಂದು ಬದಿಯಲ್ಲಿದ್ದು, "ವಿಪ್ಲವ ಮತ್ತದರ ನಂತರ" (Deluge and After) ಎನ್ನುವ ಶಿಲ್ಪ ಇನ್ನೊಂದು ಬದಿಯಲ್ಲಿದೆ. ಪ್ರಸ್ತುತ ಮಾನವನ ಪ್ರಕ್ಷುಬ್ಧ ವಾತಾವರಣವನ್ನು ತೋರಿಸುವ ಈ ನವ್ಯ ಶಿಲ್ಪಗಳು ತುಂಬ ಪ್ರಭಾವ ಬೀರುತ್ತವೆ. (ಚಿತ್ರ ಸಂಖ್ಯೆ–49 ಎ, ಬಿ, ಸಿ).

ಸುಮಾರು 4½ ಅಡಿ ಎತ್ತರದ ನೀಳ ಶಿಲ್ಪತ್ರಯದ ಒಂದು ಕಡೆಯಲ್ಲಿ "ಸಂಯೋಗ" (The Union) ಕೆತ್ತನೆಯಿದ್ದರೆ, ಎರಡನೆಯ ಕಡೆಯಲ್ಲಿ "ಗರ್ಭಾಂಕುರ" (Conception) ಎನ್ನುವ ಕೆತ್ತನೆಯಿದ್ದು, ಮೂರನೆಯ ಕಡೆಯಲ್ಲಿ "ಪರಿಣಾಮ" (The Outcome) ಎನ್ನುವ ಶಿಲ್ಪವಿದ್ದು, ಸ್ತ್ರೀಪುರುಷ ಸಮಾಗಮದ ವಿಸ್ತೃತ ರೂಪ ವಿವರಣೆಯಂತಿದೆ (ಚಿತ್ರ ಸಂಖ್ಯೆ–50 ಎ,ಬಿ,ಸಿ).

ಒಂದು ಬದಿಯಲ್ಲಿ "ರಾಜಕುವರ–ರಾಜಕುವರಿ" ಚುಂಬನ ಪ್ರಕ್ರಿಯೆಯಲ್ಲಿದ್ದರೆ, ಇನ್ನೊಂದು ಬದಿಯಲ್ಲಿ "ಅಡಗಿದ ಉದ್ದೀಪನಕಾರ" (A Hidden Motivator) ತನ್ನ ಒಳಸಂಚು ರೂಪಿಸುತ್ತಿದ್ದು, ಮತ್ತೊಂದು ಬದಿಯಲ್ಲಿ "ಆತನ ಮಡಿಲಲ್ಲಿ" (On his lap) ಸುಖದಲ್ಲಿರುವ ಸರಳ ಕೆತ್ತನೆಯಿದೆ (ಚಿತ್ರ ಸಂಖ್ಯೆ–51 ಎ, ಬಿ, ಸಿ)

ಇನ್ನೊಂದು ತ್ರಿಮುಖಿ ಶಿಲ್ಪದಲ್ಲಿ ಎದಿರು "ಅನುಗ್ರಹಕ್ಕೆ ಕಾತರಿಸುವವನು" (Seeking Favours) ಶಿಲ್ಪವಿದ್ದರೆ, ಒಂದು ಬದಿಯಲ್ಲಿ "ಐಶ್ವರ್ಯ ಹೀನನಾಗಿ ಬೇಡುವ ಸ್ಥಿತಿ" (The Fall From Riches) ಶಿಲ್ಪವಿದ್ದು, ಮತ್ತೊಂದು ಬದಿಯಲ್ಲಿ "ಅತ್ಯಮೂಲ್ಯ ಆಸ್ತಿ" (Precious possession) ಎನ್ನುವ ತಾಯಿ ಕರುಳಿನ ಮಮತೆಯ ಶಿಲ್ಪವಿದೆ (ಚಿತ್ರ ಸಂಖ್ಯೆ–52 ಎ, ಬಿ, ಸಿ). ಹೀಗೆಯೇ "ಬುಡಕಟ್ಟು ಮಹಿಳೆ" (Tribal Women) ಶಿಲಾಕೃತಿ ಒಂದು ಕಡೆಯಲ್ಲಾದರೆ, "ಟೀ ಎಲೆ ಕುಯ್ಯುವವಳು" (Tea Plucker) ಇನ್ನೊಂದು ಕಡೆಯಲ್ಲಿದ್ದು, ನಡುವೆ "ಪ್ರಶ್ನಾರ್ಥ–?". ನಮ್ಮ ಊಹೆಗೆ ಬಿಟ್ಟ ಅಪರೂಪದ ಕೆತ್ತನೆ ಇದೊಂದೆ (ಚಿತ್ರ ಸಂಖ್ಯೆ–53 ಎ, ಬಿ, ಸಿ). ನಮ್ಮ ಸಮಾಜದ ಸ್ತ್ರೀ ಸಂಕುಲದ ನೋವಿನ ಕಥೆಯನ್ನು "ಬಲಾತ್ಕರಿಸಲ್ಪಟ್ಟವರು" (Rape victims) ಎನ್ನುವುದರಲ್ಲಿ ಕೆತ್ತಿ ತೋರ್ಪಡಿಸಿದರೆ, ಇದರ ಒಂದು ಬದಿಯಲ್ಲಿ ಸ್ತ್ರೀ ಶೋಷಣೆಯ "ಪ್ರದರ್ಶಿತಳು"(Exhibitionist) ಶಿಲ್ಪವನ್ನು ಕೆತ್ತಿ, ಇನ್ನೊಂದು ಬದಿಯಲ್ಲಿ "ದೇವದಾಸಿಯರು" (Devadasis) ಎನ್ನುವ ಸ್ವವಿವರಣೆಯ ಕೆತ್ತನೆಯನ್ನು ಮಾಡಿದ್ದಾರೆ (ಚಿತ್ರ ಸಂಖ್ಯೆ–54 ಎ,ಬಿ,ಸಿ).

ಮುಂದುವರೆದಂತೆ, "ಒಬ್ಬ ಬುಡಕಟ್ಟು ಸುಂದರಿ" (A Tribal Girl) ಶಿಲ್ಪದ ಒಂದು ಕಡೆಯಲ್ಲಿ "ರಾತ್ರಿ ಎದಿರು ನೋಡುವವಳು" (Waiting for Nighfall) ಎನ್ನುವ ಕೆತ್ತನೆಯಿದ್ದು, ಮತ್ತೊಂದು ಕಡೆಯಲ್ಲಿ ಬೆನ್ನ ಹಿಂಬದಿ ಕೈಯೊಂದರ "ದ್ವಿಮುಖ ಒತ್ತಾಸೆ" (Double Backing) ಎನ್ನುವ ನವ್ಯ ತಂತ್ರದ ಕೆತ್ತನೆಯಿದೆ. ಉತ್ತಮ ಸಂಯೋಜನೆಯನ್ನು ಇಲ್ಲಿ ಕಾಣಬಹುದಾಗಿದೆ. (ಚಿತ್ರ ಸಂಖ್ಯೆ–55 ಎ, ಬಿ, ಸಿ)

"ಪ್ರೇಮದ ಸುಳಿಯಲ್ಲಿ" (In the Whirlpool of Love) ಶಿಲ್ಪದ ಒಂದು ಬದಿಗೆ "ನಿಷ್ಕಾಮ ಪ್ರೇಮ" (Platonic love) ಶಿಲ್ಪವಿದ್ದು, ಮತ್ತೊಂದು ಬದಿಯಲ್ಲಿ "ಮೂವರು ಕನ್ಯಾಮಣಿಗಳು" (Three Girls-Moomoodia) ಎನ್ನುವ ಶಿಲ್ಪ ಕೆತ್ತನೆಯಿದ್ದು, ಅಂತರರಾಷ್ಟ್ರೀಯ ಪ್ರೇಮ ಶಿಲ್ಪಿ "ರೋಡಿನ್"[6] (Rodin)ನ ನುಣುಪು ವೈಯಾರದ ಶಿಲ್ಪಗಳನ್ನು ನೋಡಿದಂತಹ ಅನುಭವವಾಗುತ್ತದೆ (ಚಿತ್ರ ಸಂಖ್ಯೆ–56 ಎ, ಬಿ, ಸಿ).

**ಚಿತ್ರ ಸಂಖ್ಯೆ 27(ಬಿ) : ಶಿವಪಾರ್ವತಿ**
**ಚಿತ್ರ ಸಂಖ್ಯೆ 27(ಎ) : ಜಟಾಯುಭಂಗ**
**ಚಿತ್ರ ಸಂಖ್ಯೆ 26(ಎ) : "ಕಾಮೋದ್ರೇಕದ ಉರಿ" ಅಮೃತ ಶಿಲೆ (Flame of passion)**
**ಚಿತ್ರ ಸಂಖ್ಯೆ 26(ಬಿ) : "ಕಾಮೋದ್ರೇಕದ ಫಲ" ಅಮೃತ ಶಿಲೆ (Fruits of passion)**

ತಮ್ಮೆಲ್ಲ ಸಂತೋಷ, ಹರ್ಷ, ನೆಮ್ಮದಿ, ಸಂಪತ್ತು, ಸಾಮಾಜಿಕ ಒಡನಾಟದ ಕಾಳಜಿಗಳನ್ನೆಲ್ಲಾ ಬದಿಗಿಟ್ಟು, ಕಳೆದ 40 ವರ್ಷಗಳಿಂದಲೂ ತಾನಾಯಿತು ತನ್ನ ಶಿಲ್ಪಗಳ ಸೃಷ್ಟಿಯಾಯಿತು ಎಂದು ಏಕಾಗ್ರಚಿತ್ತದಿಂದ ಶಿಲ್ಪಕೆತ್ತನೆಯಲ್ಲೇ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡಿರುವ ಕಿರಣ್ ಸುಬ್ಬಯ್ಯ ಪ್ರಾರಂಭಿಕ ದಿಸೆಯಲ್ಲಿ ಸಾಂಪ್ರದಾಯಕ ಶಿಲ್ಪಗಳನ್ನೇ ಬಂಡವಾಳವಾಗಿಟ್ಟುಕೊಂಡು ಹೆಚ್ಚು ಹೆಚ್ಚು ಕೆತ್ತಿ ಮಾರಾಟ ಮಾಡುತ್ತಿದ್ದರು. ಪೂರ್ಣ ಪ್ರಬುದ್ಧತೆ ಪಡೆದಂತೆಲ್ಲಾ ಸಮಕಾಲೀನ ಕೆತ್ತನೆಗಳಿಗೆ ಮನಸೋತವರು. "ಏಕಶಿಲೆ–ಬಹುಮುಖಿ ಶಿಲ್ಪಗಳು" ಎನ್ನುವ ಕಲ್ಪನೆ ಇವರ ಅಂತರಾಳದಲ್ಲಿ ನೆಲೆನಿಂತು, ಯಾವಾಗ ತಮ್ಮ ಶಿಲ್ಪಗಳ ಮಾರಾಟ ಪ್ರಕ್ರಿಯೆಯನ್ನು ತಟಸ್ಥಗೊಳಿಸಿದರೋ ಅಂದಿನಿಂದಲೇ "ಏಕಶಿಲೆ–ದ್ವಿಮುಖಿ ಶಿಲ್ಪಗಳು", "ಏಕಶಿಲೆ–ತ್ರಿಮುಖಿ ಶಿಲ್ಪಗಳು", ನಂತರ "ಏಕಶಿಲೆ–ಚತುರ್ಮುಖಿ ಶಿಲ್ಪಗಳು", "ಏಕಶಿಲೆ–ಪಂಚಮುಖಿ ಶಿಲ್ಪಗಳು"–ಹೀಗೆ ಮುಂದುವರೆದಂತೆಲ್ಲಾ ಹೊಸ ಹೊಸ ಅನ್ವೇಷಣೆಗಳನ್ನು ಶಿಲ್ಪ ಮಾಧ್ಯಮದಲ್ಲಿ ಮೂಡಿಸುತ್ತ ಬಂದವರು. ಆರುನೂರ ಐವತ್ತಕ್ಕಿಂತ ಮಿಗಿಲಾಗಿರುವ ಇಂತಹ ಶಿಲ್ಪಗಳು ಒಂದರಂತೆ ಮತ್ತೊಂದಿಲ್ಲ ; ಎಲ್ಲವೂ ವಿಭಿನ್ನ ಶೀರ್ಷಿಕೆಗಳೊಡನೆ, ವಿಭಿನ್ನ ಶಿಲ್ಪಗಳಾಗಿ ಮೈದಾಳಿವೆ.

ನವನವೀನ ಆಯಾಮಗಳನ್ನು ಶಿಲ್ಪಗಳಲ್ಲಿ ಸೃಷ್ಟಿಸುತ್ತ ಬಂದಿರುವ ಕಿರಣ್ ಸುಬ್ಬಯ್ಯನವರನ್ನು ವರ್ತಮಾನ ಕಾಲದ ಇತರ ಅನೇಕ ಶಿಲ್ಪಿಗಳ ಜೊತೆಯಲ್ಲಿ ತೂಗಿಸಲಾಗದು. ಇವರ ಸಾಧನೆಯ ಶಿಖರವಾಗಿರುವ "ಏಕಶಿಲೆ ಬಹುಮುಖಿ ಶಿಲ್ಪಗಳು" (Multi sided Sculptures) ನಮ್ಮ ರಾಜ್ಯದಲ್ಲಾಗಲೀ, ಇನ್ನಾವುದೇ ಪ್ರಾಂತ್ಯದಲ್ಲಾಗಲೀ ಯಾವ ಶಿಲ್ಪಿಯೂ ಸಾಧಿಸಿಲ್ಲ; ವಿದೇಶಗಳಲ್ಲೂ ಯಾವ ಒಬ್ಬ ಶಿಲ್ಪಿಯು ಈ ರೀತಿ ಸೃಷ್ಟಿಸಿದಂತಿಲ್ಲ. ಒಂದೆರಡು ಶಿಲ್ಪಗಳನ್ನು ಕೆತ್ತಿ ಅದನ್ನೇ ಬಂಡವಾಳವಾಗಿಸಿಕೊಂಡು ಹೆಸರು–ಪದವಿಗಳಿಗಾಗಿ ಪರದಾಡುವ ಈಗಿನ ನಮ್ಮ ಅನೇಕ ಶಿಲ್ಪಿಗಳು ನಾಚಿ ನೀರಾಗಿ ಹೋಗುವ ಮಟ್ಟದಲ್ಲಿ ಇವರ ಶಿಲ್ಪಗಳಿವೆ. ಯಾವುದೇ ಮಜಲಿನಲ್ಲಿ ನೋಡಿದರೂ ಸಹ, ವಿಶ್ವಶ್ರೇಷ್ಠ ಶಿಲ್ಪಗಳ ಮಟ್ಟಕ್ಕೆ ನಿಂತವು ಎನ್ನಬಹುದಾಗಿದೆ.

ಕಿರಣ್‌ರವರೇ ಬೇಜಾರಿನಿಂದ ಹೇಳುವಂತೆ, ತನಗೆ ನಯವಾಗಿ ಬೆಣ್ಣೆ ಹಚ್ಚಿ ಸವರಿ ಮುಂದುವರೆಯುವ ಜೀವನ ಮಾರ್ಗದ ಕಲೆ ಮಾತ್ರ ಸಾಧಿಸಲೇ ಇಲ್ಲ. ಕಟ್ಟಾ ಕೊಡವ ಜನಾಂಗವರಂತೆಯೇ ನೇರತನ, ಒರಟುತನ ಜನ್ಮತಾ ಬಂದುಬಿಟ್ಟಿದೆ. ಇದು ತನ್ನ ಕರ್ಮ ; ಯಾರನ್ನೂ ದೂಶಿಸಲಾಗುವುದಿಲ್ಲ. "To achieve something in life one should be prepared to loose some other thing. But, if one does not achieve his goal or his dreams, then it is a sheer waste of life and time. But, whatever, atleast I have a consolation and satisfaction that I have achieved so many things in the filed of sculptures that no other man could achieve so far....." ಎಂದು ಬರದೇ ಇಟ್ಟಿದ್ದಾರೆ.

2003 ರಲ್ಲಿ ಜರ್ಮನಿಯ ಕೆಲವು ಪ್ರತಿಷ್ಠಿತ ವೀಕ್ಷಕರು ಇವರ ಗ್ಯಾಲರಿಗೆ ಬಂದು ನೋಡಿ ಅಲ್ಲಿ ಆಗ ಇದ್ದ ಸುಮಾರು ತೊಂಬತ್ತು (90) ಶಿಲ್ಪಗಳನ್ನು ಐದುಕೋಟಿ ರೂಪಾಯಿಗಳಿಗೆ ಕೊಂಡುಕೊಳ್ಳಲು ಮುಂದಾಗಿದ್ದರಂತೆ ! ಆ ಎಲ್ಲ ಶಿಲ್ಪಗಳನ್ನೂ

ಜರ್ಮನಿಗೆ ಒಯ್ದು ಪ್ರತ್ಯೇಕ ಮ್ಯೂಸಿಯಂ ಕಟ್ಟಿಸುತ್ತೇವೆಂದೂ, ಕಿರಣ್‌ರವರನ್ನೂ ಅಲ್ಲಿಗೇ ಬರಲು ಆಹ್ವಾನಿಸಿದ್ದಲ್ಲದೇ ಸಮಕಾಲೀನ ಕಲಾವಿಭಾಗದ ಮುಖ್ಯಸ್ಥನನ್ನಾಗಿ ಗೌರವಿಸುತ್ತೇವೆಂದು ಪುಸಲಾಯಿಸಿದ್ದರಂತೆ. ಆದರೆ ಬೇರೆ ಬೇರೆ ಕಾರಣಗಳಿಂದಾಗಿ ಈ ಯೋಜನೆ ಕಾರ್ಯರೂಪಕ್ಕೆ ಬಾರದ್ದರಿಂದ ಇವರು ನಮ್ಮ ದೇಶದಲ್ಲೇ ನಮ್ಮ ನಡುವೆ ಮೈಸೂರಿನ ಮೂಲೆಯಲ್ಲಿ ಉಳಿಯುವಂತಾದರು.

ಸಮಕಾಲೀನ ಹಾಗೂ ನವ್ಯ ಶಿಲ್ಪಗಳ ಬಗ್ಗೆ ಪ್ರಥಮವಾಗಿ ಕಿರಣ್‌ರವರಿಗೆ ಮನದಟ್ಟಾದದ್ದು 1974 ರಲ್ಲಿ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಶಿಲ್ಪಕಲಾ ಶಿಬಿರದಲ್ಲಿ. ಆ ನಂತರ ಬೇಲೂರಿನಲ್ಲಿ ನಡೆದ ಮತ್ತೊಂದು ಶಿಬಿರದಲ್ಲಿ. ಮೈಸೂರು ದಸರಾ ಕಲಾ ಪ್ರದರ್ಶನ ಸಮಿತಿಯ ಸದಸ್ಯರಾಗಿದ್ದಾಗ (1981–82) ಅಮೂರ್ತ ಶಿಲ್ಪಗಳ ಪ್ರಭಾವ ತಿಳಿಯಿತು. ತಮಗರಿವಿಲ್ಲದೆಯೇ ಇವರು ಬಹಳಷ್ಟು ಹೊರಜಗತ್ತಿನ ಶಿಲ್ಪಗಳ ಪ್ರಭಾವಕ್ಕೆ ಒಳಗಾಗಿದ್ದಾರೆಂದೆನಿಸುತ್ತದೆ. ಇವರ ಅನೇಕ ಶಿಲ್ಪ ಕೆತ್ತನೆಗಳಲ್ಲಿ ನಾವು ಮೆಕ್ಸಿಕೋ ದೇಶದಲ್ಲಿ 15ನೆಯ ಶತಮಾನದ ಆಸುಪಾಸಿನ ಅವಧಿಯಲ್ಲಿ ಲಭ್ಯವಾದ ಕೆಲವು ಶಿಲ್ಪಗಳ ಪ್ರಭಾವವನ್ನು ಕಾಣಬಹುದು.[4] ಆಗಿನ ಜಪೊಟೆಕ್ಸ್ (Zapotecs) ಎನ್ನುವ ರಾಜವಂಶಜರ ಕಾಲದ ಶಿಲ್ಪಗಳ ಪ್ರಸ್ತುತಿಯನ್ನು ಇಲ್ಲಿ ನೆನೆಸಿಕೊಳ್ಳಬೇಕು. "ಬರ್ನಾರ್ಡ್ ನೋ ಎಲ್" ರವರು ತಮ್ಮ 'Mexican Art' ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ: "The sculptors always catches the expression on the face, whether it is laughing or reflective, at its most vital moment. This is the secret of their intense presence which touches us beyond time and difference with an inexhaustible power". ಹೀಗೆ ಮುಖ ಲಕ್ಷಣದ ಮರ್ಮವನ್ನು ಇಲ್ಲಿ ಹೇಳಿದಂತೆ ನಾವು ಕಿರಣ್‌ರವರ ಕೆಲವು ಶಿಲ್ಪಗಳಲ್ಲಿ ಕಾಣಬಹುದಾಗಿದೆ.

20ನೆಯ ಶತಮಾನದ ಜಗತ್ತಿನ ಶ್ರೇಷ್ಠ ಶಿಲ್ಪಿ "ಹೆನ್ರಿಮೂರ್"[5]ರ ಶಿಲ್ಪಗಳ ಪ್ರಭಾವ ಕಿರಣ್‌ರವರ ಮೇಲೆ ಆಗಿದೆಯೆನ್ನುವುದನ್ನು ಚೆನ್ನಾಗಿ ಗ್ರಹಿಸಬಹುದು. ನಮ್ಮ ದೇಶದ ಹಿಂದಿನ ಪ್ರಧಾನಿಗಳೂ ಮೇಧಾವಿಗಳೂ ಆಗಿದ್ದ ದಿವಂಗತ ಪಿ.ವಿ. ನರಸಿಂಹರಾವ್‌ರವರು ಈ ಹೆನ್ರಿಮೂರ್‌ರ ಬಗ್ಗೆ ಬರೆಯುತ್ತ, "In his inimitable way and in the granduer of his vision, Henry Moore heralds through the figures the triumphant emergence of the human body as a spirited song of joy, an impassioned paean for peace". (Henry Moore, New Delhi 1987 - The British council). ಈ ಮಾತು ಪ್ರಸ್ತುತ ಕಿರಣ್ ಸುಬ್ಬಯ್ಯನವರ ಶಿಲ್ಪಗಳಿಗೂ ಅನ್ವಯವಾಗುತ್ತದೆ. ಹೆನ್ರಿ ಮೂರ್‌ರೇ ಅನೇಕ ಸಂದರ್ಭಗಳಲ್ಲಿ ತಮ್ಮ ಶಿಲ್ಪಗಳ ಬಗ್ಗೆ ಹೇಳುವಾಗ "The one great advantage of sculpture over painting is that it can be looked at from all round and if this attribute is used and fully exploited then it can give to sculpture a continual, changing, never ending surprise and interest." ಎಂದಿದ್ದಾರೆ. ತಮಗರಿವಿಲ್ಲದೆಯೇ ಕಿರಣ್‌ರವರು ಈ ತತ್ವವನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ.

ಕಠಿಣ ಮಾಧ್ಯಮಗಳನ್ನು ಸಹ ಯಥೇಚ್ಛವಾಗಿ ಬಳಸುತ್ತಿದ್ದ ಹೆನ್ರಿ ಮೂರ್ ಹೀಗೆ ಬರೆದಿದ್ದಾರೆ– "Unless you had some tussle, some collaboration and yet battle with your materials, you were being nobody. The artist must impose some of himself and his ideas on the material sympathetically but non-passively. Otherwise you are only behaving like the waves. There must be a human imprint and a human idea" (Henry Moore, New Delhi 1987. The British council)". ಈ ಮೇಲಿನ ಹೇಳಿಕೆ ಎಷ್ಟು ಸಲೀಸಾಗಿ ಕಿರಣ್‌ರವರಿಗೆ ಅನ್ವಯವಾಗುತ್ತದೆನ್ನುವುದೇ ಸೋಜಿಗ.

ಹೆನ್ರಿ ಮೂರ್‌ರ ಶಿಲ್ಪಗಳಿಗಿಂತಲೂ ಒಂದು ಹೆಜ್ಜೆ ಮುಂದಿಟ್ಟವರು ಕಿರಣ್‌ರವರು. ಹೆನ್ರಿ ಮೂರರ ಶಿಲ್ಪಗಳಲ್ಲಿ ಬಹುತೇಕ ಅಮೂರ್ತ ಪ್ರಧಾನ. ಆಕಾರ ವಿವರಣೆಗಳು ಅತ್ಯಲ್ಪ. ಆದರೆ ಕಿರಣ್‌ರವರ ಶಿಲ್ಪಗಳಲ್ಲಿ ಆಕಾರ ವಿವರಣೆಗಳನ್ನು ಕಾಣುತ್ತೇವೆ. ಸಮಕಾಲೀನ ತಂತ್ರವಿನ್ಯಾಸಗಳನ್ನು ಪೂರ್ಣ ಅಮೂರ್ತಕ್ಕೆ ಒಯ್ಯದೆ ವೀಕ್ಷಕನಿಗೆ ಅರ್ಥವಾಗಿಸುವ ಕಡೆಗೆ ಎಳೆದಿದ್ದಾರೆ. ತಮ್ಮ

ಪ್ರತೀ ಶಿಲ್ಪಗಳ ತಳದಲ್ಲಿ ಶಿರೋನಾಮೆ ಕೊರೆದು ಏಕಶಿಲೆಯ ಬಹುರೂಪಿ(ಬಹುಮುಖಿ) ಶಿಲ್ಪಗಳನ್ನು ನೋಡುಗನು ತನ್ನ ಅಂತರಾಳದಿಂದ ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ. ಇವರ ಯಾವ ಶಿಲ್ಪವೂ "ಅನಾಮಧೇಯ" ಅಲ್ಲ! ನೋಡುವವ ನೋಡಿ ಬೇಕಾದಂತೆ ಅರ್ಥಮಾಡಿಕೊಳ್ಳಲಿ–ಎನ್ನುವಷ್ಟರ ದ್ರಾಷ್ಟ್ಯ ಇವರಲ್ಲಿ ಇಲ್ಲವೇ ಇಲ್ಲ. ಎಲ್ಲವೂ ನೇರ, ನಿಖರ, ಸ್ಪಷ್ಟ.

ಕಿರಣ್‌ರವರ ಶಿಲ್ಪಗಳಲ್ಲಿ ವಿಷಯಗಳು ಅನೇಕ, ಸಾಮಾಜಿಕ ಕಳಕಳಿ, ಲಂಚಗುಳಿತನದ ಪಿಡುಗು, ಸಮಾಜದ ಒಳಿತು ಕೆಡುಕುಗಳಿಗೆ ಕಾರಣೀಭೂತವಾಗಿರುವ ಪ್ರೀತಿ, ಪ್ರೇಮ, ರತಿಕ್ರೀಡೆ, ಮಿಥುನ ಮೊದಲಾದ ಮಾನವ ಸಹಜ ಕ್ರಿಯೆಗಳು ಇತ್ಯಾದಿ. ಆರುನೂರ ಐವತ್ತಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕೆತ್ತಿರುವ ಇವರ ಯಾವುದೇ ಸಮಕಾಲೀನ ಶಿಲ್ಪಗಳಲ್ಲಿ ಪುನರಾವರ್ತನೆ ಎಂಬುದಿಲ್ಲ. ತನ್ನ ಮನದಾಳದ ನೋವು, ನಲಿವು, ತುಡಿತ, ತೃಪ್ತಿ, ಸ್ವಪ್ನಲಹರಿ, ಆಸೆ ಆಕಾಂಕ್ಷೆಗಳನ್ನೆಲ್ಲಾ ಶಿಲ್ಪಗಳ ಮಾಧ್ಯಮದ ಮುಖಾಂತರ ಹೊರಹೊಮ್ಮಿದ್ದಾರೆ.

ಇವರ ಬಹುತೇಕ ಶಿಲ್ಪಗಳಲ್ಲಿ ಸ್ತ್ರೀ ಸಂಬಂಧಿ ರೂಪಕಗಳನ್ನು, ಸಂವೇದನೆಗಳನ್ನು, ಪ್ರೇಮ ಸಲ್ಲಾಪಗಳನ್ನು ಕಾಣುತ್ತೇವೆ. ಅವರ ಮಾತಿನಲ್ಲೇ ಹೇಳುವುದಾದರೆ– "Frankly speaking, the Female Forum in the nude, from time immemorial i.e., from the stone age, has caught the fancy, imagination, liking and admiration of a vast majority of mankind, artists, sculptors and writers. The Female nude Form has influenced them to a very great extent to excel themselves in their respective creative fields."

ಇವರ ಶಿಲ್ಪಕೆತ್ತನೆಗಳ ಬಗ್ಗೆಯೇ ಬೇಕಾದಷ್ಟು ಸಂಶೋಧನೆಗಳನ್ನು ಮಾಡಬಹುದು. ಬೇರೆ ಬೇರೆ ಆಯಾಮಗಳಲ್ಲಿ ಬೇರೆ ಬೇರೆ ಡಾಕ್ಟರೇಟುಗಳನ್ನು ಪಡೆದುಕೊಳ್ಳಬಹುದಾದಷ್ಟು ವಿಷಯ ಅಡಕಗೊಂಡ ಶಿಲ್ಪಗಳಿವು. ಇಂತಹ ಕೆಲವು ಶಿಲ್ಪಗಳ ಒಂದು ವಿವರಣಾತ್ಮಕ ಅವಲೋಕನ ಹಾಗೂ ಪರಾಮರ್ಶೆ ಈ ಭಾಗದ ಉದ್ದಿಶ್ಯ.

**ಸಾಂಪ್ರದಾಯಿಕ ಶಿಲ್ಪಗಳು :**

ಮುಮ್ಮುಖವೇ ಪ್ರಧಾನವಾಗಿರುವ ಶ್ರೀರಾಮ–ಸೀತಾ–ಲಕ್ಷ್ಮಣ ಹಾಗೂ ಹನುಮಂತನನ್ನು ಒಳಗೊಂಡ ಏಕಶಿಲ್ಪದ ಪೀಠ ಮಾತ್ರ ಬೇರೆಯಾಗಿದ್ದು ಪಾರಂಪರಿಕವಾದ ಸೌಂದರ್ಯವನ್ನು ಪಡೆದುಕೊಂಡಿದೆ (ಚಿತ್ರ ಸಂಖ್ಯೆ–2)

ಸರ್ವಾಂಗ ಆಭರಣ ಭೂಷಿತೆಯಾಗಿ ನಾಲ್ಕು ಕೈಗಳನ್ನು ಹೊಂದಿ, ಎರಡೂ ಕೈಗಳಲ್ಲಿ ಸಣ್ಣ ಕೊಡವನ್ನು (ಚೆಂಬು) ಹಿಡಿದು ನೀರು ಹರಿಸುತ್ತಿರುವ "ಶ್ರೀ ಕಾವೇರಿ" ಮಾತೆಯ ಮೂರು ಶಿಲ್ಪಗಳು ಇವರ ಸಂಗ್ರಹದಲ್ಲಿವೆ. ಸಂಪೂರ್ಣ ಹೊಯ್ಸಳ ಶೈಲಿಯಲ್ಲಿ ಪೀಠವೂ ಸೇರಿದಂತೆ ಸೂಕ್ಷ್ಮ ಕುಸುರಿ ಕೆಲಸಗಳೊಡನೆ ಕೆತ್ತಿರುವ ಈ ಶಿಲ್ಪದಲ್ಲಿ ಪಾದದ ಬಳಿಯಲ್ಲಿ ಹೆಡೆಯೆತ್ತಿರುವ ಸರ್ಪಗಳು ಹಾಗೂ ಪ್ರಭಾವಳಿ ರಚನೆಯಲ್ಲಿ ಹೂಬಳ್ಳಿಗಳ ವಿನ್ಯಾಸ ಆಕರ್ಶಿಸುತ್ತವೆ. (ಚಿತ್ರ ಸಂಖ್ಯೆ–3)

ತಮ್ಮ ಶಿಲ್ಪ ಸೃಷ್ಟಿ ಪ್ರಕ್ರಿಯೆಯಲ್ಲಿ ಮೇಲೇರಿದಂತೆ ಸಹಜತೆಗೆ ಒತ್ತುಕೊಟ್ಟು ವಿಭಿನ್ನ ನಿರೂಪಣೆಯೊಡನೆ "ಶ್ರೀ ಕಾವೇರಿ" ಯ ಬೇರೊಂದು ವಿಗ್ರಹ ಕೆತ್ತಿರುತ್ತಾರೆ. ಇದರಲ್ಲಿ ಮಾತೆಗೆ ಕೇವಲ ಎರಡೇ ಕೈಗಳು. ಕೊಡ (ಚೆಂಬು) ಹಿಡಿದು ನೀರು ಹರಿಸುತ್ತಿಲ್ಲ ; ವರದಹಸ್ತ ಮತ್ತು ಅಭಯಹಸ್ತ ಶೋಭಿತಳಾಗಿ 'ಕುಂಡಿಕೆ'ಯ ನೀರಿನ ಚಿಲುಮೆಯೊಳಗಿಂದ ಉದ್ಭವವಾಗಿ ನಿಂತಿದ್ದಾಳೆ. ತಾನೇ ನೀರಾಗಿ, ನದಿಯಾಗಿ, ಹರಿದು ಕೋಟಿ ಜನರ ತೃಷೆಯನ್ನು ನೀಗಿಸುವ ಕಾವೇರಿಯ ಈ ಕಲ್ಪನೆ ಒಂದು ಅದ್ಭುತ ವಾಸ್ತವ ನಿರೂಪಣೆಯಾಗಿದೆಯೆನ್ನಬಹುದು. (ಚಿತ್ರ ಸಂಖ್ಯೆ–4)

ಆಂಜನೇಯನ ವೀರ್ಯಗುಣ ಭಕ್ತಿಭಾವ ತೋರಿಸುವ ಶಿಲ್ಪ (ಚಿತ್ರ ಸಂಖ್ಯೆ–5) ಹಾಗೂ ಗಣಪತಿಯ ಒಂದು ವಿಗ್ರಹ (ಚಿತ್ರ ಸಂಖ್ಯೆ–6) ಇವರ ಸಂಗ್ರಹದಲ್ಲಿವೆ. ಶ್ರೀ ಕೃಷ್ಣ (ಚಿತ್ರ ಸಂಖ್ಯೆ–7), ಶ್ರೀರಾಮ (ಚಿತ್ರ ಸಂಖ್ಯೆ–8), ವರಾಹಸ್ವಾಮಿ (ಚಿತ್ರ ಸಂಖ್ಯೆ–9), ಪರಶುರಾಮ (ಚಿತ್ರ ಸಂಖ್ಯೆ–10) ಹಾಗೂ ವಾಮನ ಮೂರ್ತಿ (ಚಿತ್ರ ಸಂಖ್ಯೆ–11) ಕೋರಿಕೆಯ ಮೇರೆ ಕೆತ್ತಿ ದೇವಸ್ಥಾನಗಳಿಗೆ ಪೂರೈಸಿದಂತವುಗಳಾಗಿವೆ.

ಪರಶಿವನ ಎದೆಮಟ್ಟದ ರೂಪಶಿಲ್ಪಗಳನ್ನು "ಚಿತಾಗಾರ", ನೀರಿನ ಬುಗ್ಗೆಗಳು ಇರುವ ಪಾರ್ಕ್ ಮತ್ತಿತರ ಕಡೆ ಸ್ಥಾಪಿಸಲಾಗಿವೆ (ಉದಾ: ಚಿತ್ರ ಸಂಖ್ಯೆ–12, 13).

## ಸಮಕಾಲೀನ ಏಕಮುಖ ಶಿಲ್ಪಗಳು :

ನೂರಾರು ಸಮಕಾಲೀನ ಆಧುನಿಕ ತತ್ವಾಧಾರಿತ ಶಿಲಾ ಶಿಲ್ಪಗಳನ್ನು ಇವರು ಕೆತ್ತಿರುತ್ತಾರೆ. ಒಂದು ಶಿಲೆಯಲ್ಲಿ ಒಂದೇ ವಿಷಯಾಧಾರಿತ ಶಿಲ್ಪಗಳಿವು.

ಏಳೆಂಟು ಬಗೆಯ ಸಣ್ಣಗಾತ್ರದ ಆನೆಗಳ ಶಿಲಾಶಿಲ್ಪಗಳನ್ನು ನೈಜತೆಗೆ ಒತ್ತುಕೊಟ್ಟು ಕೆತ್ತಿರುತ್ತಾರೆ. ಪ್ರಥಮ ನೋಟಕ್ಕೆ ಬೀಟೆ ಮರದಲ್ಲಿ ಕೆತ್ತಿದ್ದಾರೇನೋ ಹೇಗೋ ಎನ್ನುವಷ್ಟರ ಮಟ್ಟಿಗೆ ಪ್ರಬುದ್ಧತೆಯನ್ನು ಹೊಂದಿವೆ. ಉದಾಹರಣೆಗೆ "ಆನೆ ಮತ್ತು ಮರ" (ಚಿತ್ರ ಸಂಖ್ಯೆ–14). ಕುಸುರಿ ಕೆಲಸ ಸಮೇತ ಕೆತ್ತಿರುವ ಕಲ್ಲಿನ ತಿರುಗುವ ಪೀಠಗಳು ಅನೇಕ ಇವೆ. (ಉದಾ: ಚಿತ್ರ ಸಂಖ್ಯೆ–15) ; 'ಮೊಲ' (ಚಿತ್ರ ಸಂಖ್ಯೆ–16), "ರತಿಕ್ರೀಡಾ ಚುಂಬನ" (ಚಿತ್ರ ಸಂಖ್ಯೆ–17), ಕಲ್ಪನಾ ಚಾತುರ್ಯದೊಡನೆ ಕೆತ್ತಿರುವ "ನುಣುಚಿಕೊಳ್ಳುವವ" (Elluding) ಎನ್ನುವ ಶಿಲ್ಪ (ಚಿತ್ರ ಸಂಖ್ಯೆ–18), ದೇಹ ಸೌಂದರ್ಯ ಪ್ರತೀಕವಾಗಿರುವ "ನಿನ್ನ ಕಣ್ಣಿಗೆ ಮಾತ್ರ" (For your Eyes only) ಎನ್ನುವ ನುಣುಪಾದ ಶಿಲ್ಪ (ಚಿತ್ರ ಸಂಖ್ಯೆ–19) ಹಾಗೂ "ವ್ಯಾಮೋಹಕ್ಕೆ ಸೆಳೆಯುವ ಸ್ತ್ರೀ ಶಕ್ತಿ" (Seduction power of Women) ಎನ್ನುವ ಶೃಂಗಾರ ಪ್ರಧಾನವಾದ ನೀಳ ಏಕಶಿಲಾಶಿಲ್ಪ (ಚಿತ್ರ ಸಂಖ್ಯೆ–20) ಗಳನ್ನು ಇಲ್ಲಿ ಉದಾಹರಿಸಬಹುದು.

ಸಂಪೂರ್ಣ ಅಮೂರ್ತ ರಚನೆಗಳಾದ "ಎಚ್ಚರ ಮರೆತವಳು" (Carefree) – (ಚಿತ್ರ ಸಂಖ್ಯೆ–21); "ಖಿನ್ನ ಸುಂದರಿ" (The dejected female)– (ಚಿತ್ರ ಸಂಖ್ಯೆ–22) ; ಪ್ರೇಮಸಂಗಮ (Love Play)– (ಚಿತ್ರ ಸಂಖ್ಯೆ–23); ಹಾಗೂ "ಹೆಂಟೆ" (Hen)–(ಚಿತ್ರ ಸಂಖ್ಯೆ–24) ಮುಂತಾದವುಗಳನ್ನು ವೀಕ್ಷಿಸುವಾಗ ಹೆನ್ರಿ ಮೂರರ (Henry Moore) ಶಿಲ್ಪಗಳ ತಂತ್ರಗಾರಿಕೆಯನ್ನು ನೆನಪಿಸುತ್ತದೆ. ಆದರೂ ಸಹ ಕಿರಣ್ ರವರ ಸ್ವಂತಿಕೆಯ ಛಾಪು ಇವುಗಳಲ್ಲಿ ಪ್ರಕಟಗೊಂಡಿವೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರೂ, ನಾಡಿನ ಒಬ್ಬ ಖ್ಯಾತಶಿಲ್ಪಿಗಳೂ ಆದ ವೆಂಕಟಾಛಲಪತಿಯವರ ಕೆಲವು ಶಿಲ್ಪಗಳಿಗೂ, ಮೈಸೂರಿನ "ಕಾವಾ"ದ ಡೀನ್ ಆಗಿರುವ ಶಿಲ್ಪಿಗಳೂ ಆದ ವಿ.ಎ.ದೇಶಪಾಂಡೆ ಮತ್ತು ಬೆಂಗಳೂರಿನ ಖ್ಯಾತ ಕಲಾವಿದ ಶಿಲ್ಪಿ ಯು. ಭಾಸ್ಕರ್‌ರಾವ್‌ರವರ ಕೆಲವು ಶಿಲ್ಪಗಳಿಗೂ, ಕಿರಣ್ ಸುಬ್ಬಯ್ಯನವರ ಇಂತಹ ಅಮೂರ್ತ ಶಿಲ್ಪಗಳಿಗೂ ಸ್ವಲ್ಪ ಸಾಮರಸ್ಯ ಕಂಡುಬರುತ್ತದೆ. ಆದರೆ ಇವರ್‍ಯಾರೂ ಪರಸ್ಪರ ಪ್ರಭಾವಕ್ಕೆ ಒಳಾಗಾದವರಲ್ಲ; ಅಂತಹ ಹೇಳಿಕೊಳ್ಳುವ ಮಟ್ಟದ ಪರಿಚಯಸ್ತರೂ ಅಲ್ಲ ; ಮತ್ತು ಈ ಶಿಲ್ಪಗಳೆಲ್ಲಾ ಕಿರಣ್‌ರವರ ಪ್ರಾರಂಭಿಕ ದಿಸೆಯವುಗಳು ಅನ್ನಬಹುದು.

## ಏಕಶಿಲೆ–ದ್ವಿಮುಖ ಶಿಲ್ಪಿಗಳು (Two in One Sculptures) :

ದೊಡ್ಡ ಕನ್ನಡಿಯ ಮುಂದೆ ಸರಿಯಾಗಿ ಇಡುವ ಏರ್ಪಾಟು ಮಾಡಿದರೆ ಕಿರಣ್‌ರವರ ಇಂತಹ ಶಿಲ್ಪಗಳನ್ನು ನೋಡುವಾಗ ಮುಂಭಾಗದ ಶಿಲ್ಪ ಒಂದಾದರೆ, ಪ್ರತಿಬಿಂಬದಲ್ಲಿ ಕಾಣಿಸುವ ಹಿಂಭಾಗದ ಶಿಲ್ಪ ಮತ್ತೊಂದು. ಒಂದೇ ಶಿಲೆಯ ಎರಡು ಕಡೆಗಳಲ್ಲಿ ಬೇರೆ ಬೇರೆಯಾದ ಎರಡು ಶಿಲ್ಪಗಳು ! ಇಂತಹ ಒಟ್ಟು 76 ಶಿಲ್ಪಗಳನ್ನು (ಅಂದರೆ 152 ಬೇರೆ ಬೇರೆ ಶಿಲ್ಪಗಳಾಗುತ್ತವೆ) ಇವರು ಕೆತ್ತಿರುತ್ತಾರೆ. ಇವುಗಳಿಗೆ ಸಾದಾ ನಿದರ್ಶನ ಇವರ "ನಮಸ್ತೆ" ಮತ್ತು "ನಾಚಿಕೆ" ಎನ್ನುವ ಏಕಶಿಲಾ ಶಿಲ್ಪ (ಚಿತ್ರ ಸಂಖ್ಯೆ–25). ವಿಡಂಬನೆ (Satire) ಕಿರಣ್‌ರವರ ಬಹುತೇಕ ಶಿಲ್ಪಗಳಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಉದಾ: ಒಂದೇ ಅಮೃತ ಶಿಲೆಯಲ್ಲಿ (Marble) ಕೆತ್ತಿರುವ "ಕಾಮೋದ್ರೇಕದ ಉರಿ" (Flame of passion) ಮತ್ತು "ಕಾಮೋದ್ರೇಕದ ಫಲ" (Fruits of passion) ಎನ್ನುವ ಶಿಲ್ಪ (ಚಿತ್ರ ಸಂಖ್ಯೆ: 26, ಎ, ಬಿ). ಹೀಗೆಯೇ 'ಜಟಾಯು ಭಂಗ' ಶಿಲ್ಪದ ಹಿಂಭಾಗದಲ್ಲಿ "ಶಿವಪಾರ್ವತಿ" ಶಿಲ್ಪ. ಇಲ್ಲಿ ರಾವಣನ ಕ್ರೋಧಭರಿತ ಭಂಗಿ, ಕೆಳಗೆ ಬಿದ್ದಿರುವ ಅವನ ಕಿರೀಟ,

ಚೆಲ್ಲಾಪಿಲ್ಲಿಯಾಗಿರುವ ಇತರ ಆಕರಗಳು, ಮಾರಣಾಂತಿಕ ಹೊಡೆತ ಬಿದ್ದು ನಲುಗುತ್ತಿರುವ ಜಟಾಯು, ಬಲಾತ್ಕಾರದಿಂದ ಹೆಗಲಮೇಲೆ ಹಿಸುಕಲ್ಪಟ್ಟ ಶೋಕತಪ್ತೆ ಸೀತೆ–ಸಮಕಾಲೀನ ಉತ್ತಮ ಶಿಲ್ಪಕ್ಕೊಂದು ನಿದರ್ಶನ (ಚಿತ್ರ ಸಂಖ್ಯೆ : 27 ಎ, ಬಿ).

ಇನ್ನೊಂದು ನೀಳಶಿಲ್ಪದ ಮುಂಭಾಗದಲ್ಲಿ "ಹೆಸರಾಂತ ಸುಂದರಿ ಮತ್ತವಳ ಅಭಿಮಾನಿಗಳು" (Celebrity and her Fans) ಎನ್ನುವ ನುಣುಪಾದ ಸುಂದರ ಸ್ತ್ರೀಯ ಶಿಲ್ಪವಿದ್ದರೆ, ಹಿಂಭಾಗದಲ್ಲಿ "ಕರ್ವ ಚೌತ ಆಚರಿಸುವ ಖಾರ್ವಿ ಹೆಣ್ಣು" (A Fisher woman performing a ritual - karva chouth) ಎನ್ನುವ ಸುಂದರ ಕಲ್ಪನೆಯ ಶಿಲ್ಪವಿದೆ. (ಚಿತ್ರ ಸಂಖ್ಯೆ 28, ಎ, ಬಿ)

ಅಮೂರ್ತತೆಗೆ (Abstract) ಹತ್ತಿರದ ದ್ವಿಮುಖಿ ಶಿಲ್ಪಗಳು ಅನೇಕ ಇವೆ. "ಒಲ್ಲದವಳು" (Reluctant) ಶಿಲ್ಪ ಒಂದು ಬದಿಯಲ್ಲಾದರೆ "ವಿಶ್ವಾಮಿತ್ರ ಮೇನಕ" ಇನ್ನೊಂದು ಬದಿಯಲ್ಲಿದೆ (ಚಿತ್ರ ಸಂಖ್ಯೆ–29, ಎ, ಬಿ). ಒಂದು ಬದಿ "ಬಂಧನದಲ್ಲಿ" (In captivity) ಶಿಲ್ಪವಿದ್ದರೆ, ಮತ್ತೊಂದು ಕಡೆ "ಬೀಜಶಕ್ತಿ" (Seed power) ಶಿಲ್ಪವಿದೆ (ಚಿತ್ರ ಸಂಖ್ಯೆ 30, ಎ, ಬಿ). "ಕುಟುಂಬ" (Family) ಎನ್ನುವ ಶಿಲ್ಪದ ಹಿಂಭಾಗದಲ್ಲಿ "ತಪ್ಪಿದ ಹೊಂದಾಣಿಕೆ (Disharmony) ಎನ್ನುವ ಬೇರೊಂದು ಶಿಲ್ಪವಿದೆ (ಚಿತ್ರ ಸಂಖ್ಯೆ 31 ಎ, ಬಿ). 'ದೌರ್ಜನ್ಯ' (Atrocity) ಒಂದು ಕಡೆಯಲ್ಲಾದರೆ ಅದರ ಇನ್ನೊಂದು ಕಡೆಯಲ್ಲಿ "ಬಿದ್ದವರು" (The Fallen) ಎನ್ನುವ ಮನುಷ್ಯನನ್ನು ಪಶುವರ್ಗಕ್ಕೆ ವಿರೂಪಗೊಳಿಸುತ್ತ ವಿಡಂಬನಾತ್ಮಕವಾಗಿ ತೋರಿಸಿರುವ ಶಿಲ್ಪವಿದೆ (ಚಿತ್ರ ಸಂಖ್ಯೆ 32, ಎ, ಬಿ).

"ಒಂದು ಹೆಣ್ಣಿನ ಹಿಂಬದಿ" (Back of a women) ಎನ್ನುವ ಶಿಲ್ಪದ ಹಿಂಭಾಗದಲ್ಲಿ "ಸಲಿಂಗಕಾಮಿಗಳು" (Lesbians) ಎನ್ನುವ ಸರ್ವಾಂಗ ನುಣುಪಾಗಿರುವ ತೀಕ್ಷ್ಣ ಪರಿಣಾಮ ಕಾರಿಯಾದ ಅಮೂರ್ತ ಶಿಲ್ಪವಿದೆ. (ಚಿತ್ರ ಸಂಖ್ಯೆ–33 ಎ, ಬಿ), ಗಂಡಿನ ಭ್ರಮಾಲೋಕದ ದ್ವಿಮುಖಗಳನ್ನು ತಮ್ಮ "ಭ್ರಮೆ" (Illusion) ಎನ್ನುವ ಶಿಲ್ಪದ ಎರಡೂ ಕಡೆಗಳಲ್ಲಿ ಬೇರೆ ಬೇರೆ ಕೆತ್ತಿದ್ದಾರೆ (ಚಿತ್ರ ಸಂಖ್ಯೆ–34 ಎ, ಬಿ). ಸುಂದರ ಹೆಣ್ಣಿನ ಅರ್ಧಾಂಗ ನಿರೂಪಣೆಯ ಹಿಂದು ಮುಂದಿನ ಸರಳ ಶಿಲ್ಪಗಳು "ಚಾಪ್ಟರ್–1" (Chapter-1) ಮತ್ತು "ಚಾಪ್ಟರ್–2" (Chapter-2) (ಚಿತ್ರ ಸಂಖ್ಯೆ–35 ಎ,ಬಿ); "ಬಾಟಮ್ಸ್ ಅಫ್" (Bottoms up) ಎನ್ನುವ ಶಿಲ್ಪದ ಹಿಂಭಾಗದಲ್ಲಿ 'ಜಾಗೃತಿಯ ದೇವಾಲಯ' (Temple of Awakening) ಎನ್ನುವ ಶಿಲ್ಪವಿದೆ. (ಚಿತ್ರ ಸಂಖ್ಯೆ–36, ಎ, ಬಿ). ಮೇಲ್ನೋಟಕ್ಕೆ ವಿಕೃತ ಕಲ್ಪನೆಯೆಂದೆನ್ನಿಸಿದರೂ ಸಹ "ದೇವ ಮಾನವ" ಓಸೋ ರಜನೀಶರ ತತ್ವಾಧಾರಿತ ಶಿಲ್ಪಗಳೆನ್ನಿಸುತ್ತವೆ. ಇದಕ್ಕೆ ಪುಷ್ಟಿಕೊಡುವಂತೆಯೇ ಯೋಗನಿದ್ದೆ ಯಿಂದೆಬ್ಬಿಸುವ ಅರ್ಥದಲ್ಲಿ ಸರ್ಪದ ಕೆತ್ತನೆಯನ್ನೂ ಇಲ್ಲಿ ಬಳಸಿಕೊಂಡಿದ್ದಾರೆ. ಇದೇ ಬಗೆಯ ಇನ್ನೆರಡು ದ್ವಿಮುಖಿ ಶಿಲ್ಪಗಳಿವೆ. "ಕಾಮಕೇಳಿ ಸ್ವಪ್ನ" (Orgical Dream) ಶಿಲ್ಪದ ಹಿಂಭಾಗದಲ್ಲಿ "ಶಿವಶಕ್ತಿ" (Shiva Shakthi) (ಚಿತ್ರ ಸಂಖ್ಯೆ–37, ಎ, ಬಿ); ಮತ್ತೊಂದು "ಭ್ರಾಂತ ಸ್ವಪ್ನದಲ್ಲಿರುವ ಇಬ್ಬರು ಹೆಂಗಳೆಯರು" (Two Women Fantasize) ಶಿಲ್ಪದ ಹಿಂಭಾಗದಲ್ಲಿರುವ "ಅರಳಿದ ಸುರತ–ಲಿಂಗ" (Coitus in Bloom-Linga) ಎನ್ನುವ ಶಿಲ್ಪ (ಚಿತ್ರ ಸಂಖ್ಯೆ–38 ಎ, ಬಿ).

ಕೆತ್ತನೆಯಲ್ಲಿ ಮುಂದುವರೆದಂತೆಲ್ಲಾ ಅವರ ಶಿಲ್ಪಗಳಲ್ಲಿ ಸ್ಫುಟತೆ ಮತ್ತು ಭಾವನಾತ್ಮಕ ಚಿಂತನೆಗಳನ್ನು ಹೆಚ್ಚಾಗಿ ಕಾಣುತ್ತೇವೆ. ಅನೇಕ ಶಿಲ್ಪಗಳ ಉದಾಹರಣೆ ಕೊಡಬಹುದು. "ದುಡಿಯುವ ತಾಯಿ" (A Working Mother) ಮತ್ತದರ ಹಿಂಬದಿಯ "ಧನ್ಯತೆ" (Bliss) ಎನ್ನುವ ಶಿಲ್ಪ. ಅಲಂಕಾರಿಕ ಶಿಲ್ಪಗಳಂತೆ ಕಂಡುಬಂದರೂ ಸಹ ಸದೃಢ ಭಾವನೆಗಳನ್ನು ಹೊರಸೂಸುತ್ತವೆ. (ಚಿತ್ರ ಸಂಖ್ಯೆ–39 ಎ,ಬಿ).

"ಪಂಚಲಿಂಗೇಶ್ವರ" (Panchalingeshwara) ಶಿಲ್ಪದ ಹಿಂಬದಿಯಲ್ಲಿ "ಸರ್ವವ್ಯಾಪಿ ಶಿವ ಮತ್ತು ಪುತ್ರರು" (The Omnipresent Lord Shiva & Sons) ಇದೆ. ಟಿ. ನರಸೀಪುರದ ಪಕ್ಕದಲ್ಲಿರುವ ಪಂಚಲಿಂಗಗಳು ಬೇರೆ ಬೇರೆ ಗುಡಿಗಳಲ್ಲಿವೆ ; ಇವೆಲ್ಲದರ ದರ್ಶನ ಒಂದರಲ್ಲೇ ಆಗುವಂತೆ ಈ ಶಿಲ್ಪ ಕೆತ್ತಿರುತ್ತಾರೆ. (ಚಿತ್ರ ಸಂಖ್ಯೆ–40ಎ, ಬಿ). "ಕೃತ್ರಿಮ ಮುಖವಾಡ" (Put on Facade) ಎನ್ನುವ ಮಾರ್ಮಿಕ ಕೆತ್ತನೆಯ ಹಿಂಭಾಗದಲ್ಲಿ "ಸಮಾಧಾನಪಡಿಸಿ ಕೊಳ್ಳುವವರು" (Consoling each other) ಎನ್ನುವ ಶಿಲ್ಪವಿದೆ (ಚಿತ್ರ ಸಂಖ್ಯೆ–41 ಎ, ಬಿ).

ಮಾನವ ಪಾದವನ್ನೇ ಆಧಾರವಾಗಿಟ್ಟುಕೊಂಡು ಕೆತ್ತಿರುವ ದ್ವಿಮುಖ ಶಿಲ್ಪದ ಒಂದು ಬದಿ "ಮೋಹ ಚಪಲತೆ ನಿನ್ನನ್ನು ಎಳೆಯಬಹುದು–ತಪ್ಪಿಸಿಕೊಂಡು ಸರಿ ಹೆಜ್ಜೆ ಹಾಕು" (Temptation may pull you-avoid them and take the right step Forward) ಇದ್ದರೆ ಇನ್ನೊಂದು ಬದಿ "ಅಡಚಣೆಗಳೇ? ಸರಿಯಾದ ಪಾದ ಇಟ್ಟು ಮುನ್ನಡೆ" (Obstacles ? Put your Best Foot Forward and Carry on) ಶಿಲ್ಪ ಕೆತ್ತನೆಯಿದೆ. ಸಾಮಾಜಿಕ ಕಳಕಳಿಯ ಮಾನವನ ಮುನ್ನಡೆಗೆ ಪ್ರೇರಕವಾದ ದೀರ್ಘ ವಿವರಣೆಯ ಈ ಶಿಲ್ಪ ಸರಳ ಮತ್ತು ಅರ್ಥಗರ್ಭಿತವಾಗಿದೆ (ಚಿತ್ರ ಸಂಖ್ಯೆ–42 ಎ, ಬಿ). ಸಹಜ ಕೆತ್ತನೆಯ "ಗುಡಿಯ ಪೂಜಾರಿ" (Temple Priest) ಶಿಲ್ಪದ ಹಿಂಭಾಗದಲ್ಲಿ "ಹಳ್ಳಿಯ ಯಜಮಾನ" (Village Headman) ಶಿಲ್ಪ ಕೆತ್ತನೆಯಿದೆ (ಚಿತ್ರ ಸಂಖ್ಯೆ–43 ಎ, ಬಿ). ನಮ್ಮ ಸಮಾಜದ ಒಂದು ಅನಿವಾರ್ಯ ಪಿಡುಗಿನ ಸಂಕೇತವಾಗಿ "ಫ್ಯಾಷನ್ ಮಾಡೆಲ್" (Fashion Model), ಮತ್ತದರ ಹಿಂಭಾಗದ "ಪಾರ್ಟಿ ಮುಗಿದ ಮೇಲೂ ಅಪೇಕ್ಷಿಸುತ್ತ ಉಳಿದ ಅತಿಥಿಗಳು" (Even after the party is over guests still lingering on........) ಶಿಲ್ಪಗಳಿವೆ (ಚಿತ್ರ ಸಂಖ್ಯೆ–44 ಎ, ಬಿ). ಈ ದ್ವಿಮುಖ ಶಿಲ್ಪಗಳು ಸುಂದರ ಹೆಣ್ಣಿನ ಶೋಷಣೆಯ ಪ್ರತೀಕವಾಗಿ ಕೆತ್ತಲ್ಪಟ್ಟಿವೆ.

ಇನ್ನೊಂದು ಶಿಲ್ಪದ ಮುಂದುಗಡೆ, "ಧೀರ ಹಾಗೂ ಸಾಹಸಿಗನನ್ನು ಒಲಿವ ಅದೃಷ್ಟ ಕನ್ಯೆ" (Lady Luck Favours the Bold and Adventurous) ಎನ್ನುವ ಕೆತ್ತನೆಯಿದ್ದು, ಹಿಂದುಗಡೆ "ವಾತ್ಸ್ಯಾಯನ ತನ್ನ ಅನ್ವೇಷಣೆಯಲ್ಲಿ ತಲ್ಲೀನ" (Vatsyayana immersed in Research) ಎನ್ನುವ ವಿವರಣಾತ್ಮಕ ಕೆತ್ತನೆಯನ್ನು ಕಾಣಬಹುದು (ಚಿತ್ರ ಸಂಖ್ಯೆ–45 ಎ, ಬಿ).

"ಸಂತಸದ ಹೊನಲು" (Spirit of Joy) ಎನ್ನುವ ಶಿಲ್ಪದಲ್ಲಿ ತಾಯಿ ತನ್ನ ಮಗಳನ್ನು ತಬ್ಬಿ ಹಿಡಿದು ಸುಖಪಡುವ ಪರಮಾನಂದ ಭಾವವಿದ್ದರೆ ಅದರ ಹಿಂಬದಿಯಲ್ಲಿ "ಯೋನಿ ಪೂಜಾ" (Yoni Pooja) ಎನ್ನುವ ಮಾರ್ಮಿಕ ಸತ್ಯಾನ್ವೇಷಣೆಯ ಶಿಲ್ಪವಿದೆ (ಚಿತ್ರ ಸಂಖ್ಯೆ–46 ಎ. ಬಿ).

### ಏಕಶಿಲೆ–ತ್ರಿಮುಖಿ ಶಿಲ್ಪಗಳು (Three in one sculptures) :

ಒಂದೇ ಶಿಲೆಯ ಮೂರು ದಿಕ್ಕುಗಳಲ್ಲಿಯೂ ಮೂರು ಬೇರೆ ಬೇರೆಯ ಶಿಲ್ಪಗಳ ಕೆತ್ತನೆಗಳನ್ನು ಸುಮಾರು 47 ರಷ್ಟು ಮಾಡಿದ್ದಾರೆ ; ಅಂದರೆ ಇದರಲ್ಲಿ ಒಟ್ಟು 141 ವಿಭಿನ್ನ ಕೆತ್ತನೆಯ ಶಿಲ್ಪಗಳನ್ನು ಕಾಣಬಹುದು.

ಒಂದು ಕಲ್ಲಿನ ಬಲಗಡೆಯಲ್ಲಿ "ದುಃಖಾರ್ತ" (Grief) ಎನ್ನುವ ಶಿಲ್ಪದ ಕೆತ್ತನೆಯಿದ್ದರೆ, ಎಡಗಡೆಯಲ್ಲಿ "ಸ್ತ್ರೀಶಕ್ತಿ" (Sthree Shakthi) ಎನ್ನುವ ಕೆತ್ತನೆಯಿದೆ. ಮುಂಭಾಗದಿಂದ ನೋಡಿದರೆ "ಬಳಲಿದವ" (Sulky) ಎನ್ನುವ ಬೇರೆಯೇ ಶಿಲ್ಪಕೆತ್ತನೆಯಿದೆ. ಸಮಕಾಲೀನ ತತ್ವಾಧಾರಿತ ಶಿಲ್ಪಗಳಿವು (ಚಿತ್ರ ಸಂಖ್ಯೆ–47 ಎ, ಬಿ, ಸಿ).

ಸಾಮಾಜಿಕ ಪ್ರಭಾವಗಳ ಪ್ರತಿಬಿಂಬದಂತಿರುವ ಒಂದು ತ್ರಿಮುಖಿ ಶಿಲ್ಪದ ಮುಂಭಾಗದಲ್ಲಿ "ಭ್ರಷ್ಟ ಸರ್ಕಾರಿ ನೌಕರನಿಗೆ.......... ನಿಮ್ಮ ಜೇಬಿನ ಮೇಲೆನೇ ಕಣ್ಣು !" (A corrupt govt. official....... eyes only your pockets) ಎನ್ನುವ ವಿನೂತನ ಕೆತ್ತನೆಯಿದೆ. ಇದರ ಒಂದು ಬದಿಯಲ್ಲಿ ಬೇರೆ ತತ್ವ ಪ್ರಸಾರದ "ವನ್ಯಜೀವಿ ಪ್ರೀತಿಸಿ, ಉಳಿಸಿ !" (Save and Love wild life) ಎನ್ನುವ ಕೆತ್ತನೆಯಿದ್ದು ಇನ್ನೊಂದು ಬದಿಯಲ್ಲಿ "ಶಿಶ್ನ–ಯೋಗರಹಸ್ಯ ಶಕ್ತಿಕೇಂದ್ರ" (Penis....... a mystical power house) ಎನ್ನುವ ವಿಭಿನ್ನ ಕೆತ್ತನೆಯಿದೆ (ಚಿತ್ರ ಸಂಖ್ಯೆ–48 ಎ,ಬಿ,ಸಿ). ಕೊನೆಯ ಶಿಲ್ಪದ ಸೇರ್ಪಡೆಯ ಔಚಿತ್ಯವೇನೆಂದು ಪ್ರಶ್ನಿಸಿದಾಗ, ಏಕ ಶಿಲೆಯಲ್ಲಿ ಸಂಪೂರ್ಣ ವಿಭಿನ್ನ ಮಾದರಿಗಳ ಶಿಲ್ಪಗಳ ಸೃಷ್ಟಿಯನ್ನು ನೋಡಿರೆಂದು ಅವರೇ ಹೇಳುತ್ತಾರೆ.

ಬಿರುಗಾಳಿ (Storm) ಒಂದು ಬದಿಯಲ್ಲಾದರೆ, "ಕ್ಷೋಭೆ" (Tempest) ಮತ್ತೊಂದು ಬದಿಯಲ್ಲಿದ್ದು, "ವಿಪ್ಲವ ಮತ್ತದರ ನಂತರ" (Deluge and After) ಎನ್ನುವ ಶಿಲ್ಪ ಇನ್ನೊಂದು ಬದಿಯಲ್ಲಿದೆ. ಪ್ರಸ್ತುತ ಮಾನವನ ಪ್ರಕ್ಷುಬ್ಧ ವಾತಾವರಣವನ್ನು ತೋರಿಸುವ ಈ ನವ್ಯ ಶಿಲ್ಪಗಳು ತುಂಬ ಪ್ರಭಾವ ಬೀರುತ್ತವೆ. (ಚಿತ್ರ ಸಂಖ್ಯೆ–49 ಎ, ಬಿ, ಸಿ).

ಸುಮಾರು 4½ ಅಡಿ ಎತ್ತರದ ನೀಳ ಶಿಲ್ಪತ್ರಯದ ಒಂದು ಕಡೆಯಲ್ಲಿ "ಸಂಯೋಗ" (The Union) ಕೆತ್ತನೆಯಿದ್ದರೆ, ಎರಡನೆಯ ಕಡೆಯಲ್ಲಿ "ಗರ್ಭಾಂಕುರ" (Conception) ಎನ್ನುವ ಕೆತ್ತನೆಯಿದ್ದು, ಮೂರನೆಯ ಕಡೆಯಲ್ಲಿ "ಪರಿಣಾಮ" (The Outcome) ಎನ್ನುವ ಶಿಲ್ಪವಿದ್ದು, ಸ್ತ್ರೀಪುರುಷ ಸಮಾಗಮದ ವಿಸ್ತೃತ ರೂಪ ವಿವರಣೆಯಂತಿದೆ (ಚಿತ್ರ ಸಂಖ್ಯೆ–50 ಎ,ಬಿ,ಸಿ).

ಒಂದು ಬದಿಯಲ್ಲಿ "ರಾಜಕುವರ–ರಾಜಕುವರಿ" ಚುಂಬನ ಪ್ರಕ್ರಿಯೆಯಲ್ಲಿದ್ದರೆ, ಇನ್ನೊಂದು ಬದಿಯಲ್ಲಿ "ಅಡಗಿದ ಉದ್ದೀಪನಕಾರ" (A Hidden Motivator) ತನ್ನ ಒಳಸಂಚು ರೂಪಿಸುತ್ತಿದ್ದು, ಮತ್ತೊಂದು ಬದಿಯಲ್ಲಿ "ಆತನ ಮಡಿಲಲ್ಲಿ" (On his lap) ಸುಖದಲ್ಲಿರುವ ಸರಳ ಕೆತ್ತನೆಯಿದೆ (ಚಿತ್ರ ಸಂಖ್ಯೆ–51 ಎ, ಬಿ, ಸಿ)

ಇನ್ನೊಂದು ತ್ರಿಮುಖಿ ಶಿಲ್ಪದಲ್ಲಿ ಎದಿರು "ಅನುಗ್ರಹಕ್ಕೆ ಕಾತರಿಸುವವನು" (Seeking Favours) ಶಿಲ್ಪವಿದ್ದರೆ, ಒಂದು ಬದಿಯಲ್ಲಿ "ಐಶ್ವರ್ಯ ಹೀನನಾಗಿ ಬೇಡುವ ಸ್ಥಿತಿ" (The Fall From Riches) ಶಿಲ್ಪವಿದ್ದು, ಮತ್ತೊಂದು ಬದಿಯಲ್ಲಿ "ಅತ್ಯಮೂಲ್ಯ ಆಸ್ತಿ" (Precious possession) ಎನ್ನುವ ತಾಯಿ ಕರುಳಿನ ಮಮತೆಯ ಶಿಲ್ಪವಿದೆ (ಚಿತ್ರ ಸಂಖ್ಯೆ–52 ಎ, ಬಿ, ಸಿ). ಹೀಗೆಯೇ "ಬುಡಕಟ್ಟು ಮಹಿಳೆ" (Tribal Women) ಶಿಲಾಕೃತಿ ಒಂದು ಕಡೆಯಲ್ಲಾದರೆ, "ಟೀ ಎಲೆ ಕುಯ್ಯುವವಳು" (Tea Plucker) ಇನ್ನೊಂದು ಕಡೆಯಲ್ಲಿದ್ದು, ನಡುವೆ "ಪ್ರಶ್ನಾರ್ಥ–?". ನಮ್ಮ ಊಹೆಗೆ ಬಿಟ್ಟ ಅಪರೂಪದ ಕೆತ್ತನೆ ಇದೊಂದೆ (ಚಿತ್ರ ಸಂಖ್ಯೆ–53 ಎ, ಬಿ, ಸಿ). ನಮ್ಮ ಸಮಾಜದ ಸ್ತ್ರೀ ಸಂಕುಲದ ನೋವಿನ ಕಥೆಯನ್ನು "ಬಲಾತ್ಕರಿಸಲ್ಪಟ್ಟವರು" (Rape victims) ಎನ್ನುವುದರಲ್ಲಿ ಕೆತ್ತಿ ತೋರ್ಪಡಿಸಿದರೆ, ಇದರ ಒಂದು ಬದಿಯಲ್ಲಿ ಸ್ತ್ರೀ ಶೋಷಣೆಯ "ಪ್ರದರ್ಶಿತಳು"(Exhibitionist) ಶಿಲ್ಪವನ್ನು ಕೆತ್ತಿ, ಇನ್ನೊಂದು ಬದಿಯಲ್ಲಿ "ದೇವದಾಸಿಯರು" (Devadasis) ಎನ್ನುವ ಸ್ವವಿವರಣೆಯ ಕೆತ್ತನೆಯನ್ನು ಮಾಡಿದ್ದಾರೆ (ಚಿತ್ರ ಸಂಖ್ಯೆ–54 ಎ,ಬಿ,ಸಿ).

ಮುಂದುವರೆದಂತೆ, "ಒಬ್ಬ ಬುಡಕಟ್ಟು ಸುಂದರಿ" (A Tribal Girl) ಶಿಲ್ಪದ ಒಂದು ಕಡೆಯಲ್ಲಿ "ರಾತ್ರಿ ಎದಿರು ನೋಡುವವಳು" (Waiting for Nighfall) ಎನ್ನುವ ಕೆತ್ತನೆಯಿದ್ದು, ಮತ್ತೊಂದು ಕಡೆಯಲ್ಲಿ ಬೆನ್ನ ಹಿಂಬದಿ ಕೈಯೊಂದರ "ದ್ವಿಮುಖ ಒತ್ತಾಸೆ" (Double Backing) ಎನ್ನುವ ನವ್ಯ ತಂತ್ರದ ಕೆತ್ತನೆಯಿದೆ. ಉತ್ತಮ ಸಂಯೋಜನೆಯನ್ನು ಇಲ್ಲಿ ಕಾಣಬಹುದಾಗಿದೆ. (ಚಿತ್ರ ಸಂಖ್ಯೆ–55 ಎ, ಬಿ, ಸಿ)

"ಪ್ರೇಮದ ಸುಳಿಯಲ್ಲಿ" (In the Whirlpool of Love) ಶಿಲ್ಪದ ಒಂದು ಬದಿಗೆ "ನಿಷ್ಕಾಮ ಪ್ರೇಮ" (Platonic love) ಶಿಲ್ಪವಿದ್ದು, ಮತ್ತೊಂದು ಬದಿಯಲ್ಲಿ "ಮೂವರು ಕನ್ಯಾಮಣಿಗಳು" (Three Girls-Moomoodia) ಎನ್ನುವ ಶಿಲ್ಪ ಕೆತ್ತನೆಯಿದ್ದು, ಅಂತರರಾಷ್ಟ್ರೀಯ ಪ್ರೇಮ ಶಿಲ್ಪಿ "ರೋಡಿನ್"[6] (Rodin)ನ ನುಣುಪು ವೈಯಾರದ ಶಿಲ್ಪಗಳನ್ನು ನೋಡಿದಂತಹ ಅನುಭವವಾಗುತ್ತದೆ (ಚಿತ್ರ ಸಂಖ್ಯೆ–56 ಎ, ಬಿ, ಸಿ).

## ಏಕಶಿಲೆ–ಚತುರ್ಮುಖಿ ಶಿಲ್ಪಗಳು (Four in one sculptures) :

ಶಿಲ್ಪಕಲಾ ಅನ್ವೇಷಣೆಯಲ್ಲಿ ನಾಗಾಲೋಟದಿಂದ ಮುಂದುವರೆದಂತೆಲ್ಲಾ ಕಿರಣ್‌ರವರು ತಮ್ಮ ಖಾಯಂ ಗುರುತುಗಳನ್ನು ಸ್ಪಷ್ಟವಾಗಿ ಮೂಡಿಸುತ್ತ ಬಂದಿದ್ದಾರೆ. ಇದರ ಪ್ರತಿಫಲವೇ ಅತ್ಯಧಿಕ ಸಂಖ್ಯೆಯಲ್ಲಿ ಕೆತ್ತಿರುವ ಏಕ ಶಿಲೆ–ಚರ್ತುಮುಖಿ ಶಿಲ್ಪಗಳು ! ಬಹಳಷ್ಟು, ಅಂದರೆ ಸುಮಾರು ಎಂಬತ್ತಮೂರು(83) ಇಂತಹ ಶಿಲ್ಪಗಳನ್ನು ಸೃಷ್ಟಿಸಿರುತ್ತಾರೆ. ಒಂದು ಶಿಲೆಯಲ್ಲಿ ನಾಲ್ಕು ಶಿಲ್ಪಗಳಂತೆ ಒಟ್ಟು 332 ಶಿಲ್ಪಗಳನ್ನಿಲ್ಲಿ ಕೆತ್ತಿದ್ದಾರೆ ! ಇಂತಹ ಕೆಲವು ಶಿಲ್ಪಗಳ ಮಾಹಿತಿ–ವಿಶ್ಲೇಷಣೆ ಕೊಟ್ಟಾಗಲೇ ಅವುಗಳ ನೈಜ ಮಹತ್ವ ಗೊತ್ತಾಗುವುದು. ಸಮಕಾಲೀನ ಅಮೂರ್ತತೆಯಿಂದ (Contemporary Abstractism), ಆಧುನಿಕ ಮೂರ್ತತೆಯೆಡೆಗೆ (Modern Figuratism) ಸಾಗಿಬರುವುದೇ ಈ ಶಿಲ್ಪಗುಚ್ಛಗಳಲ್ಲಿ ನಾವು ಕಾಣುವ ವಿಶೇಷ !.

“ಅತಿರೇಕದ ಹಗಲುಗನಸು” (Fantasy) ಶಿಲ್ಪ ಎದಿರುಗಡೆಯಾದರೆ, “ಸ್ವಚ್ಛಂದ ಕಾಮಕೇಳಿ” (Orgy) ಹಿಂದುಗಡೆ; ಒಂದು ಬದಿಯಲ್ಲಿ “ಆಟದ ಸಮಯ” (Play Time) ಶಿಲ್ಪವಿದ್ದರೆ, ನಾಲ್ಕನೆಯ ಕಡೆ “ಚಿತ್ರನಟಿ” (Film Star). ಇಲ್ಲಿ ಎಲ್ಲವೂ ರತಿಮನ್ಮಥರ ಆರಾಧನೋತ್ಸವ (ಚಿತ್ರ ಸಂಖ್ಯೆ–57 ಎ, ಬಿ, ಸಿ, ಡಿ).

“ಅರ್ಪಣೆ” (An offering) ಶಿಲ್ಪದ ಹಿಂಭಾಗದಲ್ಲಿ “ಪ್ರಾರ್ಥನಾಕಾರರು” (Prayers) ಶಿಲ್ಪವಿದೆ. ಇವುಗಳ ನಡುವೆ ಒಂದು ಕಡೆ “ದೈವ ಬೆಂಬಲ” (Devine Backing) ಶಿಲ್ಪವಿದ್ದರೆ, ಇನ್ನೊಂದು ಕಡೆ “ಮಾಡಿದ ತಪ್ಪಿನ ಪರಿತಾಪ” (Repentance) ಎನ್ನುವ ಶಿಲ್ಪವಿದೆ. ಕಲ್ಲಿನ ಸಹಜ ಬಣ್ಣವನ್ನು ಹಾಗೆಯೇ ಬಳಸಿಕೊಂಡಿದ್ದು, ಈ ಶಿಲ್ಪಗಳು ನಮ್ಮ ದಿನನಿತ್ಯದ ಧಾರ್ಮಿಕ ಕಾಯಕದ ಪ್ರತಿರೂಪದಂತಿದೆ (ಚಿತ್ರ ಸಂಖ್ಯೆ–58 ಎ,ಬಿ,ಸಿ,ಡಿ).

“ಕಾರ್ಯಮಗ್ನ ಸ್ತ್ರೀತಜ್ಞ” (A busy gynaecologist) ಒಂದು ಕಡೆಯಲ್ಲಿನ ಕೆತ್ತನೆಯಾದರೆ ಬಾಕಿ ಮೂರು ದಿಕ್ಕುಗಳಲ್ಲಿ “ಪಕ್ಷಿ ಸಂಕುಲ” (Birds), “ಲಜ್ಜಿತ–ಕನ್ಯೆ” (A coy girl) ಹಾಗೂ “ಅಂಗಪ್ರವೀಣ” (A gymnast) ಎನ್ನುವ ಶಿಲ್ಪ ಕೆತ್ತನೆಗಳಿವೆ. ಈ ಚತುರ್ಮುಖಿ ಶಿಲ್ಪ, ಮೂರ್ತ–ಅಮೂರ್ತನೆಯ ನಡುವೆ ನಿಂತಂತೆ ಭಾಸವಾಗುತ್ತದೆ. ಕಲ್ಲಿನಲ್ಲಿ ರಂಧ್ರ ಕೊರೆದು ಹೊಸ ತಂತ್ರಗಾರಿಕೆಯನ್ನು ಪ್ರಯೋಗಿಸಿದ್ದಾರೆ. (ಚಿತ್ರ ಸಂಖ್ಯೆ–59 ಎ,ಬಿ,ಸಿ,ಡಿ)

“ವಾಯುಪುತ್ರ” ನಿರ್ವಿಕಾರಭಾವದ ಬ್ರಹ್ಮಚಾರಿಯ ಶಿಲ್ಪವಾದರೆ, ಹಿಂಭಾಗದಲ್ಲಿ “ಮಿಸ್ ಇಂಡಿಯಾ” ಎನ್ನುವ ಧೀಮಂತ ಧಿಮಾಕಿನ ಸುಂದರಿಯ ಕೆತ್ತನೆ ಇದೆ. ನಡುವೆ ಒಂದು ಬದಿಯಲ್ಲಿ “ಪ್ರೇಮಿಗಳ ಜೋಡಿ” (A loving couple) ಶಿಲ್ಪವಿದ್ದರೆ, ಇನ್ನೊಂದು ಬದಿಯಲ್ಲಿ “ಮೇಲಿನವರ ಒತ್ತಡ ಭೀತಿ” (Pressure from higher up) ಎನ್ನುವ ಆಧುನಿಕ ಶಿಲ್ಪಗಳು ಮೂಡಿ ಬಂದಿವೆ. (ಚಿತ್ರ ಸಂಖ್ಯೆ–60 ಎ,ಬಿ,ಸಿ,ಡಿ).

“ತಪ್ಪಿಗೆ ಪರಿತಾಪ” (Remorseful) ಒಂದು ದಿಕ್ಕಿನ ಶಿಲ್ಪ ಕೆತ್ತನೆಯಾದರೆ, ಉಳಿದ ಮೂರು ದಿಕ್ಕುಗಳಲ್ಲಿ “ಮಗಳಿಗೆ ಮಗುಪಾಲನೆ ಬಗ್ಗೆ ಹೇಳಿಕೊಡುವವಳು” (Giving tips to daugher on Childcare), “ಅವಳ ಗುರುವಿನ ಸೇವೆಯಲ್ಲಿ” (At her Guru’s service) ಹಾಗೂ “ಇಟ್ಟುಕೊಂಡವಳು ತಲೆ ಮೇಲೆ ಏರಿದಾಗ” (Poor chap ! His keep sat on his head) ಎನ್ನುವ ವಿಮರ್ಶಾತ್ಮಕ ವಿಡಂಬನೆಯುಕ್ತ, ಅಮೂರ್ತ ಶಿಲ್ಪಗಳಿವೆ. (ಚಿತ್ರ ಸಂಖ್ಯೆ–61 ಎ,ಬಿ,ಸಿ,ಡಿ).

ಮೂರ್ತ–ಅಮೂರ್ತಗಳ ನಡುವಿನ ಇನ್ನೊಂದು ವಿಶಿಷ್ಟ ಶಿಲ್ಪದಲ್ಲಿ ಒಂದು ದಿಕ್ಕಿನಲ್ಲಿ “ಎಲ್ಲರಿಂದಲೂ ಅತಿಯಾಗಿ ಮುದ್ದಿಸಿಕೊಳ್ಳುವುದು” (Pampered by everyone) ಎನ್ನುವಂತ ಕೆತ್ತನೆ ಕಂಡರೆ, ಇದರ ಹಿಂಭಾಗದಲ್ಲಿ “ಸುಖ ಸಂಸಾರ ಸಂಯೋಗ” (Family togetherness) ಎನ್ನುವ ಕೆತ್ತನೆ ಕಾಣಿಸುತ್ತದೆ. ಇವೆರಡರ ನಡುವೆ, ಒಂದು ಬದಿ “ಮೇಲಕ್ಕೇರಲು ಜನರನ್ನು ಬಳಸಿಕೊಳ್ಳೋದು” (Using people to climb to the Top) ಎನ್ನುವ ಕೆತ್ತನೆ ಇದ್ದು, ಮತ್ತೊಂದು ಬದಿ “ಬೀಜದ ಹೋರಿಯ ವೀರ್ಯದಾಟ” (Exploits of a stud-Bull) ಕೆತ್ತನೆಯಿದೆ. ಸುಮಾರು 6 ಅಡಿ ಎತ್ತರದ ಈ ಶಿಲ್ಪ ಒಂದು ಉತ್ತಮ ಕಲಾಸಂಯೋಜನೆ (ಚಿತ್ರ ಸಂಖ್ಯೆ–62 ಎ,ಬಿ,ಸಿ,ಡಿ).

ವಿಡಂಬನೆಯ ಶಿಲ್ಪಗಳಾದ “ಮುಠಾಳನಿಗೂ ಹೆಂಡತಿ ಸಿಗುತ್ತಾಳೆ” (Even a Buffoon gets a Wife) ಕೆತ್ತನೆಯ ಹಿಂಭಾಗದಲ್ಲಿ “ಪ್ರೀತಿಯ ಮಗು” (A loving child) ಕೆತ್ತನೆ ಇದ್ದು, ನಡುವೆ ಒಂದು ಕಡೆ “ಒಬ್ಬ ವನ್ಯಜೀವಿ ಪಾಲಕ” (A

wild life warden) ಕೆತ್ತನಾ ಶಿಲ್ಪ ಹಾಗೂ ಮತ್ತೊಂದು ಕಡೆ "ಸಾಂತ್ವನ ಬಯಸುವ ಮೃಗೀಯ ಗಂಡನ ಹೆಂಡತಿ" (Wife of an Animalistic husband seeks solace.....) ಎನ್ನುವ ಕೆತ್ತನೆಗಳಿವೆ; ಸ್ವಂತಿಕೆಯ ಪ್ರಭಾವ ಬಹಳಷ್ಟಿದೆ ! (ಚಿತ್ರ ಸಂಖ್ಯೆ–63 ಎ,ಬಿ,ಸಿ,ಡಿ).

ಗಟ್ಟಿ ಶಿಲೆಯಲ್ಲಿ ಅದರ ಗುಣಕ್ಕನುಸಾರವಾಗಿ ಕೆತ್ತಿರುವ "ಆರಾಧಿಸುವ ಹೆಂಡತಿ–ಮಗಳು" (Adored by wife and daughter) ಶಿಲ್ಪ ಎದಿರಾದರೆ "ಮಗಳನ್ನು ಮಮತೆಯಿಂದ ಸಂತೈಸುವ ತಾಯಿ" (With love a mother comforts daughter) ಹಿಂಭಾಗದಲ್ಲಿದ್ದು, ಇವುಗಳ ನಡುವೆ ಒಂದು ಬದಿ "ತಲೆ ಹರಟೆ ಸಮಾಜ ಘಾತುಕರು" (Devils of society - The Gossip mongers) ಇದ್ದು ಮತ್ತೊಂದು ಬದಿ "ಹಿರಿಯರ ಕಣ್ತಪ್ಪಿಸಿ ಸರಸ" (Behind the back of elders) ಶಿಲ್ಪವಿದೆ. ಮೂರ್ತ–ಅಮೂರ್ತಗಳ ನಡುವಿನ ಸಮ್ಮಿಳನದಂತ ಕಲಾಕೃತಿ ಇದು (ಚಿತ್ರ ಸಂಖ್ಯೆ–64 ಎ,ಬಿ,ಸಿ,ಡಿ).

"ಆಕೆಯ ಅಮ್ಮನೊಡನೆ" (with her Momma) ಕೆತ್ತನೆಯ ಹಿಂಭಾಗದಲ್ಲಿ "ಆಲಿಂಗನ" (The Embrace) ಕೆತ್ತನೆಯಿದ್ದು, ಒಂದು ಬದಿಗೆ "ಲಜ್ಜಿತ ಮದುಮಗಳು" (Bashful Bride) ಕೆತ್ತನೆ ಹಾಗೂ ಇನ್ನೊಂದು ಬದಿಗೆ "ಅವನ ಕಾಟವನ್ನು ತಡೆಯುವವಳು" (Resisting His Advances) ಕೆತ್ತನೆಗಳಿವೆ. ಇವು ಸರಳ ಕೆತ್ತನೆಗಳು (ಚಿತ್ರ ಸಂಖ್ಯೆ–65 ಎ,ಬಿ,ಸಿ,ಡಿ).

"ಮನೋವಿಕಾರಿ" (A Sycophant) ಶಿಲ್ಪ ಕೆತ್ತನೆಯ ಹಿಂಬದಿಯಲ್ಲಿ "ಕರೆವೆಣ್ಣುಗಳು" (Call Girls) ಕೆತ್ತನೆಯಿದ್ದರೆ, ನಡುವೆ ಒಂದು ಬದಿ "ನೆಚ್ಚಿನ ಹುಡುಗಿಯೊಂದಿಗೆ" (With Girl Friday) ಹಾಗೂ ಮತ್ತೊಂದು ಬದಿ "ರೂಪದರ್ಶಿ ಮತ್ತವಳ ಮೆಚ್ಚುಗ" (A Model and Her Fan) ಕೆತ್ತನೆಯಿದೆ. ಸಭ್ಯತೆಯ ಎಲ್ಲೆ ಮೀರದಂತೆ ಚಾಕಚಕ್ಯತೆಯಿಂದ ಕೆತ್ತಿರುವ ಆಧುನಿಕ ಶಿಲ್ಪಗಳಿವು (ಚಿತ್ರ ಸಂಖ್ಯೆ–66 ಎ,ಬಿ,ಸಿ,ಡಿ).

"ಒಬ್ಬಳು ತಾಯಿಯ ಐಶ್ವರ್ಯ" (A Mother's Wealth) ಎನ್ನುವ ಶೀರ್ಷಿಕೆಯ ಶಿಲ್ಪದ ಹಿಂಭಾಗದಲ್ಲಿ "ಹಗೆತನವೇ? ಚಿಂತಿಸಲೇಬೇಕಾದ ಗಳಿಗೆ" (Enmity? It's time to ponder) ಎನ್ನುವ ಕೆತ್ತನೆಯಿದೆ. ನಡುವೆ ಒಂದು ಕಡೆ ವಿಕೃತ ಕಾಮನೆಯ "ಏಯ್? ಏನು ಬೇಯಿಸುತ್ತಿದ್ದೀಯಾ?" (Hey ! what's cooking ? ) ಶಿಲ್ಪವಿದ್ದರೆ, ಇನ್ನೊಂದು ಕಡೆ "ದುಷ್ಟ ಮೋಸಗಾರರಿಂದ ಸಂಸಾರ ರಕ್ಷಣೆ" (Protecting the Family from the Cunning and the Bullish) ಎನ್ನುವ ಶಿಲ್ಪವನ್ನು ಕಾಣಬಹುದು. ಸಾಮಾಜಿಕ ಕಳಕಳಿಯ ಆಧುನಿಕ ಶಿಲ್ಪಗಳಿವು. (ಚಿತ್ರ ಸಂಖ್ಯೆ–67 ಎ, ಬಿ, ಸಿ, ಡಿ).

"ಪ್ರೇಮಿಗಳು" (Lovers) ಒಂದು ದಿಕ್ಕಿನದ್ದಾದರೆ ಬಾಕಿ ಮೂರು ದಿಕ್ಕುಗಳಲ್ಲಿ "ಪ್ರಾಯಶ್ಚಿತ" (Penance) ; "ತಂದೆ–ಮಗ" (Father and son) ಮತ್ತು "ಪೋಸ್–69" (Pose-69) ಶಿಲ್ಪಗಳಿವೆ. ಇಲ್ಲಿ ಬಳಸಿಕೊಂಡ ವಿಷಯ ನಿರೂಪಣೆ ಭಾಗಶಃ ದುರ್ಬಲಗೊಂಡಂತಿದೆ. ಆದರೆ, ಶಿಲ್ಪಗಳು ಒಂದಕ್ಕೊಂದು ಪೂರಕವಾಗಬೇಕಿಲ್ಲ. ವಿವಿಧತೆ ಇರಬೇಕೆನ್ನುವ ಶಿಲ್ಪಿಗಳ ಮನೋಧರ್ಮಕ್ಕೆ ಸರಿಹೊಂದಬಹುದೆನ್ನಿಸುತ್ತದೆ. (ಚಿತ್ರ ಸಂಖ್ಯೆ–68 ಎ, ಬಿ, ಸಿ, ಡಿ).

ಪ್ರಬುದ್ಧತೆಯ ಪ್ರತೀಕವಾಗಿ ಕಿರಣ್‌ರವರು ಕಠಿಣ ಸಂಯೋಜನೆಗಳನ್ನು ಲೀಲಾಜಾಲವಾಗಿ ತಮ್ಮ ಶಿಲ್ಪಗಳಲ್ಲಿ ಕೆತ್ತುತ್ತಾ ಬಂದಿದ್ದಾರೆ. ಇದನ್ನು ತೋರ್ಪಡಿಸುವ ಒಂದು ಚತುರ್ಮುಖಿ ಶಿಲ್ಪದಲ್ಲಿ "ಪೂಜ್ಯನೀಯ ಪ್ರಣಾಮ" (Reverence) ಕೆತ್ತನೆ

ಮುಂದಿಟ್ಟುಕೊಂಡರೆ, ಬಾಕಿ ಉಳಿದ ಮೂರು ದಿಕ್ಕುಗಳಲ್ಲಿಯೂ ಕ್ರಮವಾಗಿ "ಸೃಷ್ಟಿಕರ್ತರು" (The Creators), "ಸಹಜ ಕೌಶಲ್ಯ" (Instinct) ಹಾಗೂ "ಸುಂದರಾಂಗಿಯ ಪ್ರಿಯತಮ–ಮೊಲ, ಗೂಳಿ, ಅಥವಾ ಅಶ್ವಮಾನವನೇ?" (A woman's Darling-Hare, Bull or Horseman?) ಕೆತ್ತನೆಗಳಿವೆ. ಇವುಗಳು ಗಂಡು–ಹೆಣ್ಣಿನ ನಡುವಿನ ಸಂಬಂಧಗಳ ಹಾಗೂ ಕಾಮನೆಗಳ ರೂಪಾನ್ವೇಶಣೆಗೆ ಹೊರಟ ಶಿಲ್ಪಗಳಂತಿವೆ (ಚಿತ್ರ ಸಂಖ್ಯೆ–69 ಎ, ಬಿ, ಸಿ, ಡಿ).

"ರಾಧಾಕೃಷ್ಣ ಪ್ರಣಯಕೇಳಿ" (Lord Krishna and Radha in amorous mood) ಶಿಲ್ಪದ ಉಳಿದ ಮೂರು ದಿಕ್ಕುಗಳಲ್ಲಿ ಕ್ರಮವಾಗಿ, "ಇಬ್ಬರು ಮಕ್ಕಳೊಡನೆ ಜೋಡಿ" (A couple with 2 kids-Family togetherness); "ಮೂವರು ಮಕ್ಕಳೊಡನೆ ಪ್ರೇಮಸಂಸಾರ" (A couple and three kids- A loving close-knit Family) ಮತ್ತು "ಶ್ರೀಮಂತನ ಪ್ರೇಮಕ್ಕೆ ಹವಣಿಸುವ ಲಲನೆಯರು" (Girls struggle to woo and win a rich man's love) ಶಿಲ್ಪಗಳಿವೆ. ನಯವಾದ ಸೊಗಸಾದ ಸಂಯೋಜನೆಯ ಶಿಲ್ಪಗಳಿವು (ಚಿತ್ರ ಸಂಖ್ಯೆ–70 ಎ, ಬಿ, ಸಿ, ಡಿ).

ಇದೇ ರೀತಿಯ ಇನ್ನೊಂದು ಚತುರ್ಮುಖಿ ಶಿಲ್ಪದಲ್ಲಿ ಒಂದು ದಿಕ್ಕಿನಲ್ಲಿ "ಚಂಚಲಬುದ್ಧಿಯ ಕಲ್ಪನಾಲಾಸ್ಯ" (Flight of Fancy) ಎನ್ನುವ ಕೆತ್ತನೆಯಿದ್ದು, ಬಾಕಿ ಮೂರು ದಿಕ್ಕುಗಳಲ್ಲೂ ಕ್ರಮವಾಗಿ, "ಸಂದೇಹಾಸ್ಪದ–ಸಂಬಂಧಗಳು" (A Fishy Affair), "ಪುಟಿದೇಳುವ ಚಿಲುವೆಯ ಜ್ವರ" (Spring Fever) ಹಾಗೂ "ಕೂಡುವಿಕೆಯ ಉನ್ಮಾದ" (Rendezvous) ಎನ್ನುವ ಶಿಲ್ಪಕೆತ್ತನೆಗಳಿವೆ. ಕ್ಲಿಷ್ಟ ಸಂಯೋಜನೆಯ ಈ ಸಮಕಾಲೀನ ಶಿಲ್ಪಗಳು ಒಂದು ರೀತಿಯ ಕಾವ್ಯಮಯವಾಗಿ, ಹೇಳಬೇಕಾದ್ದನ್ನು ಸರಸದಿಂದ ಹೇಳಿ, ವೀಕ್ಷಕನ ಚಿಂತನೆಗೆ ಊಟವನ್ನೂ ಬಡಿಸಿ, ಕಾಯುವಂತಿವೆ. ಅದ್ಭುತ ಕಲ್ಪನಾ ಶಿಲ್ಪವೆನಿಸುತ್ತದೆ (ಚಿತ್ರ ಸಂಖ್ಯೆ–71 ಎ, ಬಿ, ಸಿ, ಡಿ).

ಇಂತದ್ದೇ ಇನ್ನೊಂದು ಚತುರ್ಮುಖಿ ಶಿಲ್ಪದಲ್ಲಿ "ಕರ್ತವ್ಯಭಾರವನ್ನು ದೂಡುವ ಕೆಲಸಗಳ್ಳ"(An Escapist shooing away Duties) ಒಂದು ಕಡೆಯಲ್ಲಾದರೆ, "ಅಶ್ಲೀಲ ಕೋರಿಕೆ" (Indecent Proposal) ಮತ್ತೊಂದು ಕಡೆ ; ಹಾಗೆಯೇ ಇನ್ನೊಂದು ಕಡೆಯಲ್ಲಿ "ತಿರಸ್ಕಾರಕ ಕಪಾಳಮೋಕ್ಷ" (Rejection Slap) ಇದ್ದರೆ, ಮಗದೊಂದು ಕಡೆಯಲ್ಲಿ "ಹಳೇ ಪ್ರೇಮಿಯನ್ನು ನೆಚ್ಚಿ ನೇತಾಡುವವನು" (Clinging to an old Flame) ಶಿಲ್ಪವಿದೆ. ಈ ಚತುರ್ಮುಖಿ ಶಿಲ್ಪಗಳಲ್ಲಿ ರಂಧ್ರ ಮತ್ತು ಪೊಟರೆಗಳ ಕೆತ್ತನಾ ಕೌಶಲ್ಯ, ಲಾಲಿತ್ಯ ಸಂಯೋಜನೆ, ಮೇಣದಲ್ಲಿ ಕೊರೆದಂತಾ ನುಣುಪು, ಇವುಗಳು ಕಿರಣ್‌ರವರ ಸಾಮರ್ಥ್ಯಕ್ಕೆ ಪೂರಕವಾಗಿ ಕನ್ನಡಿ ಹಿಡಿದಂತಿದೆ (ಚಿತ್ರ ಸಂಖ್ಯೆ–72 ಎ,ಬಿ,ಸಿ,ಡಿ).

ಇದೇ ಕ್ರಮದಲ್ಲಿ ಇವರ ಇತ್ತೀಚಿನ ಒಂದು ಶಿಲ್ಪಾಕೃತಿ, ಸುಮಾರು 5 ಅಡಿ ಎತ್ತರವಿದ್ದು ಮುಂಭಾಗದಲ್ಲಿ "ಬುಡಕಟ್ಟು ಮಂತ್ರ ವೈದ್ಯ" (A Tribal witch-Doc) ಎನ್ನುವ ಶಿಲ್ಪವಿದ್ದು, ಹಿಂಭಾಗದಲ್ಲಿ "ಅನಾಮಧೇಯ ಸುಂದರಿ ಮತ್ತವಳ ಹಿಂಬಾಲಕರು" (Unknown Beauty and her weired admirers) ಶಿಲ್ಪಕೆತ್ತನೆಯಿದೆ. ಇದರ ಎಡಗಡೆಯಲ್ಲಿ "ಅಧಿನಾಯಕಿ ಅತ್ತೆ" (Bossy mother-in-law) ಸೊಸೆಯನ್ನು ತನ್ನ ಸಂಪೂರ್ಣ ಹತೋಟಿಯಲ್ಲಿಟ್ಟುಕೊಂಡಿರುವಂತೆಯೂ, ಬಲಗಡೆಯಲ್ಲಿ "ಒಳಗೆ ಸುಸ್ವಾಗತ" (Welcome aboard) ಎಂದು ಆಹ್ವಾನಿಸುವ ಲಲನಾಮಣಿಯ ವಿಡಂಬನಾತ್ಮಕ ಕೆತ್ತನೆಗಳಿವೆ (ಚಿತ್ರ ಸಂಖ್ಯೆ–73 ಎ, ಬಿ, ಸಿ, ಡಿ). ಒಂದೇ ಶಿಲೆಯ ನಾಲ್ಕು ದಿಕ್ಕುಗಳಲ್ಲೂ ನಾಲ್ಕು ವಿಧಗಳ ಶೀರ್ಷಿಕೆಗಳಿರುವ ಶಿಲ್ಪಗಳ ಹಬ್ಬದೂಟವಿಲ್ಲಿದೆ! ಈ ಶಿಲ್ಪದಲ್ಲಿ ಬಳಸಿರುವ ದೊಡ್ಡ ರಂಧ್ರ ಸಂಯೋಜನೆ ವಿನೂತನ ಸೃಷ್ಟಿ ! 'ರಂಧ್ರ' ಹಾಗೂ

'ತೂತು'ಗಳ ಶಿಲ್ಪ ಸಂಯೋಜನೆಯ ವಿಷಯದಲ್ಲಿ ಪುನಃ ವಿಶ್ವ ಶ್ರೇಷ್ಠ ಶಿಲ್ಪಿ "ಹೆನ್ರಿಮೂರ"ರ ಹೇಳಿಕೆಯನ್ನು ಪರಾಮರ್ಶಿಸಬಹುದು – "The liking for Holes came about from wanting to make space and three dimensional Form. It is the penetration through from the front of the Block to the Back. This was for me a revelation, a great effort. It was having the idea to do it that was difficult........" ಇಂತಹ ಕಷ್ಟಸಾಧ್ಯದ, ಶ್ರಮದ ಕೆತ್ತನೆಯನ್ನು ಲೀಲಾಜಾಲವಾಗಿ ಸಾಧಿಸಿರುವುದನ್ನು ಕಿರಣ್‌ರವರ ಈ ಶಿಲ್ಪದಲ್ಲಿ ಕಾಣುತ್ತೇವೆ.

## ಏಕಶಿಲೆ–ಪಂಚಮುಖಿ ಶಿಲ್ಪಗಳು (Five in one sculptures) :

ಒಂದೇ ಕಲ್ಲು ಐದು ಬೇರೆ ಬೇರೆ ಶಿಲ್ಪಗಳು ! ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಶಿಲ್ಪಗಳಾದರೆ, ಮೇಲ್ಗಡೆ ಐದನೆಯದು. ಇಂತಹ ಆರು(6) ಶಿಲ್ಪಗಳನ್ನು ಕಿರಣ್ ಕೆತ್ತಿರುತ್ತಾರೆ. ಇದರಲ್ಲಿ ಒಟ್ಟು 30 ವಿವಿಧ ಬಗೆಯ ಶಿಲ್ಪಗಳಿವೆ.

ಕೇವಲ ಎರಡು ಶಿಲ್ಪಗಳನ್ನಿಲ್ಲಿ ಅವಲೋಕನಕ್ಕೆ ಬಳಸಿಕೊಳ್ಳಲಾಗಿದೆ. ಒಂದು ದಿಕ್ಕಿನಲ್ಲಿ 'ಭವಿಷ್ಯ ತಿಳಿದವನು' (Fore sighted) ಕೆತ್ತನೆಯಿದ್ದರೆ, ಬಾಕಿ ಮೂರು ದಿಕ್ಕುಗಳಲ್ಲೂ ಕ್ರಮವಾಗಿ, "ಬಿಚ್ಚು ಮನಸ್ಸಿನವ" (Open minded), "ಪಕ್ಷಿಮಾನವ" (A Birdee man) ಹಾಗೂ "ರಹಸ್ಯ ಗರ್ಭಿತ ತಾಯಿ" (A misterious mother) ಎನ್ನುವ ಕೆತ್ತನೆಗಳಿವೆ. ಈ ಶಿಲ್ಪದ ಮೇಲ್ಗಡೆಯಲ್ಲಿ ಐದನೆಯ ಶಿಲ್ಪಕೆತ್ತನೆಯಾದ "ತಿಳಿ ತಲೆಯವನು" (Light headed) ಇದೆ (ಚಿತ್ರ ಸಂಖ್ಯೆ–74 ಎ, ಬಿ, ಸಿ, ಡಿ, ಇ).

ಇಂತದ್ದೇ ಮತ್ತೊಂದು ಪಂಚಮುಖಿ ಶಿಲ್ಪದಲ್ಲಿ ಎದಿರುಗಡೆ "ಹರ್ಷದ ಲೋಟ" (A cup of Joy) ಕೆತ್ತನೆಯಿದ್ದರೆ ಅದರ ಸುತ್ತ ಮೂರು ದಿಕ್ಕುಗಳಲ್ಲಿ ಕ್ರಮವಾಗಿ "ಮನೋ ವಿಕಲ್ಪ" (Hallucination), "ಹೊರೆ ಪೀಡಿತ" (Burdened) ಮತ್ತು "ಪ್ರೇಮಭರಿತ ಜಾಡಿ" (A Jar full of Love) ಎನ್ನುವ ಮೂರು ಶಿಲ್ಪ ಕೆತ್ತನೆಗಳಿವೆ. ಇದರ ಮೇಲ್ಗಡೆಯಲ್ಲಿ "ಪ್ರಾಣ ಚಿಲುಮೆ" (Fountain of Life) ಎನ್ನುವ ಐದನೆಯ ಕೆತ್ತನೆಯಿದೆ (ಚಿತ್ರ ಸಂಖ್ಯೆ–75 ಎ, ಬಿ, ಸಿ, ಡಿ, ಇ).

ಕಿರಣ್‌ರವರ ಬಹುಮುಖಿ ಶಿಲ್ಪಗಳ ಸಮೂಹದಲ್ಲಿ ಈ ಪಂಚಮುಖಿ ಶಿಲ್ಪಗಳು ಪೂರ್ಣ ಸಾಫಲ್ಯತೆ ಹೊಂದಿದಂತಿಲ್ಲ! ಐದನೆಯ ಶಿಲ್ಪವನ್ನು ವೀಕ್ಷಿಸಲು, ಮೇಲ್ಗಡೆ ಹತ್ತಿ ನೋಡಬೇಕಾದಂತ ಪ್ರಮೇಯವಿದ್ದು, ಅದನ್ನು ನೋಡಲು ಅಂತಹ ವ್ಯಾಮೋಹ ಬರುವುದಿಲ್ಲ. ಅಲ್ಲದೆ ಈ ಐದನೆಯ ಕೆತ್ತನೆಯಿಂದಾಗಿ ಒಟ್ಟಾರೆ ಶಿಲ್ಪದ ಸಂಯೋಜನೆಗೆ ಧಕ್ಕೆಬರುವ ಸಾಧ್ಯತೆಗಳಿವೆಯೇನೋ ಎನ್ನಿಸುತ್ತದೆ. ಅದೇನೇ ಇದ್ದರೂ ಸಹ, ಇವರ ಸೃಷ್ಟಿ ಪ್ರಕ್ರಿಯೆಯ ಸಾಹಸ ಸಾಧನೆಯನ್ನು (Creative Genious) ಮೆಚ್ಚಲೇ ಬೇಕು.

ಇವರ ಪ್ರಾರಂಭದ ಅನೇಕ ಬಹುಮುಖಿ ಶಿಲ್ಪಗಳನ್ನು ಚಪ್ಪಟೆಯಾಕಾರದ ಕಲ್ಲುಗಳಲ್ಲಿ ಕೆತ್ತಿರುತ್ತಾರೆ. ಇವುಗಳನ್ನು ನೋಡುವಾಗ ದುಂಡಗಿನ ಮೂರು ಆಯಾಮಗಳ (Three Dimensional) ಅನುಭವ ಅಷ್ಟಾಗಿ ಆಗುವುದಿಲ್ಲ. ಕಲ್ಲುಗಳ ಉಳಿತಾಯ ಮಾಡುವ ಉದ್ದೇಶ ಇವರಲ್ಲಿ ಆಗ ಬಹಳ ಇತ್ತೆನ್ನುವ ಸಂಶಯಬರುತ್ತದೆ. ಅವರ ಹೇಳಿಕೆಗಳೂ ಸಹ ಇದಕ್ಕೆ ಪುಷ್ಟಿಕೊಡುತ್ತವೆ. ಮುಂದೆ ಪ್ರಬುದ್ಧತೆಯ ಮೆಟ್ಟಿಲು ಏರಿದಂತೆಲ್ಲಾ ಕಿರಣ್‌ರವರ ಶಿಲ್ಪಗಳಲ್ಲಿ ಮೂರು ಆಯಾಮಗಳ ನೈಜ ಸೌಂದರ್ಯ ತಾನೇ ತಾನಾಗಿ ಹೊರಹೊಮ್ಮಿವೆ.

## ಕಾಷ್ಟ ಶಿಲ್ಪಗಳು (Wood carving) :

ಕಿರಣ್‌ರವರು ಸುಮಾರು 25 ರಿಂದ 30 ರಷ್ಟು ಕಾಷ್ಟ ಶಿಲ್ಪಗಳನ್ನೂ ಕೆತ್ತಿರುತ್ತಾರೆ. ಪ್ರಾರಂಭಿಕ ದಿನಗಳಲ್ಲಿ ಬೆಂಗಳೂರಿನ ಕಾಷ್ಟ ಶಿಲ್ಪಿ ಅಪ್ಪುಕುಟ್ಟನ್ ಆಚಾರ್ ರವರ ಪ್ರಭಾವದಿಂದಾಗಿ ಈ ಕೆತ್ತನೆ ಕೈಗೊಂಡರಾದರೂ ಸಹ, ಶಿಲೆಗಳೊಡನೆ ಗೆಳೆತನ ಬೆಳೆಸಿಕೊಂಡಂತೆ, ಇವುಗಳಿಗೆ ವಿರಾಮಕೊಟ್ಟಂತೆ ಅನ್ನಿಸುತ್ತದೆ !

ಕಾಷ್ಠ ಶಿಲ್ಪಗಳಿಗೆ ತೇಗದ ಮರ (Teak wood) ಬಹಳ ಸೂಕ್ತ ; ಇದರಲ್ಲಿ ಒಂದು ಬಗೆಯ ತೈಲಭರಿತ ತೇವಾಂಶವಿದ್ದು ಕೆತ್ತನೆಗೆ ತುಂಬ ಅನುಕೂಲ. ಆದರೆ ಬೀಟೆಮರ (Rose wood) ಗಟ್ಟಿ ಮರವಾದರೂ ಸಹ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಬೇರೆ ಬೇರೆ ವೈಶಿಷ್ಟ್ಯತೆಗಳನ್ನೊಳಗೊಂಡಿರುತ್ತವೆ. ಕಪ್ಪುಬಣ್ಣದ ವಿವಿಧ ಮಾದರಿಯ ಎಳೆಗಳಿರುವಂತದ್ದು ಸಾಮಾನ್ಯವಾದರೆ, ಕೆಂಬಣ್ಣ ಮಿಶ್ರಿತವಾದದ್ದು; ಕಲ್ಲುಪುಡಿ ಮಿಶ್ರಿತವಾದದ್ದು ಸಹ ಇವೆ. 50 ವರ್ಷ ಮೀರಿರುವ ಕಾಫಿಮರಗಳ ಬೇರು ಸಮೇತ ಕಿತ್ತ ಕಾಂಡದಿಂದ ನೈಸರ್ಗಿಕ ಗಂಟು ರಚನೆಗಳೊಡನೆ ಕೆತ್ತನಾಕ್ರಿಯೆ ಸಾಹಸಮಯ. ಕಾಡು ಮರಗಳಲ್ಲೂ ವಿವಿಧ ಬಗೆಯವು ಲಭ್ಯ.

ಇವರ "ಬೆಕ್ಕು" (Cat) (ಚಿತ್ರ ಸಂಖ್ಯೆ–76), "ಸುಂದರಿಯ ಚಿಂತೆ" (Beauty's worry) (ಚಿತ್ರ ಸಂಖ್ಯೆ–77) ಹಾಗೂ "ಯೋಚನಾಮಗ್ನ" (ಚಿತ್ರ ಸಂಖ್ಯೆ–78) ಮತ್ತು "ಪ್ರೇಮಾಂಕುರ" (ಚಿತ್ರ ಸಂಖ್ಯೆ–79) ಶಿಲ್ಪಗಳನ್ನು ಉದ್ಧರಿಸಬಹುದು.

## ಬಹುಮುಖಿ ಶಿಲ್ಪಕೆತ್ತನೆಯ ಸಾಧನೆಯ ಪಕ್ಷಿನೋಟ :

ಒದಗಿಬಂದ ಎಲ್ಲ ದಾಖಲೆಗಳನ್ನು ಪರಿಶೀಲಿಸಿದಾಗ ಕಿರಣ್‌ರವರ "ಏಕಶಿಲಾ–ಬಹುಮುಖಿ ಶಿಲ್ಪಗಳ" ಕೆತ್ತನೆಯ ಬೆಳವಣಿಗೆಯ ಒಂದು ಪಕ್ಷಿನೋಟವನ್ನು ಈ ಕೆಳಗಿನಂತೆ ಕಾಣಬಹುದಾಗಿದೆ.

| ಏಕಶಿಲಾ ಶಿಲ್ಪಗಳು | 2008ರಲ್ಲಿ ಇದ್ದಂತೆ | 2010 ರಲ್ಲಿ ಇದ್ದಂತೆ | 2012ರಲ್ಲಿ ಇದ್ದಂತೆ | 2015ರ ಪ್ರಾರಂಭದಲ್ಲಿ |
|---|---|---|---|---|
| 1 | 2 | 3 | 4 | 5 |
| 1. ದ್ವಿಮುಖಿ ಶಿಲ್ಪಗಳು | 22 | 33 | 52 | 76 |
| 2. ತ್ರಿಮುಖಿ ಶಿಲ್ಪಗಳು | 23 | 23 | 26 | 47 |
| 3. ಚತುರ್ಮುಖಿ ಶಿಲ್ಪಗಳು | 35 | 35 | 62 | 83 |
| 4. ಪಂಚಮುಖಿ ಶಿಲ್ಪಗಳು | 2 | 2 | 5 | 6 |
| **ಒಟ್ಟು** | **82** | **93** | **145** | **212** |

2008ರ ಹಿಂದೆ ಬಹಳಷ್ಟು ಏಕಶಿಲಾ ಶಿಲ್ಪಗಳನ್ನು ಕೆತ್ತುತ್ತಾ ಮಾರುತ್ತಾ ಇದ್ದ ಕಾರಣ "ಬಹುಮುಖಿ" ಶಿಲ್ಪಗಳ ವೃದ್ಧಿ ನಿಧಾನ. ಅಲ್ಲದೆ, 2008 ರಿಂದ 2010 ರ ಅವಧಿಯಲ್ಲಿ, ಹಿಂದೆ ಉಳಿದುಹೋಗಿದ್ದ ಅನೇಕ ಏಕ ಶಿಲ್ಪಗಳನ್ನು ಕೆತ್ತಿ ಮುಗಿಸಿದ್ದರಿಂದ 'ಬಹುಮುಖಿ' ಶಿಲ್ಪಗಳ ಕೆತ್ತನೆ ತುಂಬಾ ಕಡಿಮೆ. 2010ರಿಂದ ಈಚೆಗೆ ಕಿರಣ್‌ರವರ ಸಾಧನೆಯ ಓಟ ನಿಜಕ್ಕೂ ಬೆರಗಾಗುವಂತದ್ದು.

ಸಾಧಕನ ಸಾಧನೆ ಅರ್ಥವಾಗುವುದು ಕೇವಲ ಸಹೃದಯ ಕಲಾರಸಿಕರಿಗೆ ಮಾತ್ರ. ಪೂರ್ಣಗೊಂಡು ನಿಲ್ಲಿಸಿರುವ ಶಿಲ್ಪಗಳನ್ನು ನೋಡುವ ಶ್ರೀ ಸಾಮಾನ್ಯರಿಗೆ ಎಲ್ಲವೂ ಸಾಧಾರಣ ಅಥವಾ ಅದ್ಭುತ–ಎನ್ನಿಸಬಹುದು. ಆದರೆ, ಆ ಶಿಲ್ಪದ

ಸಾಧನೆಯ ಹಿಂದಿನ ನೋವು, ನಲಿವು, ಕಷ್ಟ, ಕಾರ್ಪಣ್ಯ, ಅವರಲ್ಲಿ ಎಲ್ಲರಿಗೂ ತಿಳಿಯಲಾಗದು ; ಇದು ಪೂರ್ಣ ಸಂಸ್ಕಾರದಿಂದ ಬರುವಂತದ್ದು ; ಸಾಧಕನನ್ನು ಅವನ ಸಾಧನೆಯನ್ನು ಅರಿತು ವಿಮರ್ಶಿಸುವ ಸಹೃದಯತೆ ಇಂದಿನವರಲ್ಲಿ ಕುಂಠಿತವಾಗುತ್ತಿದೆಯೇನೋ ಎನ್ನುವ ಸಂಶಯ ಪ್ರಸ್ತುತ ಶಿಲ್ಪಿ ಎ. ಕಿರಣ್ ಸುಬ್ಬಯ್ಯನವರ ವಿಷಯದಲ್ಲಿ ಪ್ರತಿಬಿಂಬಿತವಾಗುತ್ತದೆಂದರೆ ತಪ್ಪಲ್ಲ. ಕರ್ನಾಟಕದ ಸಮಕಾಲೀನ ಶಿಲ್ಪಕಲಾ ಕ್ಷೇತ್ರದ ಜೀವಂತ ಚೇತನವಾಗಿ ಇವರು ನಮ್ಮ ನಡುವೆ ಇದ್ದಾರೆನ್ನುವುದೇ ಒಂದು ದೊಡ್ಡ ಹೆಮ್ಮೆಯ ವಿಷಯ.

* * * * *

## ಸನ್ಮಾನ ಪುರಸ್ಕಾರಗಳು :

1976 : "ಕೂರ್ಗ್ ಅಸೋಸಿಯೇಷನ್ ಮೈಸೂರು" ಸಹಯೋಗದಲ್ಲಿ ಪ್ರದರ್ಶನ ಮತ್ತು ಸನ್ಮಾನ.

1976 : ಮೈಸೂರು ರೋಟರಿ ಸಂಸ್ಥೆ ಸಹಯೋಗದಿಂದ "ಪ್ರಥಮ ಏಕವ್ಯಕ್ತಿ ಶಿಲ್ಪಕಲಾ ಪ್ರದರ್ಶನ", (ಏಪ್ರಿಲ್) ಮತ್ತು ಸನ್ಮಾನ.

1987 : ಕೊಡವ ಸಮಾಜ, ವಿರಾಜಪೇಟೆ, ಸನ್ಮಾನ

1999 : ಕರ್ನಾಟಕ ರಾಜ್ಯ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ ಪ್ರಶಸ್ತಿ ಪುರಸ್ಕಾರ

2002 : 'ತೂಕ್ ಬೊಳಕ್' ಕೊಡವ ವಾರಪತ್ರಿಕೆ, ವಿರಾಜಪೇಟೆ ರವರಿಂದ ಸನ್ಮಾನ.

2005 : ಬಸವ ಕೇಂದ್ರ, ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಲಿಂಗೇಶ್ವರ ಮಠ, ಮೈಸೂರು ಇವರಿಂದ ಸನ್ಮಾನ.

2007 : "ರೋಟರಿ ಮೈಸೂರು ರಾಯಲ್" ಸಂಸ್ಥೆಯಿಂದ ಸನ್ಮಾನ ಮತ್ತು ಮೈಸೂರಿನ
ಕೊಡವ ಸಮಾಜದಿಂದ ಸನ್ಮಾನ.

2008 : ಮೈಸೂರು ದಸರಾ ಕಲಾಪ್ರದರ್ಶನ ಸಮಿತಿಯ ಸನ್ಮಾನ.

2009 : ಮೈಸೂರಿನ "ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ"ಯ ರಾಜ್ಯ ಸಮ್ಮೇಳನದ ಅಂಗವಾಗಿ ವಿರಾಜಪೇಟೆಯಲ್ಲಿ ಸನ್ಮಾನ.

ಕೊಂಗಂಡ ಕುಟುಂಬಸ್ತರಿಂದ ಮೈಸೂರಿನ ಹೊಟೇಲ್ "ರೂಸ್ಟ್" ನಲ್ಲಿ ಸನ್ಮಾನ

2010 : "ಅಂತರರಾಷ್ಟ್ರೀಯ ಗ್ರಾನೈಟ್ ಮತ್ತು ಸ್ಟೋನ್ ಫೇರ್" ಬೆಂಗಳೂರು.

"ಸ್ಟೋನಾ 2010" ಪುರಸ್ಕಾರ,

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ.

2011 : ಗುಲ್ಬರ್ಗದ "ಇಂಡಿಯನ್ ರಾಯಲ್ ಅಕಾಡೆಮಿ ಆಫ್ ಆರ್ಟ್ ಅಂಡ್ ಕ್ರಾಫ್ಟ್" ಸನ್ಮಾನ.

"ಜೆ.ಎಸ್.ಎಸ್. ಅರ್ಬನ್ ಹಾತ್" ನಲ್ಲಿ ನಡೆದ "ದಸರಾ ಕಲಾಮೇಳ" ದಲ್ಲಿ ಸನ್ಮಾನ.

"ಶತಮಾನೋತ್ಸವ" ಆಚರಣೆಯ ಸಂದರ್ಭದಲ್ಲಿ ಕೊಡವ ಸಮಾಜ, ಬೆಂಗಳೂರು ಇವರಿಂದ ಸನ್ಮಾನ.

* * * * *

## ಮಾಹಿತಿ :

ಶಿಲ್ಪಿ ಎ. ಕಿರಣ್ ಸುಬ್ಬಯ್ಯನವರ ಬಗ್ಗೆ ಅವರ ಶಿಲ್ಪಗಳ ಬಗ್ಗೆ ಹಾಗೂ ಶಿಲ್ಪಕಲಾ ಕೇಂದ್ರದ ಬಗ್ಗೆ ವಿಸ್ತೃತ ಮಾಹಿತಿಗಳಿಗಾಗಿ ಈ ಕೆಳಗಿನ ಆಧಾರಗಳನ್ನು ಉಪಯೋಗಿಸಿಕೊಳ್ಳಬಹುದು.

For detailed information on A. Kiran Subbaiah, his Sculptures and the Museum, the following medium may be utilised :

| | | |
|---|---|---|
| Mail address | : | A. Kiran Subbaiah, Sculptor<br>‘Shilpaniketan’, # 2203/61,<br>D 35, Behind “A.M. Calappa Corner”<br>New Sayyaji Rao Road,<br>Mysuru - 570 021<br>Karnataka State - INDIA |
| Phone | : | 0821-2494245 |
| Mobile | : | 97403 69852 |
| Web site | : | www.aksculptures.com |
| E-mail | : | aksculptures@gmail.com |
| Facebook | : | www.facebook.com / appaneravandakiransubbaiah |
| You tube | : | 1) multisided sculptures<br>2) aksculptures / kssculpture museum<br>3) Anna Support From Mysore |

## ಟಿಪ್ಪಣಿಗಳು :

1. **ಅಪ್ಪನೆರವಂಡ ಅಪ್ಪಚ್ಚ ಕವಿ (1868–1944) :**
ತನ್ನನ್ನು “ಹರದಾಸ” ನೆಂದು ಕರೆದುಕೊಂಡು, ಕೊಡವ ಭಾಷೆಯಲ್ಲಿ ಕನ್ನಡ ಲಿಪಿಯನ್ನು ಬಳಸಿಕೊಂಡು, ನಾಲ್ಕು ನಾಟಕಗಳನ್ನು ಬರೆದು, ಕೊಡವ ಭಾಷೆಯ ಲಾಲಿತ್ಯ ಹಾಗೂ ವೀರ್ಯವನ್ನು ಮೆರೆದ ಕೊಡವರ “ಆದಿಕವಿ”. ಹರಿಕಥೆ ನಡೆಸಿಕೊಡುತ್ತಿದ್ದರಲ್ಲದೆ, ತಮ್ಮ ನಾಟಕಗಳನ್ನು ತಾವೇ ನಿರ್ದೇಶಿಸಿ, ಪಾತ್ರವನ್ನು ನಿರ್ವಹಿಸಿ ಆಡಿದವರು. “ಶ್ರೀ ಕಾವೇರಿ ನಾಟಕ”, “ಸಾವಿತ್ರಿ ನಾಟಕ”, “ಸುಬ್ರಹ್ಮಣ್ಯ ನಾಟಕ” ಹಾಗೂ “ಯಯಾತಿ ನಾಟಕ” ಗಳನ್ನು ಬರೆದು ಕೊನೆಗೆ ತಮ್ಮ ಆತ್ಮಚರಿತ್ರೆಯನ್ನೂ ಸಹ ಪ್ರಕಟಿಸಿದವರು. ಇಡೀ ಕೊಡವ ಜನಾಂಗದ ಸಂಪ್ರದಾಯ, ಬದುಕು, ವೀರೋಚಿತ ನಡವಳಿಕೆಗಳನ್ನು, ಹಾಡುಗಳನ್ನು, ನಾಟಕಗಳ ಮುಖೇನ ಸೊಗಸಾಗಿ ಪ್ರಚುರಪಡಿಸಿದವರು. ಪ್ರಸ್ತುತ ಈ ಪುಸ್ತಕದ ಲೇಖಕರೂ, ಹಿರಿಯ ಕಲಾವಿದರೂ ಆಗಿರುವ ಎನ್.ಬಿ. ಕಾವೇರಪ್ಪನವರು ಈ “ಆದಿಕವಿಯ” ನಿಖರವಾದ ಭಾವಚಿತ್ರವನ್ನು 1987 ರಲ್ಲೇ ತೈಲವರ್ಣದಲ್ಲಿ ರಚಿಸಿದ್ದು, ಬೆಂಗಳೂರು ಕೊಡವ ಸಮಾಜದ ಸಭಾಂಗಣದಲ್ಲಿ, ಕೊಡುಗೆಯಾಗಿ ಪ್ರದರ್ಶಿಸಲಾಗಿರುತ್ತದೆ. ನಮ್ಮ ಶಿಲ್ಪಿ ಎ. ಕಿರಣ್ ಸುಬ್ಬಯ್ಯನವರು ಇದೇ ಕವಿಗಳ ಕುಟುಂಬಕ್ಕೆ ಸೇರಿದವರು.

2. ಎ) **2010 ರಲ್ಲಿ ನವಕರ್ನಾಟಕ ಪ್ರಕಾಶನದ 2951ನೇ ಪ್ರಕಟಣೆಯಾದ ಬೃಹತ್ "ಕರ್ನಾಟಕ ಕಲಾದರ್ಶನ"** (ಸಂ.ಪ್ರೊ॥ ಎಂ.ಎಚ್. ಕೃಷ್ಣಯ್ಯ ಮತ್ತಿಬ್ಬರು) ಸಂಪುಟ ಒಂದರಲ್ಲಿ "ಕರ್ನಾಟಕ ಶಿಲ್ಪಕಲೆಯ –
ಅಧ್ಯಾಯ 2–1 : ಸಾಂಪ್ರದಾಯಿಕ ಶಿಲ್ಪಕಲೆ (ಲೇಖಕರು : ಡಾ॥ ಶಿವಾನಂದ ಎಚ್. ಬಂಟನೂರ)
ಅಧ್ಯಾಯ 2–3 : ಆಧುನಿಕ ಶಿಲ್ಪಕಲೆ (ಲೇಖಕರು : ಶ್ರೀ ವೆಂಕಟಾಚಲಪತಿ)
ಅಧ್ಯಾಯ 2–5 : ಮೂರ್ತಿಶಿಲ್ಪ/ವ್ಯಕ್ತಿ ಶಿಲ್ಪ (ಲೇಖಕರು : ಕನಕಾಮೂರ್ತಿ)

ಬಿ) **"ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ"**
(ಲೇಖಕರು : ಕೆ.ವಿ. ಸುಬ್ರಹ್ಮಣ್ಯಂ, ಖ್ಯಾತವಿಮರ್ಶಕರು) ಪ್ರಕಟಣೆ : ಶಿಲ್ಪಕಲಾ ಅಕಾಡೆಮಿ 2007.

ಈ ಮೇಲಿನ ಎರಡು ಗ್ರಂಥಗಳಲ್ಲೂ, ಎಲ್ಲಿಯೂ ಸಹ ಶಿಲ್ಪಿ ಎ. ಕಿರಣ್ ಸುಬ್ಬಯ್ಯನವರ ಪ್ರಸ್ತಾಪವಾಗಿಲ್ಲ ; ಅವರ ಒಂದೇ ಒಂದು ಶಿಲ್ಪದ ಚಿತ್ರ ಸಹ ಪ್ರಕಟಿಸಿರುವುದಿಲ್ಲ. ಖ್ಯಾತ ಕಲಾ ಬರಹಗಾರರು, ಶಿಲ್ಪಿಗಳು, ತಾವೇ ಈ ಬಗೆಯ ಮರೆವನ್ನು ಪ್ರದರ್ಶಿಸಬಹುದೆ?

3. **ಕ್ಯಾಪ್ಟನ್ ಸಿ.ಪಿ. ರಾಜಾರಾಂ (1927–1961) :**
ಕೊಡಗಿನ ಮೂಲದ ಚೆಪ್ಪುಡಿರ ಪಿ. ರಾಜಾರಾಂ ಭಾರತದ ಸೈನಿಕದಳದಲ್ಲಿ ಕ್ಯಾಪ್ಟನ್ ಆಗಿದ್ದವರು. ತಮ್ಮ ಎಳೆಯ ವಯಸ್ಸಿನಲ್ಲೇ ಕಾಷ್ಟ ಶಿಲ್ಪಗಳ ಕಡೆಗೆ ಸ್ವಯಂ ಪ್ರೇರಣೆ, ಸ್ಫೂರ್ತಿಗಳಿಂದ ಆಕರ್ಷಿತರಾಗಿ ತಮ್ಮ ಜೀವಿತ ಕಾಲದಲ್ಲಿ ಅನೇಕ ನವ್ಯ ನವೀನ ಶಿಲ್ಪಗಳನ್ನು ಸೃಷ್ಟಿಸಿದವರು. ಭಾರತದ ಅಂದಿನ ಸಂದರ್ಭದಲ್ಲಿ ನವ್ಯ ಶಿಲ್ಪಗಳ ಪ್ರಥಮ ಪ್ರತಿಪಾದಕರಾದವರು. ಇವರ ಶಿಲ್ಪಗಳು ಬೆಂಗಳೂರಿನ ವೆಂಕಟಪ್ಪ ಕಲಾ ಗ್ಯಾಲರಿಯ ಒಂದು ಪ್ರತ್ಯೇಕ ಕೋಣೆಯೊಳಗೆ ಖಾಯಂ ಆಗಿ ಪ್ರದರ್ಶಿತವಾಗುತ್ತಿದೆ. ಕರ್ನಾಟಕಕ್ಕೆ ಒಂದು ಶೋಭೆಯನ್ನು ತಂದುಕೊಟ್ಟವರು. (ಸಿ.ಪಿ. ರಾಜಾರಾಂ. ಪ್ರಕಟಣೆ : ಕರ್ನಾಟಕ ಶಿಲ್ಪಕಲಾ ಅಕಾಡೆಮಿ, 2004. ಲೇಖಕರು : ಕೆ.ವಿ. ಸುಬ್ರಹ್ಮಣ್ಯಂ, ಖ್ಯಾತ ಕಲಾ ಬರಹಗಾರರು).

4. **"Mexican Art" (ಮೆಕ್ಸಿಕೋದ ಕಲೆ) :**
By Bernard Noel. Published By Tudor Publishing Co., New York, 1968. ಈ ಸಣ್ಣ ಪುಸ್ತಿಕೆಯಲ್ಲಿ "ಟಿ ಯೊಟಿಉಆಕನ್", "ಟಾಜಿನ್" ಹಾಗೂ "ಜಪೊಟೆಕ್" ಕಾಲದ (ಕ್ರಿ.ಪೂ. 300 ರಿಂದ ಕ್ರಿ.ಶ. 1500 ರವರೆಗೆ) ಶಿಲ್ಪಗಳ ಬಗ್ಗೆ ವಿಸ್ತೃತ ವಿವರಣಾತ್ಮಕ ವಿಮರ್ಶೆ ಇದೆ.

5. **ಹೆನ್ರಿ ಮೂರ್ (Henry Moore) 1898–1986–ಇಂಗ್ಲೆಂಡ್ :**
ತನ್ನ ಜೀವಿತಕಾಲದಲ್ಲಿಯೇ ದಂತಕಥೆಯಾದ ಇಪ್ಪತ್ತನೆಯ ಶತಮಾನದ ವಿಶ್ವಶ್ರೇಷ್ಠ ಶಿಲ್ಪಿ–ಕಲಾವಿದ. ಸಾವಿರಾರು ಶಿಲ್ಪಗಳನ್ನು ಸೃಷ್ಟಿಸುತ್ತಾ ಹೋದ ಈ ಮಹಾನ್ ಕಲಾಶಿಲ್ಪಿಯ "ತಾಯಿ–ಮಗು" ಶಿಲ್ಪಗಳು ಜಗತ್ಪ್ರಸಿದ್ಧ, ಲಿತೋಗ್ರಿಫಿಯಲ್ಲೂ ಎತ್ತಿದ ಕೈ. ಎಲ್ಲಾ ಬಗೆಯ ಮಾಧ್ಯಮಗಳನ್ನೂ ದುಡಿಸಿಕೊಂಡವರು. ಸಾರ್ವಜನಿಕ ಶಿಲ್ಪಗಳಿಗೆ ಏಕಮೇವಾ ದ್ವಿತೀಯ ; ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್ಲಾ ಬಗೆಯ ಮಹಾನ್ ಪುರಸ್ಕಾರಗಳನ್ನು ಪಡೆದವರು. ಶಿಲ್ಪಗಳ ಬಗೆಗಿನ ನೋಟವನ್ನೇ ಬದಲಿಸಿದ ವ್ಯಕ್ತಿ. 1987 ರಲ್ಲಿ ಇವರ ನೂರಾರು ಶಿಲ್ಪ–ಚಿತ್ರಗಳ ಪ್ರದರ್ಶನ, ನವದೆಹಲಿಯಲ್ಲಿ ನಡೆಸಲಾಗಿತ್ತು. (Henry Moore, New Delhi 1987, Sculptures, drawings and graphics 1922 to 1984, published by British Council). ಈ ಪುಸ್ತಕದ ಲೇಖಕರೂ ಸಹ ಈ ಪ್ರದರ್ಶನದ ನೋಟ, ಅನುಭವಕ್ಕಾಗಿ ಒಂದು ವಾರ ನವದೆಹಲಿಯ "ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್"ಗೆ ಹೋಗಿದ್ದರು (ಕರ್ನಾಟಕ ಲಲಿತಕಲಾ ಅಕಾಡೆಮಿ ಕೃಪೆ–1987).

6. **ರೋಡಿನ್ (Rodin)- Sculptures 1886-1917 :**
Book by - Cecile Goldscheider, Published by Tudor Publishing Co., New Yark, 1964. ಈ ಪುಸ್ತಕದಲ್ಲಿ, ತನ್ನ ಕಾಲದ ಅತ್ಯಂತ ಪ್ರಗತಿಪರ ಶಿಲ್ಪಿಯಾದ ರೋಡಿನ್‌ನ ಕೆಲವು ಶಿಲ್ಪಗಳ ತುಲನಾತ್ಮಕ ವಿಮರ್ಶೆಯನ್ನು

ನಾವು ಕಾಣುತ್ತೇವೆ. ಫ್ರಾನ್ಸ್ ದೇಶದ ರಾಜಧಾನಿಯಾದ ಫ್ಯಾರಿಸ್‌ನ "ಮ್ಯೂಸಿಯಂ ರೋಡಿನ್" ನಲ್ಲಿ ಈತನ ಅನೇಕ ಶಿಲ್ಪಗಳ ಖಾಯಂ ಸಂಗ್ರಹ ಹಾಗೂ ಪ್ರದರ್ಶನವಿದೆ.

* * * * *

## ಸಂಪಾದಕೀಯ ಲೇಖನ

ಮೈಸೂರಿನ ಬಂಬೂಬಜಾರ್‌ನಲ್ಲಿರುವ ಕಿರಣ್‌ಸುಬ್ಬಯ್ಯನವರ ಶಿಲ್ಪ ಕಲಾಗ್ಯಾಲರಿ ನೋಡಿದಾಗ ನಾನು ಇದುವರೆವಿಗೂ 45ವರ್ಷಗಳಿಗಿಂತ ಮಿಗಿಲಾಗಿ ಬೆಂಗಳೂರಿನಲ್ಲಿ ನಡೆದಿರುವ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಚಿತ್ರಕಲಾ ಶಿಬಿರ, ಮತ್ತು ಶಿಲ್ಪ ಶಿಬಿರ ಮತ್ತು ಪ್ರದರ್ಶನಗಳನ್ನು ನೋಡಿ ಪತ್ರಿಕೆಗಳಿಗೆ ಬರೆದಿದ್ದೇನೆ. ಅವರೊಡನೆ ಚರ್ಚಿಸಿದ್ದೇನೆ. ಅವರು ಮಾಡಿರುವ ಶಿಲ್ಪಕ್ಕೂ ಅವರು ಕೊಡುವ ವಿವರಕ್ಕೂ ಸಂಬಂಧವಿಲ್ಲದಂತಿರುವುದನ್ನು ಸಹ ಕಂಡಿದ್ದೇನೆ. ಕೊನೆಗೆ ಅಂತಹ ಶಿಲ್ಪಗಳನ್ನು ಕುರಿತು ವಿಮರ್ಶಾತ್ಮಕವಾಗಿ ಬರೆದದ್ದು ಉಂಟು.

ಆದರೆ ಕಿರಣ್‌ಸುಬ್ಬಯ್ಯನವರ ಶಿಲ್ಪಗಳು ಎಂತಹವರಿಗೂ ಅರ್ಥವಾಗುವಂತಿವೆ. ಆನಂದಿಸುತ್ತಾ ಇರಬಹುದು. ಅಂದ ಮಾತ್ರಕ್ಕೆ ನಮ್ಮ ದೇವತಾಮೂರ್ತಿಗಳು ಒಂದೇ ನಮೂನೆಯಲ್ಲಿರುವ ವ್ಯಾಳಿ, ಪ್ರಭಾವಳಿ, ಪೀಠ, ಅಭಯ ಮತ್ತು ವರದಹಸ್ತ ಒಳಗೊಂಡಂತೆ ಕಾಣುವಂತಹವಲ್ಲ. ಇವರ ಶಿಲ್ಪಗಳಲ್ಲಿ ವಿಷಯವಿದೆ. ವೈವಿದ್ಯತೆ ಇದೆ. ಹೆಚ್ಚಿನ ಶಿಲ್ಪಗಳಲ್ಲಿ ಕನಸಿನ ಕನ್ಯೆಯ ಮೈಮಾಟ, ಆಲಿಂಗನ, ಚುಂಬನ, ಆರ್ದತೆ, ರಾಗ, ಅನುರಾಗ, ಕಥೆ, ವ್ಯಥೆ ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಕವಿ ಕಾಳಿದಾಸ, ರನ್ನ, ಇತ್ತೀಚಿನ ಕುವೆಂಪು ಮತ್ತಿತರರು ಬೇರೆ ಬೇರೆ ದೃಷ್ಟಿಕೋನಗಳಿಂದ ನಾಯಕ ನಾಯಕಿಯನ್ನು ಶಬ್ಧಗಳಲ್ಲಿ ವೈಬವೀಕರಿಸಿದಂತೆ, ಸುಬ್ಬಯ್ಯನವರು ತಮ್ಮ ಶಿಲ್ಪಗಳಲ್ಲಿ ಕೆತ್ತನೆ ಮಾಡಿದ್ದಾರೆ.

ಇವರ ಶಿಲ್ಪಗಳಲ್ಲಿನ ವಿಶೇಷತೆ ಎಂದರೇ ಒಂದೇ ಕಲ್ಲಿನ ಶಿಲ್ಪವನ್ನು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ನೈರುತ್ಯ, ಈಶಾನ್ಯ ಹೀಗೆ ಹಲವು ದಿಕ್ಕುಗಳಿಂದ ನೋಡಬಹುದಾಗಿದ್ದು, ಒಂದೊಂದು ದಿಕ್ಕಿನಿಂದ ನೋಡಿದಾಗ ಒಂದೊಂದು ಅನುಭವವನ್ನು ನೀಡುತ್ತವೆ. ಒಂದು ಕಡೆ ಇದ್ದ ಹಾಗೆ ಮತ್ತೊಂದು ಕಡೆ ಇಲ್ಲ. ಕೆಲವನ್ನು ಉಜ್ಜಿ, ಉಜ್ಜಿ ನಯಗೊಳಿಸಿ ಕೆಲವು ಭಾಗಕ್ಕೆ ಮೇಣದಿಂದ ನುಣುಪುಗೊಳಿಸಿ, ಮತ್ತೆ ಆಶಿಲ್ಪದೊಂದು ಭಾಗವನ್ನು ಒರಟಾಗಿಸಿ ಉಳಿ ಕೆತ್ತನೆಯ ಕುರುಹುಗಳನ್ನು ಉಳಿಸಿದ್ದಾರೆ. ಮತ್ತೆ ಹಲವೆಡೆ ರಂಧ್ರ ಕೊರೆದು ಆ ದಪ್ಪದಲ್ಲಿಯೂ ಮತ್ತೊಂದನ್ನು ಸೃಷ್ಟಿಸಿದ್ದಾರೆ. ಪ್ರತಿ ದಿಕ್ಕಿನಲ್ಲಿ ಕಾಣುವ ಆ ನೋಟಕ್ಕೆ

ಒಂದೊಂದು ಹೆಸರನ್ನು ಇಳಿಗೆತ್ತನೆಯ ಮೂಲಕ ಪೀಠ ಭಾಗದಲ್ಲಿ ಕೆತ್ತಿದ್ದಾರೆ. ಇವೆಲ್ಲವೂ ಒಂದಕ್ಕೊಂದು ಪೂರಕ ಹಾಗೂ ಪ್ರೇರಕವಾಗಿವೆ.

ಒಟ್ಟಾರೇ ಹೇಳುವುದಾದರೇ ಕವಿ ಸಾಳ್ವನು ತನ್ನ 'ರಸರತ್ನಾಕರ'ದಲ್ಲಿ ಹೀಗೆ ಹೇಳುತ್ತಾನೆ.

"........... ಎಲ್ಲಾ ರಸದೊಳ್ಂ ಶೃಂಗಾರ ರಸಮೆ ಲೋಕಕ್ಕೆ ಸೊಗಯಿಪುದಾದ ಕಾರಣಮೆ ಮೊದಲೊಳೀ ಶೃಂಗಾರ ರಸಂ ಪೇಳೆಪಟ್ಟುದು........." ನಂತರದ ಕವಿ ನಿಜಗುಣ ಶಿವಯೋಗಿಯು ತಮ್ಮ ವಿವೇಕ ಚಿಂತಾಮಣಿಯಲ್ಲಿ "........... ರತಿಯೊಂದೇ ತಾಂತಾದಿ ವಿಷಯಕಮಾಗಿ ರಾಗಮಯ ವಹತನದಿಂ ಶೃಂಗಾರ ಸಂಜ್ಞೆಯಂ ಪಡೆವುದು ........." ಹೀಗೆ ಮುಂದುವರೆಸಿ ಶೃಂಗಾರ ರಸದಲ್ಲಿಯೇ ಎಂಟು ರಸಗಳು ಅಡಗಿರುವುದನ್ನು ವಿವರಿಸುತ್ತಾರೆ.

ಶಬ್ಧಗಳಲ್ಲಿ ದಾಖಲಿಸಿರುವ ಶೃಂಗಾರ ರಸವನ್ನು ಕಿರಣ್‌ಸುಬ್ಬಯ್ಯನವರು ತಮ್ಮ ಸಮಕಾಲೀನ ಶಿಲ್ಪಗಳಲ್ಲಿ ದೃಶ್ಯವಾಗಿಸಿದ್ದಾರೆನ್ನಬಹುದು. ಹೀಗೆಂದ ಮಾತ್ರಕ್ಕೆ ಪೂಜಾ ಮೂರ್ತಿಗಳನ್ನು ಮಾಡಿಲ್ಲವೆಂದು ಭಾವಿಸುವ ಹಾಗಿಲ್ಲ. ಒಂದಲ್ಲಾ ಎರಡಲ್ಲಾ ನೂರಾರು ಮಾಡಿ ಭಕ್ತರ ಬೇಡಿಕೆಯಂತೆ ಪುರಾಣ ದೇವತೆಗಳು ಕೆತ್ತನೆ ಮಾಡಿಕೊಟ್ಟಿದ್ದಾರೆ. ಇವರ ಮತ್ತೊಂದು ಶಿಲ್ಪ "ಗಿನ್ನಿಸ್ ದಾಖಲೆ" ಸೇರಬಹುದಾದಂತಹದ್ದು ಹಲವು ಹೆಡೆಗಳ ನಾಗ ದೇವತಾ ಶಿಲ್ಪ.

ಇಂತಹ ಅಪಾರ ಪ್ರಮಾಣದ ಸಮಕಾಲೀನ ಶಿಲ್ಪಗಳನ್ನು ಮಾಡಿರುವ ಕಿರಣ್‌ಸುಬ್ಬಯ್ಯನವರ ಬಗೆಗೆ ಯಾರು ಗಮನ ವಹಿಸದೇ ಇರುವಾಗ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರು ಸ್ವತಃ ತಾವೇ ಬಂದು ನೋಡಿ ಇಂತಹ ಶಿಲ್ಪಿಗೆ ರಾಷ್ಟ್ರಮಟ್ಟದ ಪ್ರಶಸ್ತಿ ದೊರಕಬೇಕಾಗಿತ್ತು. ಇದುವರೆವಿಗೂ ಗುರುತಿಸದಿರುವುದು ವಿಶಾದನೀಯ ಎನ್ನುತ್ತಾ ಇರವ ಶಿಲ್ಪಗಳ ಸಾರವನ್ನು ಕುರಿತೊಂದು ಪುಸ್ತಕವನ್ನಾದರೂ ಬರೆಯಿಸುವುದು ಒಳ್ಳೆಯದೆಂದು ಕಿರಣ್‌ಸುಬ್ಬಯ್ಯನವರ ಆಪ್ತ ಮಿತ್ರರಾದ ಹಾಗೂ ಒಂದೇ ಊರಿನವರಾದ ಕಲಾವಿದ ಶ್ರೀ ಎನ್.ಬಿ.ಕಾವೇರಪ್ಪನವರಿಗೆ ಬರೆಯಲು ತಿಳಿಸಿದುದು ಸಮಂಜಸವೇ ಆಗಿದೆ.

ಹಾಗೆಯೇ ಕಾವೇರಪ್ಪನವರು ಸಹ ಅವರ ಶಿಲ್ಪಗಳ ಸಾರವನ್ನು ಹಾಗೂ ಜೀವನ ಕ್ರಮವನ್ನು ಶಬ್ಧಗಳಲ್ಲಿ ಚೆನ್ನಾಗಿಯೇ ದಾಖಲಿಸಿದ್ದಾರೆ. ಪುಸ್ತಕ ಪ್ರಕಟವಾಗಲು ಸಹಕಾರ ನೀಡಿದ ಅಕಾಡೆಮಿಯ ರಿಜಿಸ್ಟ್ರಾರ್ ಅವರಿಗೂ ಮತ್ತು ಪುಸ್ತಕ ಸಂಪಾದನೆಯ ಜವಾಬ್ದಾರಿಯನು ನನಗೆ ವಹಿಸಿಕೊಟ್ಟು ಸಹಕರಿಸಿದ ನನ್ನ ಜೊತೆಗಿನ ಎಲ್ಲಾ ಅಕಾಡೆಮಿಯ ಸದಸ್ಯರಿಗೂ ಹಾಗೂ ಲೇಖಕರಿಗೂ ನನ್ನ ಅಭಿನಂದನೆಗಳು.

**ಎಲ್.ಶಿವಲಿಂಗಪ್ಪ**
ಸಂಪಾದಕರು